ಸಂಚಯ

೨೫

ಕಾವ್ಯ ಸಂಭ್ರಮ


ಅಂಕುರ್ ಬೆಟಗೇರಿ


ಆನಂದ ಈ ಕುಂಚಿಕನೂರ



ಆನಂದ ಋಗ್ವೇದಿ


ಆರೀಫ್ ರಾಜಾ


ಉಗಮ ಶ್ರೀನಿವಾಸ


ಒಕ್ಕುಂದ ಎಂ.ಡಿ.


ಕಸ್ತೂರಿ ಬಾಯರಿ


ಕೃಷ್ಣಮೂರ್ತಿ ಬಿಳಿಗೆರೆ


ಗೀತಾ ಹೆಗಡೆ


ಚಂದ್ರಿಕಾ ಪಿ.



ಚಂದ್ರಶೇಖರ ಐಜೂರು


ಚಂದ್ರು ತುರವೀಹಾಳ್


ತಾಜುಮಾ


ತಾರಿಣಿ ಶುಭದಾಯಿನಿ


ನಾಗರಾಜ ವಸ್ತಾರೆ


ನಿಂಗಪ್ಪ ಮುದೇನೂರ


ಪ್ರಹ್ಲಾದ್ ಡಿ.ವಿ.


ಫಾಲ್ಗುಣಗೌಡ


ಭಾರತೀದೇವಿ ಪಿ.


ಮಮತಾ ಜಿ. ಸಾಗರ

ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ತ್ರೈಮಾಸಿಕ

ಸಂಪುಟ : ೧೬

ಸಂಚಿಕೆ : ೨(೭೫)

ಅಕ್ಟೋಬರ್ ೨೦೦೭

ಸಂಪಾದಕ :

ಡಿ.ವಿ. ಪ್ರಹ್ಲಾದ್

ಚಂದಾವಿವರ

ವಾರ್ಷಿಕ ಚಂದಾ : ರೂ. ೧೫೦/-

ಎರಡು ವರ್ಷಕ್ಕೆ : ರೂ. ೩೦೦/-

ಐದು ವರ್ಷಕ್ಕೆ : ರೂ. ೬೫೦/-

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ,

೬ನೇ ಬ್ಲಾಕ್, ೩ನೇ ಹಂತ,

೩ನೇ ಘಟ್ಟ ಬನಶಂಕರಿ

ಬೆಂಗಳೂರು - ೫೬೦ ೦೮೫

ಫೋನ್ ನಂ. ೦೮೦-೨೬೭೯೧೯೨೫

ಮೊಬೈಲ್: ೯೮೪೪೦ ೬೩೫೧೪

email:

prahlad118@yahoo.com

ನೀವು ಬೆಳೆಸಿದ ಹೂಗಳು

ನಿಮ್ಮ ನೆನಪಿಗೆ

ಸಂಚಯದ ನೈತಿಕ ಬೆನ್ನೆಲುಬಾಗಿದ್ದ

ಚಿ. ಶ್ರೀನಿವಾಸರಾಜು ಅವರಿಗೆ

ಈ ಸಂಚಿಕೆಯಲ್ಲಿ...

ಕಾವ್ಯ ಸಂಭ್ರಮ

೧.	ಅರುಣ್ ಜೋಳದ ಕೂಡ್ಲಿಗಿ	ಬೆಳದಿಂಗಳ ಬೀಜ
೨.	ಅಂಕುರ್ ಬೆಟಗೇರಿ	ಖುಷಿ
೩.	ಆನಂದ ಈ ಕುಂಚನೂರ	ಆ್ಯಂಟೆನಾ ಮತ್ತು ಕಾಗೆ
೪.	ಆನಂದ ಋಗ್ವೇದಿ	ನಿನ್ನ ನೆನಪಿಗೊಂದು ನವಿಲು ಗರಿ ಸಾಕು
೫.	ಆನಂದ ಸಿ. ಲಕ್ಕೂರ	ಸೂರ್ಯನ ಬಚ್ಚಿಡಬಹುದೆ?
೬.	ಆರೀಫ್ ರಾಜಾ	ಕೇಳಾ ಕೆಳದಿ ಪ್ರಳಯಕಾಲದವಳ
೭.	ಉಗಮ ಶ್ರೀನಿವಾಸ	ಅಲೆಮಾರಿ ನದಿ ಎದುರು ಮೂರು ಇರುಳು
೮.	ಒಕ್ಕುಂದ ಎಂ.ಡಿ.	ಬೀಗ ಮತ್ತು ಬಾಗಿಲು
೯.	ಕಸ್ತೂರಿ ಬಾಯರಿ	ಬೋರಂಗಿ
೧೦.	ಕವಿತಾ ರೈ	ಸೂರ್ಯನ ಸಮಜಾಯಿಸಿಕೆ
೧೧.	ಕೃಷ್ಣಮೂರ್ತಿ ಬಿಳಿಗೆರೆ	ಮಧ್ಯಮ ಜೀವಿಯ ಗದ್ಯಗೀತೆ
೧೨.	ಗೀತಾ ಹೆಗಡೆ	ನಾಭಿಯೊಳಗಿನ ಶಬ್ದ
೧೩.	ಚೇತನಾ ಹೆಗಡೆ	ಮಗು
೧೪.	ಚಂದ್ರಿಕಾ ಪಿ.	ದಸರೆಯ ಬೊಂಬೆಗಳು
೧೫.	ಚಂದ್ರಮಾಗಡಿ ಡಿ.ಆರ್.	ಆಮುಖಾ ಈಮುಖಾ
೧೬.	ಚಂದ್ರಶೇಖರ ಐಜೂರು	ಅಲ್ಲಾಹುವಿನ ದಯೆ ಈ ಮಳೆಗಿರಲಿ
೧೭.	ಚಂದ್ರು ತುರವೀಹಾಳ್	ಕಣ್ಣಲ್ಲಿ ಬಣ್ಣದ ಲಾಂದ್ರ
೧೮.	ಛಾಯಾ ಭಗವತಿ	ಬಾಲ್ಯ ಮತ್ತು ಒಂದೆರಡು ಚಿತ್ರಗಳು
೧೯.	ಜ್ಯೋತಿ ಗುರುಪ್ರಸಾದ್	ಲಯ
೨೦.	ತಾಜುಮಾ	ಧ್ವಜ ಕಂಬ
೨೧.	ತಾರಿಣಿ ಶುಭದಾಯಿನಿ ಆರ್.	ಅಭಿನಯ
೨೨.	ದೀಪಾ ಹಿರೇಗುತ್ತಿ	ಭಾನುವಾರದ ಬೆಳಗಿನ ೧೦ ನಿಮಿಷ
೨೩.	ನಾಗಣ್ಣ ಕಿಲಾರಿ	ರೆಕ್ಕೆ ನಲುಗಿದ ಮೇಲೆ ಹೂವಿನ ಧೂಳು

೨೪.	ನಾಗರಾಜ ವಸ್ತಾರೆ	ಏನಾದರೂ ಆಗಬಹುದು
೨೫.	ನಾರಾಯಣಸ್ವಾಮಿ ಕೆ.ವೈ.	ದೂರಿ ಪದ
೩೬.	ನಿಂಗಪ್ಪ ಮುದೇನೂರ	ಚರಿತ್ರೆಯ ನೆರಳಿನಲ್ಲಿ
೨೭.	ಪಾಶ ಶಿ.ಜು.	ಮಸ್‌ಜೀದಿನ ಬೀದಿಯಲ್ಲಿ
೨೮.	ಪ್ರಹ್ಲಾದ್ ಡಿ.ವಿ.	ಮೆಟ್ಟಲಾರದ ಮುಗಿಲು
೨೯.	ಫಾಲ್ಗುಣ ಗೌಡ	ಅನಾವರಣಗೊಳ್ಳದ ಪ್ರತಿಮೆ
೩೦.	ಬಾಲಸುಬ್ರಹ್ಮಣ್ಯ ಕೆ.ವಿ.	ನೆನಪೊಂದು ನವರಾತ್ರಿ
೩೧.	ಭಾರತೀದೇವಿ ಪಿ.	ದಿನಚರಿ
೩೨.	ಮಮತಾ ಜಿ. ಸಾಗರ	ಮಗ್ಗುಲಾದರೆ ರಾತ್ರಿ
೩೩.	ಮಂಜುನಾಥ ವಿ.ಎಂ.	ಪಾದ್ರಿಯ ಮದ್ಯ ಚಿತ್ರ
೩೪.	ಮಲ್ಲಿಕಾರ್ಜುನಗೌಡ ತೂಲನಹಳ್ಳಿ	ಸೆಪ್ಟೆಂಬರ್ ೧೧ರ ಅಪವೇಳೆಯಲಿ
೩೫.	ಮೃತ್ಯುಂಜಯ ಕೆ.ಪಿ.	ಆತುಮ
೩೬.	ಮೋಹನ್ ಜಿ.ಎನ್.	ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
೩೭.	ಯಲ್ಲಪ್ಪ ಟಿ.	ಅಕ್ಕ, ಚಿಟ್ಟೆ ಮತ್ತು ಗಾಳಿಪಟ
೩೮.	ರಘುನಾಥ ಚ.ಹ	ಮೂರನೇ ಜಾವದಿ ಬಿದ್ದ ನಾಲ್ಕು ಕನಸುಗಳು
೩೯.	ರಮೇಶ್ ಎಚ್.ಆರ್.	ಮುಖ
೪೦.	ರಮೇಶ್‌ಬಾಬು ಚೀಮನಹಳ್ಳಿ	ನಕ್ಷತ್ರ ನದಿ
೪೧.	ರವಿ ದ್ರಾವಿಡ	ಒಂದು ಹೂಜಿ ಮತ್ತು ಕವಣೆ ಏಟು
೪೨.	ರವೀಂದ್ರಕುಮಾರ್ ಜಿ.ಕೆ.	ಅಧಿಕ ಚರಿತ್ರೆ
೪೩.	ರಶೀದ್ ಬಿ.ಎಂ	ನಿನಗೆ ನಾನು ಹುಟ್ಟಿದ ನಿಮಿಷ
೪೪.	ರಾಮಪ್ಪ ಮಾದಾರ	ನನ್ನ ಕಪ್ಪು ಪ್ರತಿಬಿಂಬ
೪೫.	ರಾಮಲಿಂಗಪ್ಪ ಟಿ. ಬೇಗೂರು	ಸಂಕರಮೂರ್ತಿ
೪೬.	ರಾಮಸ್ವಾಮಿ ಟಿ.ಎಸ್	ಅಗ್ನಿಸೂಕ್ತ
೪೭.	ರಾಮಸ್ವಾಮಿ ಡಿ.ಎಸ್.	ನವನೀತವಾಗುವುದಕ್ಕೆ...
೪೮.	ರೂಪಶ್ರೀ ಎನ್.ಆರ್.	ಹಸಿರ ಹೊರೆ
೪೯.	ರೂಪ ಹಾಸನ	ಪ್ರತಿಫಲ
೫೦.	ರೋಸಿ ಡಿಸೋಜ	ದೇವರ ದನ
೫೧.	ಲಲಿತಾ ಸಿದ್ಧಬಸವಯ್ಯ	ವಕ್ರೀಭವನ
೫೨.	ಲಾವಣ್ಯ ಪ್ರಭಾ	ಒದ್ದೆ ಮಣ್ಣಿನ ತುಂಬಾ ಚುಕ್ಕೆ ಚಿತ್ತಾರ
೫೩.	ವನಮಾಲಾ ಕಟ್ಟೇಗೌಡರ	ಗಿಳಿಯು ಪಂಜರದೊಳಿಲ್ಲ

ಹೊಳೆದದ್ದು ತಾರೆ ಉಳಿದದ್ದು ಆಕಾಶ

ಪ್ರಿಯ ಓದುಗರೇ,

ಇದು ಸಂಚಯದ 'ಕಾವ್ಯ ಸಂಭ್ರಮ'; ಎಪ್ಪತ್ತೈದನೆಯ ಸಂಚಿಕೆ. ಪತ್ರಿಕೆ ಕಳೆದ ೨೦ ವರ್ಷಗಳ ಪ್ರಕಟಣೆಯ ದಾರಿಯಲ್ಲಿ ಗುರುತಿಸಿ ಜೊತೆಗೂಡಿಸಿಕೊಂಡಿರುವ ಹೊಸ ಕವಿಗಳ 'ಕಾಮನಬಿಲ್ಲು' ನಿಮ್ಮ ಕೈಯಲ್ಲಿದೆ. ತೊಂಭತ್ತರ ದಶಕದಿಂದ ಈಚೆಗೆ ಬರೆಯುತ್ತಿರುವವರ ನವಿರು ಧ್ವನಿಗಳು ಇಲ್ಲಿವೆ.

ಇವತ್ತು ಕಾವ್ಯ ಪ್ರಕಾರ ಜಾಗತೀಕರಣದ ಅಬ್ಬರದ ಎದುರಲ್ಲಿ ತಬ್ಬಿಬ್ಬುಗೊಂಡರೂ ತನ್ನದೇ ಆದ ಸತ್ವ ಹಾಗೂ ಶಕ್ತಿಗಳಿಂದ ಅಂತರ್ಮುಖಿಯಾಗಿ ಯಾವತ್ತಿನ ಹಾಗೆ ತನ್ನೊಳಗೇ ಮುದುರಿಕೊಂಡು ನಮ್ಮ ಸಮುದಾಯದ ಆತ್ಮಸಾಕ್ಷಿಯ ಹಾಗಿದೆ. ವೈವಿಧ್ಯತೆ ಬಹುಮುಖೀ ನಿಲುವುಗಳು ಕಾವ್ಯವನ್ನು ಇನ್ನಷ್ಟು ಸಮೃದ್ಧ ಹಾಗೂ ಪಕ್ವಗೊಳಿಸಿವೆ. ಕೆಲವು ದಶಕಗಳ ಹಿಂದಿದ್ದ ಏಕಧಾರೆಯ ಕಲ್ಪನೆಯು ಮಸುಕಾಗಿಯೂ ಚಳುವಳಿಗಳ ಒತ್ತಡವಿಲ್ಲದೆ ಕಾವ್ಯ ಬಹು ಆಯಾಮ ಪಡೆದು ಪುಷ್ಪವಾಗಿದೆ. ಇದು ಹಿಂದಿನ ಹಾಗೆ ಕಾವ್ಯಕ್ಕೆ ತಕ್ಕಡಿ ಹಿಡಿಯುವವರ ಧೋರಣೆಗಳನ್ನು ನಿರಾಕರಿಸಿ ಇದರ ಹೊಸತನ ಹಾಗೂ ವೈವಿಧ್ಯತೆ ಶಕ್ತಿಗಳನ್ನು ಗುರುತಿಸುವ ಸೂಕ್ಷ್ಮತೆ, ಬೇರೆಯದೇ ನೆಲೆಯಲ್ಲಿ ಅಗತ್ಯವಿದೆ. ಗೆಳತಿ ಮಮತಾ ಜಿ. ಸಾಗರ ಹೇಳುವ ಹಾಗೆ – 'ಕಾಲದ ಕನ್ನಡಿಯಲ್ಲಿ ಹಳೆಯ ಬಿಂಬವನ್ನೇ ಯಾಕೆ ಮೇಲಿಂದ ಮೇಲೆ ಹುಡುಕಬೇಕು'; ಯಾವುದು ಚಿರಪರಿಚಿತವೋ ಅದನ್ನು ನೋಡುವ, ಗುರುತಿಸುವ ಕೆಲಸ ಸುಲಭ. ಭಿನ್ನವಾದದ್ದಕ್ಕೆ ಪರಿಶ್ರಮ ಸೂಕ್ಷ್ಮತೆ ಹಾಗೂ ತೆರೆದ ಮನಸ್ಸು ಅಗತ್ಯವಾಗುತ್ತದೆ.

ಕಾ|ವ್ಯ|ಸಂ|ಭ್ರ|ಮ|

ಹೊಸಬರ ಕಾವ್ಯ ತನ್ನ ಸುತ್ತಲ ಬದುಕಿನ ಎಲ್ಲವನ್ನೂ ಒಳಗೊಂಡಿದೆ. ಚಳುವಳಿಗಳಿಂದ ರೂಪುಗೊಂಡ ತಾತ್ವಿಕ ಎಚ್ಚರ ಒಂದು ಕಡೆಗಾದರೆ ಅವುಗಳ ಮಿತಿಗಳ ಬಗೆಗಿನ ತಿಳುವಳಿಕೆ ಮೌನವಾಗಿ ತನ್ನ ಕೆಲಸ ಮಾಡತೊಡಗಿದೆ. ಮನುಷ್ಯನ ಅನೇಕ ಮೂಲಭೂತ ಬಿಕ್ಕಟ್ಟುಗಳು ಸಂದಿಗ್ಧಗಳು ನೋವು ಹತಾಶೆಗಳೇನೂ ಬದಲಾಗಿಲ್ಲ. ಅವುಗಳ ಸ್ವರೂಪದಲ್ಲಿ ನೋಡುವ ಕ್ರಮದಲ್ಲಿ ಕಾವ್ಯದ ಮಟ್ಟಿಗೆ; ಹೊಸ ಕವಿಗಳ ಗ್ರಹಿಕೆ ಹಾಗೂ ಅಭಿವ್ಯಕ್ತಿ ವಿಧಾನ ಭಿನ್ನವಾದದ್ದಾಗಿದೆ. ಜೊತೆಗೆ ಪರಂಪರೆಯಿಂದ ಪಡೆದುಕೊಂಡ ಮಾದರಿಗೂ ಹಾಸುಹೊಕ್ಕಾಗಿದೆ. ಉದಾಹರಣೆಗೆ ಕಳೆದ ಎರಡು ದಶಕದ ದಲಿತ ಕಾವ್ಯದ ಮುಂದುವರಿಕೆಯಾಗಿ ಬರೆಯುತ್ತಿರುವ ಹೊಸ ಕವಿಗಳು ತಮ್ಮ ಯಾವತ್ತಿನ ಸಾಮಾಜಿಕ ಅಸಮಾನತೆ ಬಗ್ಗೆ ಶೋಷಣೆಯ ಬಗ್ಗೆ ಧ್ಯಾನಿಸಿಯೂ ಕಾವ್ಯಾತ್ಮಕವಾಗಿ ಅದರ ಅಭಿವ್ಯಕ್ತಿಯ ಯಶಸ್ಸನ್ನು ಸಾಧಿಸುತ್ತಿದ್ದಾರೆ. ಘೋಷಣೆಯಾಗದ ಹಾಗೆ ನವ್ಯಕಾವ್ಯದ ವ್ಯಕ್ತಿ ನಿಷ್ಠತೆ ಹಾಗೂ ಬಂಡಾಯದ ಸಮಾಜ ಮುಖಿತ್ವ ಎರಡೂ ಮೇಳೈಸಿ ಏಕ-ಅನೇಕಗಳು ಐಕ್ಯಗೊಂಡು ಕವಿತೆಯ ತುರ್ತು ಏಕಕಾಲಕ್ಕೆ ವ್ಯಕ್ತಿಗತವೂ, ಸಾಮಾಜಿಕವೂ ಆಗಿದೆ.

ಕಾವ್ಯಕ್ಕೆ ಪ್ರಮುಖ ಪೋಷಣೆಯಾಗಿ ಅದಕ್ಕೊಂದು ಸಂವಹನದ ವಾಹಕವಾಗಿ ಮುದ್ರಣ ಮಾಧ್ಯಮದ ಪಾತ್ರ ಬಹುದೊಡ್ಡದು. ದೃಶ್ಯ ಮಾಧ್ಯಮಗಳಾದ ಟೀವಿ, ಸಿನಿಮಾಗಳ ಮಿತಿ ಅವುಗಳ ವ್ಯಾಪಾರೀ ನಿಷ್ಠೆಯ ಸರಳೀಕರಣದ ಕಾರಣಕ್ಕೆ ಉತ್ತಮ ಕಾವ್ಯದಿಂದ ಅವು ದೂರವೇ ಉಳಿಯುತ್ತಿವೆ.

ಕನ್ನಡ ನಿಯತಕಾಲಿಕೆಗಳು ದೊಡ್ಡ ದಿನಪತ್ರಿಕೆಗಳು ಕಾಲದಿಂದ ಕಾಲಕ್ಕೆ ಚಳವಳಿಗಳ ಸಂದರ್ಭದಲ್ಲಿ ಹೊಸ ಕಾವ್ಯದ ಕೈಹಿಡಿದು ಪೋಷಿಸಿದ್ದು ಈಗ ಇತಿಹಾಸ. ಅವು ತಮ್ಮ ಯಾವತ್ತಿನ ವಾಡಿಕೆಯ ಬಲದಿಂದ ಕಾವ್ಯ ಪ್ರಕಟಣೆಗೆ ಮುಂದಾದರೂ ಮಾರ್ಕೆಟ್ ಇಲ್ಲದ ಕಾವ್ಯವನ್ನು ವ್ಯಾಪಾರೀ, ಸ್ಪರ್ಧಾತ್ಮಕ ಒತ್ತಡಗಳ ಎದುರು ಉಳಿಸಿಕೊಳ್ಳಲಾದೀತೆ ಎನ್ನುವುದು ಈ ಕಾಲದ ಆತಂಕದ ವಿಷಯ.

ಇನ್ನು ಕವಿತೆಯನ್ನು ಹಾಡುವ ಪ್ರಯತ್ನಗಳು ಹೊಸತು ಕಾಣದೆ ಹಳೆಯ ಪ್ಲೇಟುಗಳಲ್ಲೇ ಗಿರಕಿ ಹೊಡೆಯುತ್ತಿವೆ. 'ಕವಿಗೋಷ್ಠಿಗಳು' ನಮ್ಮಲ್ಲಿ ಕಳೆಗಟ್ಟುವುದೇ ಇಲ್ಲ. ಕವಿಗಳು ಅಥವಾ ಒಳ್ಳೆಯ

ಕವಿತೆಗಳನ್ನು ಓದುವಂಥವರು ನಮ್ಮ ಅನೇಕ ಉತ್ತಮ ಕವಿತೆಗಳನ್ನು 'ವಾಚನ' ಮಾಡುವ ರಸವತ್ತಾಗಿ ನಿರೂಪಿಸುವ ದಿಕ್ಕಿನೆಡೆಗೆ ಆಲೋಚಿಸಬೇಕಾಗಿದೆ.

ಮುದ್ರಣ ಸೌಕರ್ಯ ಪ್ರಕಟಣೆಯ ಅನುಕೂಲಗಳು ಹೆಚ್ಚಿದಂತೆಲ್ಲಾ ವ್ಯಾಪಾರದ ದೃಷ್ಟಿಯಿಂದ ಲಾಭದಾಯಕವಲ್ಲದ ಕಾವ್ಯ ಪ್ರಕಟಣೆ ಪ್ರಮುಖವಾದ ಪ್ರಕಾಶಕರ, ಪುಸ್ತಕ ಮಾರಾಟಗಾರರ ಅವಕೃಪೆಗೆ ಒಳಗಾಗಿದೆ. ಆದರೂ ಹವ್ಯಾಸಿಗಳು, ಕಾವ್ಯಾತುರರ ಶ್ರದ್ಧೆ, ಶ್ರಮ, ಹಣದ ವಿನಿಯೋಗದಿಂದ ಕವನ ಸಂಕಲನಗಳು ಪ್ರಕಟಗೊಳ್ಳುತ್ತಿವೆ. ಆದರೆ ನಮ್ಮ ಎಲ್ಲಾ ಕನ್ನಡ ಪುಸ್ತಕಗಳ ಹಾಗೆ ಕವನ ಸಂಕಲನಗಳು ತಲುಪುವ ಬಿಕ್ಕಟ್ಟಿನಲ್ಲಿ ಅಕ್ಕಪಕ್ಕದ ಜಿಲ್ಲೆಗಳನ್ನೂ ದಾಟಲಾರದೆ ಸೊರಗುತ್ತಿದೆ. ಇಲ್ಲಿ ಹಣವಿಲ್ಲದ್ದರಿಂದ ಅಂಥಾ ಉದ್ಯಮಶೀಲತೆ ಇಲ್ಲ, ಇದೊಂದು ಕ್ಷೇತ್ರ ವಿಶಿಷ್ಟ ಮುಗ್ಧತೆ ಹಾಗೂ ಬದ್ಧತೆಗಳನ್ನು ಉಳಿಸಿಕೊಂಡಿದೆ. ಎಷ್ಟು ದಿನವೋ ಗೊತ್ತಿಲ್ಲ. ಉದ್ಯಮಶೀಲತೆ ಕಾವ್ಯ ಪ್ರಕಟಣೆಯ ಭಾರವನ್ನು ನಿರಾಕರಿಸಿದರೂ ವರ್ಷವೊಂದಕ್ಕೆ ಕನ್ನಡ ಪುಸ್ತಕ ಪ್ರಕಟಣೆಯಲ್ಲಿ ಅತಿ ಹೆಚ್ಚು ಬೆಳಕು ಕಾಣುವುದು ಕವನ ಸಂಕಲನಗಳೇ. ಮಾಧ್ಯಮಗಳಲ್ಲೂ ಸಣ್ಣಕತೆಗೆ ಹೋಲಿಸಿದರೆ ಕಾವ್ಯದ ಗ್ಲಾಮರ್ ತೀರಾ ಕಳಪೆ. ದೃಶ್ಯ/ಕಲಾವಿದರಿಗೆ – ಟೀವಿ ಮುಂತಾದ ಮೀಡಿಯಾಗಳ ಕಲಾವಿದರಿಗೆ ಹೋಲಿಸಿದರೆ ಕವಿಗಳು ಬಹಳ ಬಡವರು ಹಾಗೂ ಅದೇ ಹಳೇ ಮಾದರಿ ಸೈಕಲ್ಲು ಶೂರರು. ಪ್ರಮುಖ ದಿನಪತ್ರಿಕೆಗಳಲ್ಲಿ ಕವಿತೆಯೊಂದು ಪ್ರಕಟಗೊಂಡರೆ ಕೊಡುವ ಸಂಭಾವನೆ ಕೆಲವು ನೂರು ರೂಪಾಯಿಗಳು. ಒಂದು ಸಾವಿರ ರೂಪಾಯಿಯೂ ಒಂದು ಕವಿತೆಗೆ ಗೌರವ ಧನವಾಗಿ ದಕ್ಕುವುದಿಲ್ಲ, ಇದು ನಾಚಿಕೆಗೇಡು.

ಇಲ್ಲಿನ ಎಪ್ಪತ್ತೈದು ಕವಿಗಳ ಎಪ್ಪತ್ತೈದು ಕವಿತೆಗಳನ್ನು ಕುರಿತು ಹೇಳುವುದಾದರೆ; ಬಹುಮುಖಿ ಸಂವೇದನೆಯುಳ್ಳ ಬದುಕಿನ ಅಸಂಖ್ಯ ಮುಖಗಳಿಗೆ ಸೃಜನಶೀಲ ಅಭಿವ್ಯಕ್ತಿಯೂ ಬಹುಮುಖವಾಗಿದೆ. ಇಲ್ಲಿರುವ ಕವಿಗಳ ಇತರ ಕವಿತೆಗಳು ಉತ್ತಮ ಅಂತ ಅನ್ನಿಸಿದರೂ ವಸ್ತುವಿನಲ್ಲಿ ಹೊಸತನ, ಹೇಳುವ ಕ್ರಮದಲ್ಲಿನ ಲವಲವಿಕೆ ಹೊಸ ರೀತಿಯ ಮಂಡನೆ ಹಾಗೂ 'ಇವತ್ತಿನ ವಿದ್ಯಮಾನಗಳ ಕುರಿತು ಸ್ಪಂದನೆಯುಳ್ಳ ಕವಿತೆಗಳನ್ನು ಆರಿಸಿ ಜೋಡಿಸಲಾಗಿದೆ. ಎಪ್ಪತ್ತೈದು ಕವಿತೆಗಳು ನಾವೇ ಹಾಕಿಕೊಂಡ ಮಿತಿಯಾದ್ದರಿಂದ ಉಳಿದ ಅನೇಕ ಉತ್ತಮ ಕವಿಗಳನ್ನು ಇಲ್ಲಿ ಒಳಗೊಳ್ಳಲು ಸಾಧ್ಯವಾಗಿಲ್ಲ, ಸಂಪಾದಕನಾಗಿ ನನ್ನ ಆಯ್ಕೆ ಹಾಗೂ

ಮಿತಿಗಳು ಈ ಸಂಚಯದ ಗುಣದೋಷಗಳನ್ನು ನಿರ್ಧರಿಸುತ್ತವೆ. ಆದರೆ ಇಲ್ಲಿರುವ ಕವಿಗಳು ಭರವಸೆ ಹುಟ್ಟಿಸಿ, ನಾಳೆ ಉತ್ತಮ ಕಾವ್ಯ ಕೊಡಬಲ್ಲ ದಾರಿಯವರು ಎನ್ನುವುದನ್ನು ಯಾವ ಅಳುಕಿಲ್ಲದೆ ಆತ್ಮವಿಶ್ವಾಸದಿಂದ ಹೇಳಬಲ್ಲೆ.

ಇಲ್ಲಿನ ಕವನಗಳು ಕವಿಗಳ ಹೆಸರಿನ ಅಕಾರಾದಿಯಲ್ಲಿವೆ. ಕವಿತೆ ಮಾತ್ರ ನಿಮ್ಮನ್ನು ಎದುರುಗೊಂಡು ಕವಿಯ ಹೆಸರಿಗೆ ನೀವು ಪರಿವಿಡಿಗೆ ಹೋಗಬೇಕಾಗಿದೆ. ಪಕ್ಕದಲ್ಲಿ ಬರೆದವರ ಹೆಸರಿಲ್ಲದ ಕವಿತೆ ಓದುವುದೂ ಒಂದು ವಿಶಿಷ್ಟ ಅನುಭವ.

ಈ ಸಂಚಿಕೆಯನ್ನು ಸಿದ್ಧಗೊಳಿಸುವ ಹಂತದಲ್ಲಿ ನನ್ನ ಪ್ರೀತಿಯ ಮೇಷ್ಟ್ರು ಜಿ. ಶ್ರೀನಿವಾಸರಾಜು ನಮ್ಮನ್ನಗಲಿದ್ದಾರೆ. ಅದರ ತಬ್ಬಲಿತನ ಬಹು ಕಾಲ ಕಾಡುತ್ತದೆ. ಗೆಳೆಯರಾದ ಡಿ.ಎಸ್. ರಾಮಸ್ವಾಮಿ, ಚ.ಹ. ರಘುನಾಥ, ಭಗವತಿ, ಟಿ.ಯಲ್ಲಪ್ಪ, ನಂದಿನಿ ಮುಂತಾದವರ ನೆರವು ಈ ಸಂಚಿಕೆಯ ಹಿನ್ನೆಲೆಗಿದೆ. ಅವರೆಲ್ಲರಿಗೂ ಕೃತಜ್ಞತೆಗಳು. ಯಾವತ್ತಿನ ಹಾಗೆ ಗುರು ಪ್ರಸಾದ್ ಮತ್ತು ಗುರುಮೂರ್ತಿ ಇವರಿಬ್ಬರ ಸಹಕಾರ ಈ ಸಂಚಯವನ್ನು ಸಜ್ಜುಗೊಳಿಸಿದೆ.

ಮತ್ತೆ ಮುಂದಿನ ಸಂಚಿಕೆಗೆ ಆದಷ್ಟು ಬೇಗ.

ನಿಮ್ಮ
ಸಂಪಾದಕ

೧. ಬೆಳದಿಂಗಳ ಬೀಜ

ಭೂಮಿಯ ಆರದ ಗಾಯ
ಮೇಲಣ ನಮ್ಮೆಜ್ಜೆಗಳ
ಸತ್ತ ಸಪ್ಪಳದ ನಿನಾದ !
ಇಡೀ ದಿನವನ್ನು ಪ್ರತಿ ಸಂಜೆ ಉಡಿ ತುಂಬಿದಾಕೆ
ಮೊಲೆಹಾಲ ಸಾಗರದಿ ಮಗುವಿಗೆ ಈಜು ಕಲಿಸುತಿಹಳು !

ಕೆಟ್ಟ ಗಡಿಯಾರದ ದಿನಚರಿಯಲ್ಲಿ ಚಲಿಸದ ಸೂರ್ಯ
ಮತ್ತೀಗ ಭೂಮಿಯ ಮೇಣದ ಅವತಾರಕ್ಕೆ
ಖುಷಿಗೊಂಡವರ ಕತ್ತಲೆಗೆ ದೀಪದಾ ಕನಸು !

ಜನಸಾಗರದಲ್ಲಿ ಎಷ್ಟೊಂದು ಹಳ್ಳಗಳ ಹರಿವು
ಇತ್ತಿತ್ತಲಾಗಿ ಮಳೆಗೆ ಕೆಂಪು ಬಣ್ಣ ಬಳಿಯಲಾಗಿದೆ
ಆದರೂ ಕೊರಕಲು ಗುಂಡಿ ಕೆರೆ ನದಿಗಳಿಗೆಲ್ಲಾ
ಮಳೆ ಮನುಷ್ಯನ ಪಾಠ ನಡೆದಿದೆ !

ಕತ್ತಲೂರಿನಿಂದ ತೂರಿ ಬರುವ ಕವಣೆ ಕಲ್ಲುಗಳು
ಮುತ್ತೈದೆಯರ ಉಡಿ ತುಂಬ ಮದ್ದನ್ನಿಕ್ಕಿದವರಿಗೆ ಗುರಿಯಿಟ್ಟಿವೆ !

ಭಯಾನಕ ಕತ್ತಲ ಕಾನನದಿ ಅದೆಷ್ಟೋ ಜನ
ಉಸಿರುಗಟ್ಟಿ ಮುಷ್ಟಿ ಬಿಗಿ ಹಿಡಿದಿದ್ದಾರೆ !
ಕೈ ತುಂಬ ಬೆಳದಿಂಗಳ ಬೀಜಗಳಿವೆ...
ಉತ್ತಿ ಬಿತ್ತಿ ಬೆಳದಿಂಗಳ ಬೆಳೆ ಬೆಳೆಯುವ
ಕನಸ ಹೊತ್ತು ಸಾಗಿದ್ದಾರೆ...
ಹೆಜ್ಜೆ ಇಟ್ಟಷ್ಟೂ ದೂರ ದೂರಕೆ ಅವರ ನೆಲವ
ಮತ್ತಾರೋ ಕದ್ದೊಯ್ಯುತ್ತಿದ್ದಾರೆ !

೨. ಖುಷಿ

ಅಕ್ಕಾ ಖುಷಿ ಎಲ್ಲಿ ಇರುತ್ತದೋ
ಅಲ್ಲಿ ಬಾಗಿಲು ಎಂಬುದು ಇಲ್ಲ
ಅದು ಜಾಗ ಸೃಷ್ಟಿಸುತ್ತದೆ

ಕಟ್ಟಿಗೆಗಳು ಬೆಂಕಿಯಾಗುತ್ತವೆ
ಏನು ಉಳಿಯುತ್ತದೋ ಅದು ಖುಷಿಯಲ್ಲ
ಏನು ನಡೆಯುತ್ತದೋ ಅದು ಖುಷಿ

ನಮ್ಮ ಬೀಗಗಳೆಲ್ಲ ಆಗ ನಿರುಪಯುಕ್ತವಾಗುವುವು
ಬಂಡೆಗಳನ್ನು ಏರಿ ಕುಳಿತವರೂ
ಸುಮ್ಮನೆ ಜಿಗಿದು ಕುಪ್ಪಳಿಸುವರು.

ನಡಿಗೆಯಿಂದ ಹಾರುವುದನ್ನು ಕಲಿಸುತ್ತದೆ ಖುಷಿ
ಆದರೆ ರೆಕ್ಕೆ ಬಿಟ್ಟು ಹೋಗುವುದಿಲ್ಲ
ಹೃದಯದ ಹೂಜಿ ಉರುಳಿ ಸುಗಂಧ ಹರಡುತ್ತದೆ
ಕೈಯಲ್ಲುಳಿಯುವುದಿಲ್ಲ

ಖುಷಿಯಲ್ಲಿ ಕವಿ ಬರೆಯುತ್ತಾನೆ
ಖುಷಿಯನ್ನು ಹಿಡಿದಿಡುವ ಯಾವ ಶಬ್ದವೂ
ಜಗತ್ತಿನಲ್ಲಿಲ್ಲ

ಮನುಷ್ಯನ ದೇಹದಿಂದ ಖುಷಿ ಹೊಮ್ಮುತ್ತದೆ
ಆದರೆ ಅದನ್ನು ಪೆಟ್ಟಿಗೆಯಲ್ಲಿಟ್ಟು ಕೂರಲು
ಪ್ರತಿ ಕ್ಷಣ ಅವನು ಒದ್ದಾಡುತ್ತಾನೆ.

೩. ಆ್ಯಂಟೆನಾ ಮತ್ತು ಕಾಗೆ

ಈ ಧೂಳು
ನಮ್ಮ ಉಸಿರಿನಿಂದಲೆ
ಮುಖ ತೊಳೆದುಕೊಂಡಂತೆ
ಮೈದಡವಿಕೊಂಡೇಳುತ್ತದೆ
ಮತ್ತೆ ಹೊಸದಾಗುತ್ತದೆ.

ಬಿಸಿಲು ಕಣ್ಣೀರು ಸುರಿಸುವುದು
ಬೆವರ ಮಣಿಯಂತಾಗಿ
ಹೊಟ್ಟೆ ತೊಳೆಸಿ ಜೀವ ಹಳಸುತಿರುವಂತೆ...
ಮತ್ತೀಗ ಆ ಗಟಾರು ವಾಸನೆ
ನಿವಾಳಿಸಿ ಒಗೆದಂತೆ ಹಬ್ಬಿ
ಊರೆಲ್ಲ ಮಬ್ಬು ಕಾರ್ಮೋಡ,
ಕಾರ್ಮೋಡವೇ ಆಗಿ
ಬಿದ್ದರೆ ಎಂಥ ಮಳೆ ಅಂತೀರ?

ಹುಚ್ಚು ತರಂಗಕೆ ಬೆಚ್ಚುವ ಪತಂಗ
ಅದರುತಿವೆ ಬಾವಲಿ, ಹೆದರುವ ಹಕ್ಕಿ ಮರಿ
ಹಗಲು ಕತ್ತಲು.
ಚಂದ್ರ ಭೂಮಿಯ ಲಾಂದ್ರ
ರಾತ್ರಿ ಹೊತ್ತ ಸಾವಿರ ಸೂರ್ಯ
ನುಗ್ಗುವ ರಭಸ ನಿಂತಲ್ಲೇ ಧ್ಯಾನಸ್ಥ ಚಕ್ರ
ದಾರಿ ಚಕ್ರತೀರ್ಥ!

ಕಾಗೆ ಹಸಿದಿದೆ ಆ್ಯಂಟೆನಾ ಮೇಲಿದೆ
ಕಾಳು ನೆಲದ ಮೇಲಿದೆ
ಹಸಿವಿಗೆ ಹಲವು ತೊಡಕು, ತಡಿಕೆ ತಡಕಾಡುವ ತನಕ
ಎಲ್ಲಾ ಹೊತ್ತಿಗೂ ತುತ್ತಿಗೂ ಉತ್ತರ
ಮೇಲಿಂದ–
ಮೇಲೆ!

೪. ನಿನ್ನ ನೆನಪಿಗೊಂದು ನವಿಲುಗರಿ ಸಾಕು

೧

ನಿನ್ನ ನೆನಪಿಗೊಂದು ನವಿಲುಗರಿ ಸಾಕು
ರಾಧೆ, ಮಣ್ಣಾಗಿಸದಂತೆ ಎತ್ತಿ ಮುಡಿದಿದ್ದೇನೆ ಮುಡಿಗೆ

ದುಗುಡ ತುಂಬಿದ ಕಣ್ಣ ದಿಗಿಲಿನಂಗಳದಲ್ಲಿ
ಬಯಕೆ ನವಿಲು ಪಟಪಟಿಸಿ ಬಿಚ್ಚಿದೆ ರೆಕ್ಕೆ

ಬಾ ಕೊಡು ಬಾ ಕೊಡು ಬಾ ಪ್ರೀತಿ;
ತೆಳುಗರಿಯ ಕಣ್ಣ ನೀಲಿಯಲ್ಲದ್ದಿದಂತೆ – ಕನಸು

ನರ್ತಿಸಿ ನರ್ತಿಸುತ್ತದೆ ನವಿಲು, ಎದೆಯ ಮಾತಿನ ಭಾರ
ಹದ ತಪ್ಪದ ಮಾತು ತುಟಿಗೆ ಬಂದು ತುಳುಕಿದ್ದು ಮೌನ.

ಕಣ್ಣೀರಲ್ಲದ್ದಿದ ಮಿದು ಮಾತು ಉಗ್ಗಡಿಸಿದೆ ಗಂಟಲಲ್ಲಿ
ಸೆರೆಯುಬ್ಬಿ ಹೊರಬಂದ ಧ್ವನಿ – ತೇವ.

ನಿನ್ನ ರೂಪವ ಹೀರಿ ಕಣ್ಣು ಮಿಂದಿವೆ ರೆಪ್ಪೆ ಮುಚ್ಚಿ
ತಿಳಿನೀರ ಆಳದಲ್ಲಿ ನಿನ್ನದೇ ಬಿಂಬ.

ದ್ವಾರಕೆ ಕರೆಯುತಿದೆ ಕೈಬೀಸಿ ಕರಕರೆಯ ಕರೆಯೋಲೆ
ನೀನು ಕಳಿಸಿದೆ ಎಂದೇ ನಾನು ಹೊರಟಿದ್ದೇನೆ ಒಂಟಿ.

೨

ನಡೆದ ಹಾದಿಯ ತುಂಬಾ ಬರಿಯ ಬಿಸಿಲಿತ್ತು, ಬಯಲು
ನೆಲದ ಮೇಲೆಲ್ಲಾ ಖರಪುಟದ ಗಾಲಿಯುರುಳು

ಪಗಡೆ ಉರುಳಿದವು ಇಲ್ಲಿ ಪಟಬಾವುಟಗಳು ಹಾರಾಡಿ
ನೆಲಕೆ ಬಿದ್ದವು ರಾಧೆ ಹಲವು ರುಮಾಲು.

ಈ ಹಗಲಿಗೂ ಇಂದು ಸಂಜೆಯ ಬಣ್ಣ
ನೀಲಿ ನಗರಾವಳಿಯ ನಭಕ್ಕು ಮುಸುಕಿ – ಕೆಂಪು

ಈ ಜನರ ಆಕ್ರಂದನ ಚೀತ್ಕಾರಕೆ ದನಿಗೂಡಿಸಿ ಹಾಡು
ಹಾಡಬೇಕಿದೆ ಈ ನನ್ನ ಕೊಳಲು.

ನೊಂದ ಎದೆಯಲ್ಲಿ ಕತ್ತಲು ತುಂಬಿದ ಈ ಹೊತ್ತು
ಹಣತೆ ಹಚ್ಚಬೇಕಿದೆ ನನ್ನ ಕಣ್ಣ ಬೆಳಕು

ನಾನಿಲ್ಲಿ ನೀನಲ್ಲಿ ಯಮುನೆಯೊಡಲ ತಿರುವು
ಸೆಳೆಸೆಳೆವ ಈ ಸೆಳವು ನಿಜದ ಹೊಳಹು

ಬೇಡಿ ಬಂದಿದ್ದೇನೆ ಈ ಬಿಸಿಲ ಭವಕ್ಕೆ
ರಾಧೆ, ಬಯಸಿ ಬಾಡಬಹುದು ಈ ಬದುಕ ಹೂ.

ನೂರು ಕನಸ ಹೆತ್ತ ಈ ಹಸಿ ಒಡಲ ಬಸಿರಲ್ಲಿ ನಾಳೆ
ಬೆಳಕಿರಬೇಕು – ದುಗುಡ ಮೋಡ ಸರಿದು

ನೆಲದ ನಾಳೆಗಳಲ್ಲಿ ಇಂದೇ ಕಳೆದುಹೋಗಿದೆ ಮನಸು ರಾಧೆ
ನವಿರು ನೆನಪಿಗೆ ನಿನ್ನದೊಂದು ನವಿಲುಗರಿ ಸಾಕು.

೫. ಸೂರ್ಯನ ಬಚ್ಚಿಡಬಹುದೆ?

ಕರಿಬಬುಡದ ನೆರಳಲ್ಲಿ
ನಿಲುಸಂಗಿ ನಿಗಿನಿಗಿ ಕೆಂಡದ ಹುಣ್ಣು
ಅನಾದಿ ಪಟ್ಟಿಗಳ ಅರ್ಥನಿಂತ ನಿನಾದ
ಬೊಗಸೆಯೊಳಗಿನ ಮಾತಿನಿಂದ
ಆ ಸೂರ್ಯನನ್ನು ಬಂಧಿಸಬಹುದೆ?

ನಿಂತು ನಡೆದಂತೆ ಸುತ್ತಿ-ಸುತ್ತಿ ಗಿರಕಿ ಹೊಡೆದಂತೆ
ಮೊಹಲ್ಲಾದ ಬೀದಿಗುಂಟ ಕಾಲಾತೀತ ಕಾಲುದಾರಿಗಳವರೆಗೆ
ಕೇರಿ-ಕೇರಿಗೆ, ಒಳಗಲ ಜ್ಯೋತಿಗೆ ಮುಸುಕು ಬಳಿದಂತೆ-

ನೆತ್ತಿ ನೇವರಿಸುವ ಮಾಯೆಯ ಮರ್ಮ
ಕನ್ನಡಿದೇವಿಯ ಮಗಳಿಗೆ ಜಲದ ಕಣ್ಣಿನ ಬತ್ತಾಸು
ಕೂಡಿ ಕಳೆದಂತೆ, ಕಳೆದು ಬಾಗಿಸಿದಂತೆ, ಭಾಗಿಸಿ
ತಿರುಗಿಸಿ,
ಕೊನೆಗೆ ಉಳಿದದ್ದು ಒಂದಷ್ಟು ನೆರಳಿನ ತುಸು ನೇವರಿಕೆ

ಹತ್ತತ್ತಿ ಗುಡ್ಡ ಇಳಿದಂತೆ ಪಡಸಾಲೆ ಬಯಲು
ಜಗದ ಒಲವಿನ ಮುಡಿಗೆ ನೂರೆಂಟು ನಕ್ಷತ್ರಗಳ ರುಮಾಲು
ಹಿಂಡು ಗೂಡಿನ ಕಾಗೆಗಳ ಗುಂಪಿಗೆ
ಚೆಲ್ಲಿ ನಡೆದಂತೆ ಪಿಂಡದೂಟ -

ನಿಗಿನಿಗಿ ನಿಗುರಿ ನಿಂತ ಆ ಸೂರ್ಯ ಪರಮಾತ್ಮ
ಎಲ್ಲೋ ಜಾರಿಕೊಂಡ ಬೆಳದಿಂಗಳು
ಕೈಯಿಂದ ಕೈಯ್ಗೆ ಬಾಯಿಂದ ಬಾಯ್ಗೆ ಹೇಳಿ ನಡೆದಂತೆ
ಎಣ್ಣೆ ಸುರಿದು ಹಚ್ಚಿದ ಮಣ್ಣಿನ ಮಡಿಕೆಯಲ್ಲಿನ -
ಮಡಿಚಿಟ್ಟು ಬೆಳಗುತ್ತಿರುವ ಬಿಗುಮಾನ ಬೆಳಕು

ಅರ್ಧ ನಿಂತ ಹಗಲು, ಪೂರ್ತಿಯಾದ ಸಪೂರ ರಾತ್ರಿ
ಉರಿಯಲು ಅಣಿಯಾದ ತಣ್ಣಗಿನ ಕಳೇಬರಗಳು
ರಕ್ತ ಸಿಂಧೂರದ ಚೂಪು ಹರಿತದ ಅಲಗುಗಳು-
ಈ ಜಗದ ಬೀದಿಯ ತುಂಬ ಒಂಟಿ ನೆರಳು -

ಕೂಡಿ ಕಳೆಯುವ ಲೆಕ್ಕ ಒಟ್ಟಾಗಿ ಮುಗಿದರೂ
ಉಳಿದುಕೊಂಡ ಶೇಷಕ್ಕೆ ಇಲ್ಲದ, ನಿಲ್ಲದ ಒಗರು ಮಾತು;
ಆಳಕೂಪದೊಳಗೆ ಒಂದಿಷ್ಟು ತಳದ ನೀರು
ಇಳಿಯಲ್ಲೊಂದು ನಿತ್ರಾಣ ನೂಲಿನ ಏಣಿ
ಜಾಂಬವನ ಮನೆಯಲ್ಲೂ ಕ್ಷಣ ನಗುವ ಮಂಜಿನ ತೇರು

ಅನಾದಿಯ ಕಾಲುದಾರಿಗೆ ಅತುಕೊಂಡ ಮೌನ
ತೆಪ್ಪಗಳ ತೆರನಲ್ಲಿ ಉರಿದುರಿದು ಕಟ್ಟುವ ಮಾತು
ಸೆಟೆದು ನಿಲ್ಲುವ ರಾತ್ರಿ
ಎಲ್ಲವೂ ಸರಿದುಹೋದಂತೆ ಮೌನ ತೆವಲು -

ಆ ಸೂರ್ಯನ ಬಚ್ಚಿಡಲು
ಉಳಿಯುವುದು ಒಂದಷ್ಟು ಬೊಗಸೆ ಮಾತು.

೬. ಕೇಳಾ ಕೆಳದಿ ಪ್ರಳಯ ಕಾಲದವಳ...

ಕೇಳಾ ಕೆಳದಿ,
ನೆನಪುಗಳಲ್ಲಿ ಹೆಪ್ಪುಗಟ್ಟಿದ ಮೂಲ ವೀರ್ಯ ಬಲ್ಲವರು ಯಾರು
ಆ ಮಾಂತ್ರಿಕ ಸೂಳೆಯ ಹೆಸರಿನಿಂದಲೇ
ಈ ಜನ ನಮ್ಮ ಗುರುತಿಸುವುದು
ನೀ ಎನಗೆ ಅಕ್ಕ ನಾ ನಿನ್ನ ಚನ್ನಮಲ್ಲಿಕಾರ್ಜುನ
ಹೊಟ್ಟೆಯನು ಕುಣಿಸುವ ಬಯಲು ಮಂಚದ ಆಟವಿದು
ಕಲ್ಪನೆಯಲಿ ರೇಖೆ ಎಳೆಯುವ ನಮ್ಮ ಕಾಮನೆಗಳಿಗೆ ಮಸಿ ಬಳಿಯುವದು.

ನೆಲಕ್ಕೆ ಹಾಲೂಡಿಸುವ ಸ್ತನದಾಯಿನಿ ತನ್ನ ಮಗುವನ್ನು ತಾನೇ
ಹುರಿದು ಉಣ್ಣುವಳು ನೈವೇದ್ಯ ನುಂಗುವ ತತ್ತಿಯೊಂದು ಉರುಳುತ್ತಾ ಬಂದು
ಕೋಟೆ ಗೋಪುರಗಳ ಸಪಾಟು ಮಾಡುವುದು
ಮುದಿ ಬೇಟೆಗಾತಿಯ ಮಾಯಾಜಾದುವಿನ ಸಾಲುಗಳಿಗೆ
ಯಾವ ಹೆಸರಿಟ್ಟು ಕರೆಯಬಹುದು.

ಅವಳ ಕಿಬ್ಬೊಟ್ಟೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡುವೆವು
ಕರಿ ತೊಗಲಿನ ಮೇಲೆ ಹೆಣ್ಣನಲಿಪಿ ಬಿಡಿಸುವ ಅರ್ಧನಾರೀಶ್ವರನ ಭಾಷೆಯೆಂದೇ
ಈ ಕಾಡಿನ ಅನಾಗರಿಕ ನಿಯಮಗಳು ನೀಚತನದಲಿ
ಅವಳೊಳಗಿನ ಹಿಂಸ್ರಮೃಗವನ್ನು ಕೆರಳಿಸುವವು
ಬಟ್ಟೆ ಬಿಚ್ಚಿ ಬಿಸಾಕುವಳು ಬಾಳಿಗೆ ಹೂತುಟಿಗಳಿಂದ ವಿಷ ಹಾಕುವಳು
ಮನಸು ಬಹಳ ಕೆಟ್ಟುಹೋಗಿದೆ ಪಾಪಿಯಾಗುವಳು

ಮುಟ್ಟಿದರೆ ಸ್ಫೋಟಗೊಳ್ಳುವ ಮೈಲಿಗೆಯ ಮೈಯ್ಯವಳು
ನಮ್ಮ ರೋಗಿಷ್ಠ ಪ್ರೇಮವನ್ನು ಭಯಾನಕ ಸ್ವಪ್ನಗಳಿಂದ ಮೇಲೆತ್ತುವಳು
ಪ್ರಣಯಾಂಕುರಗೊಂಡ ಮೇಲೆ ಮಿಲನಮಹೋತ್ಸವದ ಶೃಂಗಸ್ಥಿತಿಯಲ್ಲಿ
ಕಣ್ಮುಚ್ಚಿಕೊಂಡು ಒಮ್ಮೆ ಜ್ಞಾಪಿಸಿಕೊಳ್ಳಲು
ಅಶ್ರುಮಣಿಗಳಾಗಿ ಮೆಲ್ಲನೆ ಉದುರತೊಡಗುವಳು

ಸುಡುಗಾಡು ಊರಿನಲಿ ಬರಗಾಲಗಳು ಬೀಳುವವು
ತಾಯಿಯ ಗರ್ಭದಲಿ ಕೂಸುಗಳು ಸಾಯುವವು
ದೇವಾಲಯಗಳಲಿ ರಣಕಹಳೆ ಮೊಳಗುವವು
ಪ್ರೇಮ ಹಿಮಾಲಯದಲಿ ನೆತ್ತರು ಹೊಳೆ ಹರಿಯುವವು

ಕೇಳಾ ಕೆಳದಿ, ಜಗದ ಎಲ್ಲಾ ರುಚಿಗಳನ್ನು ಕಳೆದುಕೊಂಡು
ಸದಾ ಬೆಳ್ಳಗಿರುತ್ತಿದ್ದ ನಮ್ಮ ರಕ್ತ
ಅದರ ಸಹವಾಸಕ್ಕೆ ಬಂದಾಗಿನಿಂದ ಕೆಂಪಗಾಗಿದೆ
ಪ್ರಳಯ ಕಾಲದವಳಿಗಾಗಿ ಪಂಚಭೂತಗಳು ಗೋಳಿಡುತ್ತಿವೆ.
ಅವಳ ಪಾದಕ್ಕೆ ಹಣೆಹಚ್ಚುತ್ತಾ
ಅನ್ನದ ಋಣ ತೀರಿದ ಮೇಲೆ ಇಲ್ಲಿಂದ ಜಾಗ ಖಾಲಿ ಮಾಡೇ ಮಾಡುವೆವು.

೭. ಅಲೆಮಾರಿ ನದಿ ಎದುರು ಮೂರು ಇರುಳು

ಅಮಲಿನ ಇರುಳು

ದಣಿವಿಲ್ಲದೆ ಹರಿಯುವ
ನದಿಗೂ ಗುರಿಯುಂಟು
ಇಲ್ಲಿನ ಈ ಕಪ್ಪನೆಯ
ಇರುವೆಯಂತ ಇರುಳು
ಬೆನ್ನಿಗೆ ಗುಡ್ಡ

ಅಬ್ಬಾ ನದಿಗೆ
ಭಯ ಎಂಬುದೇ ಇಲ್ಲ
ಗುಪ್ತಗಾಮಿನಿಯಂತೆ
ಸುಮ್ಮನೆ ಹರಿಯುತ್ತಲೇ ಇದೆ

ನದಿಯನ್ನು ದರೋಡೆ ಮಾಡುವ
ಎದೆಗಾರಿಕೆ ಯಾರಿಗೆ ತಾನೇ ಇದೆ?
ಅಥವಾ.. ನದಿಯನ್ನು ಕಾಯುವವರಾದರೂ ಯಾರು?

ಈ ಸಪ್ಪಟ್ಟು ಸಮರಾತ್ರಿಯಲ್ಲಿ
ನದಿಗಿಂತ ನದಿಯ
ಶಬ್ದ ಭಯ ಹುಟ್ಟಿಸುತ್ತಿದೆ.

★

ಮಾಯದ ಇರುಳು

ಒಂದಿಡೀ ಇರುಳು ನದಿ ಎದುರು
ಕೂತು ಬಂದರೆ
ಅದು ಸಾಮ್ರಾಜ್ಯ ಗೆದ್ದುದ್ದಕ್ಕಿಂತ ಹೆಚ್ಚು
ಸುಮ್ಮನೆ ಕೂರಲು
ಕಾರಣವಾದರೂ ಏನು?
ಕಣ್ಣು ಕರಗುವವರೆಗೂ ಅಳಬೇಕು –
ನದಿಗೆ ಕನ್ನಡಿಯಾಗಬೇಕು
ಅಥವಾ ಬೆತ್ತಲಾಗಬೇಕು
ನದಿಯ ನೀರಿನಂತೆ

ಈ ಮಾಯದ ಇರುಳಿನಲ್ಲಿ
ಮಾಯೆಯ ನದಿ ಎದುರು
ಸುಳ್ಳುಗಳನ್ನು ಹೇಳಬೇಕು
ಅದು ಸತ್ಯವನ್ನು ಮುಚ್ಚಿಡುತ್ತದೆ

★

ಮಾಗಿದ ಇರುಳು

ಈ ಇರುಳೆಂಬ ಇರುಳಲ್ಲಿ
ಈ ನದಿಯೆಂಬ ನದಿಯಲ್ಲಿ
ಯಾರೋ, ಎಂದೋ ಹಚ್ಚಿಟ್ಟ
ದೀಪ ಇನ್ನೂ
ಉರಿಯುತ್ತಲೇ ಇದೆ.

ದಾರಿ ತಪ್ಪದ ನದಿಗೆ
ಆ ದೀಪ ಬ್ಯಾಟರಿಯೇ?
ಅಥವಾ
ಮೈಯೊದ್ದೆಯಾದ ನದಿಗೆ
ಗಮಲ ಶಾಖವೇ!

ಅಬ್ಬಾ! ನಿಜಕ್ಕೂ ನದಿ –
ದ್ರವವಲ್ಲ
ಅದು ಘನವೇ!
ದೂರದ ಇರುಳು
ಕರಗುತ್ತಿದೆ
ಆದರೆ ನದಿ ಮಾತ್ರ
ಹರಿಯುತ್ತಲೇ ಇದೆ.

೮. ಬೀಗ ಮತ್ತು ಬಾಗಿಲು

೧
ಹೊರಗಡೆಯಿಂದ ಬೀಗ ಹಾಕಿದ್ದರೂ
ಇವರು ಬಾಗಿಲು ಬಡಿಯುತ್ತಿರುವುದರಿಂದ
ಒಳಗೆ ಯಾರೋ ಇರಬೇಕೆಂದು ನಂಬಿ
ಜನ ನೋಡದಂತೆ ಹೋಗುತ್ತಿದ್ದಾರೆ

'ಹೊರಗಡೆಯಿಂದ ಬೀಗ ಹಾಕಿದ್ದರೂ
ಯಾಕೆ ಬಾಗಿಲು ಬಡಿಯುತ್ತಿದ್ದೀರಿ?'
ಎಂದು ಯಾರೂ ಕೇಳುತ್ತಿಲ್ಲವಾದ್ದರಿಂದ
ಒಳಗೆ ಯಾರಾದರೂ ಇರಲೇಬೇಕೆಂದು ನಂಬಿ
ಇವರು ಬಾಗಿಲು ಬಡಿಯುತ್ತಲೇ ಇದ್ದಾರೆ.

ಹೊರಗಿನಿಂದಲೇ ಬಾಗಿಲು ಹಾಕಿರುವುದರಿಂದ
ಬಾಗಿಲು ಬಡಿಯುತ್ತಿರುವವರು
ಇನ್ನೇನು ಹೊರಟುಹೋಗುತ್ತಾರೆಂದು ನಂಬಿ
ಅವರು ಒಳಗೆ ನಿರುಮ್ಮಳವಾಗಿದ್ದಾರೆ

ಉಸಿರು ಕಟ್ಟಿರುವುದು ಬೀಗಕ್ಕೆ ಮಾತ್ರ
ಬಾಗಿಲನು ತೆರೆಯುವುದು ಸುಲಭವಲ್ಲ.

೨

ಅಚಾನಕ್ಕಾಗಿ ಬೀಗ ಕಳಚಿ
ಬಾಗಿಲನು ತೆರೆದುಬಿಟ್ಟಿತು

ಒಳಗೆ ಕೂತವರು ಬಾಗಿಲು ಬಡಿದವರು
ಹಾದಿಹೋಕರು ಗಾಬರಿಯಿಂದ ಎದುರುಬದುರಾದರು.

ಕ್ಷಣಾರ್ಧದಲ್ಲಿ
ಅಸಂಖ್ಯ ಸುಳ್ಳುಗಳು ಸಬೂಬುಗಳು
ಮುಖವಾಡಗಳು...
ಬಾಗಿಲು ಮುಚ್ಚಿದಂತೆ ಇತ್ತು
ಬೀಗ ಹಾಕಿದಂತೆ ಇತ್ತು

ಬೀಗ ಮತ್ತು ಬಾಗಿಲುಗಳು
ತಮಗೆ ಬಿಡುಗಡೆಯೇ ಇಲ್ಲವೆಂದು
ಗೋಳಾಡತೊಡಗಿದವು.

೯. ಬೋರಂಗಿ

ದಟ್ಟ ಮಳೆಯ ಬದುವಿನಲಿ
ಅಂಡಲೆಯುತ್ತಿದ್ದ ಗೆಳತಿಗೆ
ಎಲ್ಲೋ ಮರದ ಹಸುರಿನ ತುದಿಯಲಿ
ಪಕ್ಕನೆ ಕೈಗೆ ಸಿಕ್ಕ ಕೆಂಪು ಹಸುರಿನ
ಬೋರಂಗಿ; ಸಾಹಸದಿಂದ ಹಿಡಿದು
ತಂದ ಮದರಂಗಿ; ಬನ

ಅದು ಪುರ್‍ರನೆ ಹಾರಿ ಮೈಯೆಲ್ಲಾ
ರೋಮಾಂಚನ ಪುಟ್ಟ ಅಂಗೈ ತುಂಬ
ಚೆಲುವ ಚಿತ್ತಾರ ಸಾವಿರ ಸೂರ್ಯ
ಹೊಳೆಯುವ ಬೆಳಕು ಕಾಡಿಗೆ ಕಣ್ಣತುಂಬ
ಪುಟ್ಟ ಕೈಗಳಲ್ಲಿ ಅಲ್ಲಾವುದ್ದೀನ ಅದ್ಭುತದೀಪ.

ಮರದ ಮೇಲಿನ ಹಾರಾಟ
ಬೋರಾಟವಾಗಿ ಬೆಂಕಿ ಪೊಟ್ಟಣದ ತುಂಬ
ಚೂರು ಎಲೆ ಹಸಿರು ಬಿಳಿ ಹಿಟ್ಟು ಪುಡಿ
ಜೊತೆಯಲ್ಲೇ ಮಲಗಿದ ಬಣ್ಣದ ಹುಳ
ಹರಡಿದ ಕನಸುಗಳ ತುಂಬ ರಂಗು
ಹೊಸ ಕವಿತೆಗಳು ಹುಟ್ಟಿದ ಮನಸ್ಸಿನ ಗುಂಗು

ದೇವರ ಮುಂದೆ ಹುಟ್ಟಿದ ಹಾಡು
ಎದೆಯಿಂದ ಎದೆಗೆ ಹರಿದ ಪಾಡು
'ನಿನ್ನ ನೆನಪಿಗೆ ಕೊಟ್ಟು ಬಿಡು ಇನ್ನೇನು
ಬೇಡುವುದಿಲ್ಲ, ಚಿಗಳಿ ಕುಟ್ಟಿಕೊಡಲು
ಮನೆಯಲ್ಲಿ ಖಾಲಿ ಪಾತ್ರೆಗಳ ಸುಗ್ಗಿ
ಬರೆದು ಕೊಡುವೆ ಮೂವತ್ತರ ತನಕ ಮಗ್ಗಿ'

ಕೊಟ್ಟು ಕೊಡುವ ಇರಾದೆ ಲೆಕ್ಕ
ಗೆಳತಿ ಇಟ್ಟಳು ಮಟ್ಟಸದ ಪಕ್ಕ
ಹುಡುಕುವಾಗ ಹಬ್ಬಿದ ಧಾವಂತ
ಎಣಿಕೆಗೆ ಸಿಗದೇ ಜಾರಿದ ಅಂಕ
ಎಲ್ಲೋ ಬಸಿವ ನೆನಪಿಗೆ ಇಲ್ಲ
ಕುಸಿಯುವ ಆತ್ಮನಿಂದನೆಯ ಕನ್ನಡಿ

ಇಂದಿಗೂ ಇಡಲಿಲ್ಲ ಬೆಂಕಿಪೊಟ್ಟಣದಲಿ
ಬೋರಂಗಿ ಖಾಲಿ ಮನೆ ರೋಧಿಸುತ್ತಿದೆ
ತಣ್ಣನೆ ಗಾಳಿ ಮೊಳಕೆ ಒಡೆಯದ ದಿನದಲಿ
ಸೂರ್ಯನ ಪಣತಿ ಹಚ್ಚಿ ಕಾದಿರುವೆ
ನಿನ್ನ ನಿರೀಕ್ಷೆಯಲಿ, ಇನ್ನಾದರೂ ಬಂದುಬಿಡು
ಒಮ್ಮೆ ಖಾಲಿ ಎದೆಯ ಪದದೊಳಗೆ
ಈ ಬೇಸಿಗೆ ಬಿರುಬಿಸಿಲಿನ ಹಗಲೊಳಗೆ

೧೦. ಸೂರ್ಯನ ಸಮಜಾಯಿಸಿಕೆ

ಈಚೀಚೆಗೆ ತಡವಾಗಿಯೇ
ಮರಳುವುದು ಏಳುವುದು
ರೂಢಿಸಿಕೊಂಡಿದ್ದ ಸೂರ್ಯ
ದಿನಕಾದು ಕೇಳಿಯೇಬಿಟ್ಟೆ
ಹೊಡೆಸಿದ ಬೋರನೆಲ್ಲ ಅಗಲಿಸಿ
ಕೆರೆತೋಡಿ ಹೈಬ್ರಿಡ್ ಮೀನು ಬಿಡುವ
ಪ್ರಿಂಟ್‌ಔಟ್ ತೆಗೆಯುವುದರಲ್ಲೇ ತಲ್ಲೀನ
ಬಪ್ಪರೆ! ಬಲೆ... ಬಲೆ... ಚಿಪ್ಸ್-ಡಿಸ್ಕ್
ದಂಧೆಗಿಳಿದಿದ್ದ ಸೂರ್ಯ
ಕೊಚ್ಚೆ ತುಂಬಿದ ರಸ್ತೆಗಿಳಿದು ಟೆಂಡರ್ ಕರೆವ
ಕಾಂಕ್ರೀಟ್ ಹಾಕುವ ಟಿಂಬರ್ ಹೊಡೆಸುವ
ಬಡಾವಣೆ-ಕಾಂಪ್ಲೆಕ್ಸ್-ಶೋರೂಮ್ ಕಟ್ಟುವ
ಹೆಕ್ಟರ್‌ಗಟ್ಟಲೆ ಜಾಗ ಕೇಳುವ
ಎಂದೆಲ್ಲ ತೊಡಗಿ ಇನ್‌ಫೋಸಿಸ್
ಬಗ್ಗೆ ಕೊರೆದೇ ಕೊರೆದ

ಇದ್ದದ್ದೇ ಬಿಡು ಸೂರ್ಯ
ಮನೆಯೊಳಗೆ ಮಕ್ಕಳನು ಮೀಯಿಸುವ
ಶಾಲೆಗೆ ಬಿಡುವ ತರಕಾರಿ ತರುವ
ಅಡುಗೆ ಮಾಡುವ ಅಮ್ಮಣ್ಣ ಅರೆ... ಅರೆ...
ಸರಕಾರಿ ಕೆಲಸಕ್ಕೆ ಹೋಗುವ
ಹೀಗೆ ಯಾರಿಗೆ ಹೇಳಬೇಕು
ಒಳ್ಳೆ ಗಾಳಿಗೂ ದುಡ್ಡು ಕೊಡಬೇಕು
ಅವನಿಗೂ ಮನೆ ಇದೆಯೆಂದು
ನೆನಪಾದವನಂತೆ ಕಿಸೆ ಕೊಡವಿ
ಎನಿಟೈಮ್ ಮನಿ

ಕ್ರೆಡಿಟ್ ಕಾರ್ಡ್ ಎಲ್ಲ ಉದುರಿಸಿದ
ಪಕ್ಕ ನುಸಿರೋಗಕ್ಕೆ ತುತ್ತಾದ
ತೆಂಗಿನಮರದಂತೆ ಕಂಡ
ನೋಡಿಯೇ ನೋಡಿದ ಮೂಡ್ ಹೊತ್ತಿಸಿ
ಕೇಳಿಯೇ ಕೇಳಿದ ಹೇಗಿದ್ದೀಯೇ ಪೃಥ್ವಿ
ಬಾಂಬಿನದೆ ಸುದ್ದಿ ಹೆಣವಾದರು ಮಂದಿ
ಉರುವಲಿಗೆ ಯಾವ ರೂಪಕೊಟ್ಟರೇನು
ಹಳೆಯದಾದರೇನು ಪ್ರಶ್ನೆ
ಹೊಸ ನಡಿಗೆಯ ಸಾದಾಸೀದ ಉತ್ತರ
ಒಂಟಿ ಕಾಲ ಕುಣಿಸಿ ಗಿಟಾರ್ ಗೀಚಿ
ಜಗತ್ತೇ ಹಳ್ಳಿಯಾಗಿರುವಾಗ
ಹೊತ್ತು - ಉರಿಯ ಹಂಗೇಕೆ
ಪೂರ್ವ ಪಶ್ಚಿಮ ಬಿಟ್ಟು ಉಳಿದಂತೆ

ಎಲ್ಲ... ಎಲ್ಲಾ ನಿನ್ನ ದಿಕ್ಕೆ
ರೈಮ್ಸ್ ಹಾಡಿ ಹತ್ತಿರ ಸೆಳೆದು ಪಿಸುಗುಟ್ಟವ
ಚುನಾವಣೆ ಗೆದ್ದು ಅವಧಿಗೆ ಮಧ್ಯೆ
ಬರಲಾರೆ ಬರಲಾರೆನೆಂದು ಒಡನಾಡಿ
ವರುಣ ಸೂರ್ಯನಿಗೆ ಮಾತು ಕೊಟ್ಟಿದ್ದ
ಹೇಳಿಯೇ ಹೇಳಿದ
ಅಕ್ಕಿಯನು ತಗಡು ಡಬ್ಬದೊಳಗಿಟ್ಟು
ಹೊರಗಿಟ್ಟರೆ ಸಾಕು ಅನ್ನವಾಗುವ
ಪರಿಯ ಮಾಯಾಜಾಲದ ಗುಟ್ಟಿನಲಿ...

ಮೋಹದ ಬದುಕು ಮರೆತ ಬಳಿಕ
ತಾಣದ ಹಂಗು ಇನ್ನ್ಯಾಕೋ
ತಾಮ್ರದ ತಲೆಯಾಡಿಸಿ
ಹುಬ್ಬು ಕುಣಿಸಿ ಭುಜ ಏರಿಸಿ
ಸೂರ್ಯ ಹೊರಟೇಬಿಟ್ಟ

೧೧. ಮಧ್ಯಮ ಜೀವಿಯ ಗದ್ಯಗೀತೆ

ನಡು ಮಧ್ಯಕ್ಕೆ ಸೀಳಿಕೊಂಡರೂ
ರಕ್ತ ಕೆಡವಿಕೊಳ್ಳದೆ
ಪ್ರಾಣ ಕಳೆದುಕೊಳ್ಳದೆ
ಹುಷಾರಾಗಿ ಓಡಾಡುವ,
'ಹುಟ್ಟು' ಹಾಕದೆ ತೇಲಿ ಸೌಖ್ಯ ದಡ ಸೇರುವ
ಈ ಮಧ್ಯಮ ಜೀವಿಗೆ
ಹುಟ್ಟು ಸಾವು ಒಟ್ಟಿಗೆ

ಮುದ್ದು ಬರುವ ಮುಖ
ನೋಡಿಕೊಂಡರೇ ಸುಖ
ಎಂಥ ಮೋಹ
ಮುಖ ಕಳಚಿಟ್ಟು ಅಲೆಯುತ್ತದೆ ದೇಹ

ಕುಂಡ ಚಂದ
ಮನುಷ್ಯ ಕುಂಡಕ್ಕಿಂತ ತುಂಡ
ಆಂಟೇನಾದ ಗುಡಿ ಗೋಪುರದ ಕುಡಿ
ಟೀವಿಯೊಳಗೆ ನಡಿ ನಡಿ
ತಲೆಯೊಳಗಿಂದ ಉದುರುವ ಪ್ರಸಾದವ ಪಡಿ

ಮನೆಯೊಳಗೆ ಕೊಂಡಿಕೊರತೆ
ಟೀವಿಯೊಳಗೆ ಸುಖಸಂಸಾರದ ಮಾತುಕತೆ,
ಟೀವಿಯೊಳಗೆ ಕಂಡರೆ ತಮ್ಮಂಥದೇ ಮುಖ
ಸಾಯುವಷ್ಟು ಸುಖ

ಸತಿಪತಿ ಆದರ್ಶ ದಂಪತಿ
ಒಬ್ಬರ ಗುರಿ ಕರೋಡ್ ಪತಿ
ಇನ್ನೊಬ್ಬರದು ಕರೋಡ್ ಸತಿ

ಬರೀ ಹಗಲುಗನಸುಗಳು
ರಾತ್ರಿ ಯಾರಿಗೂ ಇಲ್ಲ
ಸುತ್ತುತ್ತವೆ
ಇವರ ಕನಸು ಅವರ ಮನೆಗೆ
ಅವರ ಕನಸು ಇವರ ಮನೆಗೆ
ಹೋಗಿ ಸಾಯುತ್ತವೆ ಎಷ್ಟು ಬೇಜಾರು
ಇವರದೆಲ್ಲಾ ಒಂದೇ ಊರು
ರಿಟೈರ್ಡ್ ಆದಾಗ ತುಂಬಾ ಒಳ್ಳೆಯವರು.
ರುಚಿಯಾದ ನಾಟಿದೇವರ ನಾಯಾಗಿಸಿ

ಹೈಬ್ರಿಡ್ ಸಪ್ಪಲು ದೇವರ ಸಂಕರು
ಚರಿತ್ರೆಗಳಲ್ಲಿ ಸಲ್ಲದವರು
ಅರ್ಥಶಾಸ್ತ್ರವ ಅರೆದು ಕುಡಿದವರು

ಕೋಗಿಲೆ ಹಾಡುತ್ತಲೆ ಇರಬೇಕು
ಕಾಗೆ ಒಮ್ಮೆ ಕೂಗಿ ಸುಮ್ಮನಾಗಬೇಕು
ಮಳೆ ಬರಬೇಕು
ಹನಿ ಬೆಚ್ಚಗಿರಬೇಕು

ತಮ್ಮ ಮಕ್ಕಳು ಓದಬೇಕು
ಓದಿ ಓದಿ ಊದಿ
ಮೈಯಲೆಲ್ಲಾ ಮೊಲೆ ಮೂಡಿ
ಕರೆಯಬೇಕು ಮೂರೊತ್ತು
ಕರೆನ್ಸಿಕರೇವು

ಒಂದು ಡಜನ್ನಿಗೆ
ಇಪ್ಪತ್ನಾಲ್ಕು ಹಣ್ಣು ಬರಬೇಕು
ರೇಟು ಅಷ್ಟೇ ಇರಬೇಕು
ಫೋನ್ ಕಾಲು ಒಂದೂ ಬರದಿದ್ದರೆ
ಎಷ್ಟೊಂದು ಬೇಸರ
ಬಂದರೆ,
ಮಾತು ಸುಂದರ
ಬಿಲ್ಲು ಎಷ್ಟೊಂದು ಹಗುರ

ಕಾ|ವ್ಯ|ಸಂ|ಭ್ರ|ಮ|

ಮೌನ ಅತಿಜಾತೀಯ
ಮಾತು ರಾಷ್ಟ್ರೀಯ
ಶಕುನ, ವಿಜ್ಞಾನಗಳ
ಹದವಾಗಿ ಬೆರೆಸುತ್ತಾರೆ

ಒಂದೆ ಅಚ್ಚಿಂದ ನೆಗೆನೆಗೆದು ಬಂದವರು
ಬೆಣ್ಣೆಯಲಿ ಕೂದಲಿದ್ದರೆ
ಬೆಣ್ಣೆಯಷ್ಟನ್ನೆ ತಿಂದು ಕೂದಲು ಉಳಿಸುತ್ತಾರೆ
ಎಷ್ಟೊಂದು ಜಾಣರು

ಎಂದೂ ಹೂಸದವರು
ಮುಂದೆ ಕೆಮ್ಮದವರು
ಸೀನಿದರೆ ಕ್ಷಮಿಸೆನ್ನುವವರು
ಪಿಸು ಮಾತಲ್ಲಿ ಕೂಗುವವರು

ತುಸು ಹೊತ್ತಿಗೆ ಸಂಪನ್ನರು
ಅಕ್ಕಪಕ್ಕ ಅಂಟದವರು
ಅಷ್ಟಕ್ಕಷ್ಟೆ ನೆಂಟರು
ಅಂತರಾಷ್ಟ್ರೀಯ ಸಂಬಂಧಗಳ ಸಭ್ಯ ಗುಲಾಮರು

ಹಳ್ಳಿಗೆ ಹೋಗುತ್ತಾರೆ
ಇರುವುದಿಲ್ಲ
ಹಿಮ್ಮಡಿ ಬೆಳ್ಳಗೆ
ಹೊಲದ ದಾರಿಯಲ್ಲಿ ನಗೆ ನುಣ್ಣಗೆ
ಹೆದರುತ್ತಾರೆ ಕಾಯಿಲೆ ಬಿದ್ದ ಅವ್ವನಿಗೆ

ಧೂಳು ಬಿಸಿಲು ಸೊಳ್ಳೆಗೆ
ಪಾಲು ಕೇಳುತ್ತಾರೆ ಹೆದರದ ಹಾಗೆ
ಬುದ್ಧ ಬಸವಣ್ಣ ಕಾರ್ಲ್‌ಮಾರ್ಕ್ಸ್ ಗೊತ್ತು
ಬುದ್ಧಿ – ರಾಘವೇಂದ್ರ, ಸತ್ಯನಾರಾಯಣ, ಸಾಯಿಬಾಬಾ ಸ್ವತ್ತು

ಮಾನವ ಪ್ರೇಮಿಗಳು, ಉದಾರಿಗಳು
ಹಳೆಯ ಅಂಗಿ, ಪ್ಯಾಂಟು ಸೀರೆಗಳ
ನೆರೆಪೀಡಿತ, ಬರಪೀಡಿತ, ಭೂಕಂಪ ಪೀಡಿತರಿಗೆ
ಸಂಗ್ರಹಿಸಿ ಕಳಿಸುತ್ತಾರೆ.

ಮನೆಗೆಲಸದ ಹುಡುಗಿ ಅತ್ತರೆ
ಮರುದಿನ ಅಕಸ್ಮಾತ್ ಸತ್ತರೆ
ಒಂದೇ ಒಂದು ದಿನ
ಮುಖ ಮುಸುರೆ
ಬೆಳಿಗ್ಗೆ ಅದೇ ಯಥಾ ಪ್ರಕಾರ ಚಹರೆ

ನಯಕ್ಕೆ ವಿನಯಕ್ಕೆ
ನಿಲ್ಲುತ್ತಾರೆ ಧರ್ಮರಾಯನ ಸರಿಸಮಕ್ಕೆ,
ಕಳ್ಳರಿಗೆ ಸುಳ್ಳರಿಗೆ
ಒಳ್ಳೆಯವರಾಗಿ ಚಿರಾಯುವಾಗುತ್ತಾರೆ.

೧೨. ನಾಭಿಯೊಳಗಿನ ಶಬ್ದ

ಎಷ್ಟು ಜನ್ಮದ ಹಿಂದೆ
ಬೆಂಬತ್ತಿ ಬೆಳೆದು
ಮತ್ತೆಷ್ಟು ಅವತಾರದಲಿ
ನೆನಪಾಗಿ ಸುಳಿಯುವೆಯೋ

ಮಮತೆ ಮೆದುವೆದೆ ಕರುಣೆ
ಕರುಳು ತುಡಿಯುವ ಬವಣೆ
ಏನೊಂದರಲ್ಲೆಲ್ಲ ಕಾಣಸಿಗುವೆ

ಹೂಬಿಟ್ಟ ಗಿಡರಾಶಿ
ತಂಪು ನೆರಳನು ಹಾಸಿ
ಕರೆವ ಮರಮರದಲ್ಲೂ ಅಂಶಭಾಷಿ

ನಿಂತ ನೆಲದೊಳಗಿನ ನೀರು
ಹರಿವ ಝರಿಯೊಳ ನೀರು
ಮೊದಲ ಮಳೆ ತೇವದಲಿ

ಮಿದ್ದಗಂಧ
ಚಿತ್ತ ಆಕಾಶದಲಿ ಮೊರೆವ
ನಾಭಿಯೊಳಗಿನ ಶಬ್ದ

ಹೂವಿನೆಸಳಿನ ಮೃದುಲೆ
ಜಗವನೊಳಗೊಂಬ ಬಯಲೆ
ಒಡಲ ಸೆರಗಿನ ಅಡಿಯೆ
ಬಚ್ಚಿಟ್ಟ ವಿರಾಗ - ಹರ್ಷ
ಸಂಕ್ರಮಣ – ನಿರ್ದನಿಯ ಸಂಘರ್ಷ

ಅಯ್ಯೋ ಹಡೆದವ್ವ
ನೀನಾರೆ?
ಒಡ್ಡಿಲ್ಲದ ಸಂಯಮವೆ
ಒಡಕಿಲ್ಲದ ವ್ಯಾಜ್ಯವೆ
ಪರಾಪರಕೆ ಬೆಸೆದ ನಿಷ್ಠುರವೆ?

ಕರಗಿದ ಗತವೆ
ಅರಗದ ವರ್ತಮಾನವೇ
ತಿರುಗಿ ತಿದ್ದಲಾಗದ
ಶುದ್ಧ ಶೂನ್ಯವೇ?

೧೩. ಮಗು

ಅರೆ! ನನ್ನದೇ ಜೀವ. ನನ್ನ ನಿರಂತರತೆ
ಆದರೆ, ಅದು ನಾನಲ್ಲ.
ಅದು ನಾನು ಮಾತ್ರ ಅಲ್ಲ.
ಅಂವ ಕೂಡ ಅಂದ್ಕೊಳ್ತಾನೇನೋ : 'ನನ್ನ ಮಗು. ನನ್ನದೇ ನಿರಂತರತೆ!'

ಮಗು...
ಈಗ ತಾನೇ ಕಡೆದು ತೆಗೆದ ಮೃದು ಬೆಣ್ಣೆ,
ಕಾದು ಕಾದು ಹೊನ್ನುಗಟ್ಟಿದ ಹಾಲು ಕೆನೆ
ಮಗು,
ಹುಲ್ಲಿನೆಳೆಯ ಮೇಲಿನ ಇಬ್ಬನಿ ಮುತ್ತು!

ಅಯ್ಯೋ!
ಅದೇನು ಮಗ್ಗುಲ ಮುಳ್ಳೋ?
ಮಗು –
ಒಳ್ಳೆ ಅವನ ಮಗು !!
ಅವನ ಕಣ್ಣು, ಮೂಗು, ಬಾಯಿ...
ಅವನದೇ ಪಡಿಯಚ್ಚು
ಇತಿಹಾಸ ಕೆದಕುವ ವಾಸ್ತವ.

ಮತ್ತೆ ಮಗು.
'ಅದು ನಾನಲ್ಲ, ಅವನೂ ಅಲ್ಲ,
ಅದರ ಹುಟ್ಟಿಗೆ ನಾವೊಂದು ಪಿಳ್ಳೆ ನೆವ
ಮಾತ್ರ!'

– ಹಾಗೆಂದುಕೊಳ್ಳುತ್ತೇನೆ.
ಇವನ ಮುಖದಲ್ಲಿ ಅವನ ನಗು
ಕಾಣದಂತೆ ತೇಪೆ ಹಾಕುತ್ತೇನೆ.
ಆದರೂ,
ಅಂವ ಹಣಕುತ್ತಾನೆ.
ಅವನ ಧಗಾ, ಧೋಕಾ,
ಮೈತುರಿಕೆಗಳೆಲ್ಲ ನೆನಪಾಗಿ ಉಮ್ಮಳಿಕೆ
ಬರುತ್ತಿದೆ.

ಗೋರಿ ಸ್ವಾತಂತ್ರ್ಯದ ಕವನ ಕಟ್ಟಿ
ಕಣ್ಣೀರಲ್ಲಿ ಕೈ ತೊಳೆದು. ಬೇಲೆಗಳಲ್ಲಿ
ಉಸಿರು ಬಗೆದು..
'ದೌರ್ಜನ್ಯ!' ಚೀರುತ್ತೇನೆ.
ಹೆಣ್ತನದ ವಕೀಲಿಗಿಳಿಯುತ್ತೇನೆ.
ಅದನ್ನ ಉಳಿಸಿಕೊಳ್ಳಲಿಕ್ಕಾಗದೇ ಹೊಸಿಲು
ದಾಟಿ ಹೊರಡುತ್ತೇನೆ.

ಅವನ ನಗು ಹೊತ್ತ ಮಗು,
ಬಾಗಿಲಾಚೆಯೇ ಉಳಿಯುತ್ತಿದೆ.

ಸತ್ಯಕಾಮರ ಸಾಲು : 'ಒಬ್ಬಳು, ಹೆಣ್ತನವನ್ನ ಮರೆತಾಗ ಮಾತ್ರ ತಾಯಿಯಾಗುತ್ತಾಳೆ.'

೧೪. ದಸರೆಯ ಬೊಂಬೆಗಳು

ಅಲ್ಲಿಂದ ಪಾರಾಗ ಬಯಸಿದ್ದೆ
ಸುಳಿವ ಎಳೆ ಬೆಳಕು ಎದೆ ತುಂಬಿ
ಫಳಫಳನೆ ಸರಿದಾಡುವಾಗ
ಮೈ ಬೆವರು ಇಳಿಸಿ
ಸಟ್ಟನೆದ್ದು ನಿಂತಿದ್ದೆ

ಅಲ್ಲಿ ಕಂಡಿದ್ದೆ ಕಂಡಿದ್ದೆ
ವಿಶ್ವದೆಳೆ
ನೀರ ಸುರಿಸುವ ಆಕಾಶ ಮಲ್ಲಿಗೆ
ಕರೆಕರೆದು ನೀಡಿದ್ದ ಆಹ್ವಾನ
ದಸರೆಯ ಬೊಂಬೆ ಹಬ್ಬಕ್ಕೆ
ಬಾಗಿಲಿಗೆ ಬೇಕೇ ಬೇಕಿತ್ತು
ನೆಲಕೆ ಉರುಳಿ ಬಿದ್ದ ಅದನ್ನು
ಆಯುತ್ತಾ ಹೋದಾಗ
ಪೊದೆ ಸಂದಿಯ ನಡುರು ಕೈಗಳು ಕರೆದಿತ್ತು

ಮುಳ್ಳಿತ್ತು ಎಲೆಯಿತ್ತು
ಲಯವಿರದ ಯಾವ ರಾಗವೋ
ಇದ್ದಕ್ಕಿದ್ದಂತೆ ಹೊಮ್ಮಿ
ಮೈಮರೆತು ಕೇಳುತ್ತಾ ನಿಂತಿದ್ದೆ
ದಸರೆಯ ಬೊಂಬೆಗಳೆಲ್ಲಾ ನನ್ನ ಕಾಯುತ್ತಾ ಕುಳಿತಿದ್ದವು!

ಏನೋ ಕಳಕೊಂಡವಳಂತೆ ಕಳವಳಿಸಿ
ಸರಿದಾಡಿದಾಗ
ಕಣ್ಣ ಬಾವಿಯ ಒಳಗೆ ಸುಳಿಗಟ್ಟಲ ಕೆಣಕುವ
ಕತ್ತಲೆ ಕವಿದಂತಾಗಿ ನಿರ್ಬಲವಾಗಿ...

ಈಗಲೂ ನನಗೆ ಗೊತ್ತಿಲ್ಲ
ಅಲ್ಲಿದ್ದುದೇನೆಂದು

ದಸರೆ ಬಂದಿತೆಂದರೆ ಪಟ್ಟದ ಬೊಂಬೆಗಳು ಪುಟಿದೆದ್ದು
ಹಾಲಿನಲ್ಲಿ ಅಲಂಕೃತಗೊಂಡು
ಹೊಳೆಯುತ್ತಾ ಕೂಡುತ್ತವೆ
ನಾನು ಮಾತ್ರ ಆಕಾಶ ಮಲ್ಲಿಗೆಯ
ಆಯಲು ಹೋಗುವುದೇ ಇಲ್ಲ

೧೫. ಆಮುಖಾ ಈ ಮುಖಾ

ಕಾಯಕ್ಕೆ ನೆಳಲಾಗಿತ್ತು ಮಾಯೆ
– ಅಕ್ಕಮಹಾದೇವಿ

ಮಂಡೆಯೂರಿನ ಮೂಡಣಕ್ಕೆ
ಬೆಳ್ಳಿಗೆರೆ ಮೂಡಿದ ಹಾಗೇ ಓಡಿಹೋಯಿತು
ಗುಂಪು ಕಾಗೆ; ಹಾಗೇ ಸಿಂಹಸ್ವಪ್ನ ಆಗಿದ್ದ
ಕಾಮಣ್ಣ ನಿಂದ ಮಚ್ಚರಣ್ಣನ ತನಕದ ದಂಡು.
ಎಸೆದು ಬಿಲ್ಲು ಬಾಣ ಚೂರಿ
ಕೋರೆ ಭುಜಕೀರ್ತಿ ಕಿರೀಟ, ಸಾಯಬೀಳ
ಓಡುತ್ತಾರೆ. ಬೀದಿಯಿಂದ ಗಲ್ಲಿಗೆ
ಅಲ್ಲಿಂದ ಮನೆಗೆ ಕೋಣೆಗೆ ಒಳಗಿನ
ಕಣಜಕ್ಕೆ ಹೀಗೇ ಇಳಿದು ಅಮುಕಿ ಬಾಲ
ಕುಂತು, ಮರೆಸಿಕೊಂಡು ಮುಖ
ಕಡಿಯುತ್ತಾರೆ ಕಟಕಟ ಹಲ್ಲ

ಅಲ್ಲೇ ಕಡಿಯುತ್ತ ಹಲ್ಲ ಸುರಿಸುತ್ತಾ
ಜೊಲ್ಲ, ಸುತ್ತಲ ಕಟ್ಟೆಗೆ ಮೀರಿದ್ದಕ್ಕೆ
ಬೀಳುವ ದಂಡಕ್ಕೆ ಬೆದರಿ ಗೆರೆಯ ಕೆಳಗೆ
ತುದಿಗಾಲಲ್ಲಿ ಕೂರುತ್ತಾರೆ
ಕುದಿಯುತ್ತಾ ಕೊತಕೊತ

ಈಗ ಊರಿನುದ್ದ ಅಗಲಕ್ಕೆ ಸಾಲಾಗಿ ಬರೀ
ಕರ್ಣ ಹರಿಶ್ಚಂದ್ರ ವಿವೇಕಾನಂದ ಬುದ್ಧ ಗಾಂಧಿ
ಹೀಗೆ ಮೇರು ಮುಖಗಳು; ಎಂದೂ ಬರೀ ಭೂಮಿ
ನೋಡಬೇಕು ಕೈ, ಪಡೆಯಬೇಕು ಮುಕ್ತಿಯಮ್ಮೆ
ವ್ಯಕ್ತಿ ಸಮಾಜ ರಾಷ್ಟ್ರ ಎಲ್ಲಾ ಉದ್ಧಾರ ರಾರಾರಾ
ಇವೇ ಕೃತಿಯ ಅತೀತ ವ್ಯಾಖ್ಯಾನಗಳು

ಹಗಲ ಹೆಗಲ ಮೇಲೆ ಬಂದು ಕೂತ ಹಾಗೆ ಗುಂಪು
ಕಾಗೆ; ಇರುಳು ಗೊರ್‍ರನೆ ಹೊಡೆಯುತ್ತದೆ ಗೊರಕೆ
ಉದ್ದ ಅಗಲಕ್ಕೆ. ಕಣಜದಲ್ಲಿದ್ದವರು –
ಒಬ್ಬೊಬ್ಬರು ಎದ್ದು ತಟ್ಟ ತೊಡೆ ತೋಳು
ಹ...ಹ್ಹ... ಕೇಕೆ, ತೊಡುತ್ತಾರೆ ಬಿಸುಟ ವಸ್ತ್ರ
ಅಸ್ತ್ರ ಝಳಪಿಸುತ್ತಾರೆ. ಹತ್ತುತ್ತಾರೆ ಕುದುರೆ
ಹುಲಿ ಹೋರಿ ಹಾವು ನರಿ; ಹಾಕುತ್ತಾರೆ
ಕಾಯದ ಕೋಟೆಗೆ ಲಗ್ಗೆ

ಮೌನಕ್ಕೆ ತೊಸಪಿಸ ಮಾತಿನ ಕವಲು, ಕಣ್ಣು ಕೆಂಡ
ಕಡ್ಡಿ ತೋಳು ತೊಡೆಗೆ ಉಂಡೆ ಉಂಡೆ ಖಂಡಗಳ ತೇಪೆ
ನಿಂಬೆಯ ಹೊರಬಲ್ಲ ಮೀಸೆ; ಏಕೆ ಮಿದುಳೆಲ್ಲಾ
ಹುಳ ನಾನು ನಾನು ನನ್ನದೇ ನನ...

ಕೃತಕ ಬೆಳಕಲ್ಲೂ ಕ್ರೂರತೆಗೆ ಎಡೆ ಕಡಿಮೆ
ದಿಕ್ಕು ತಪ್ಪಿ ಸದ್ದಿಲ್ಲದೆ ಎದ್ದು ಬಗ್ಗಿಕೊಂಡೆ ಓಡುತ್ತಾರೆ
ಮರೆಯಲ್ಲಿ ಉದ್ದುದ್ದ ನೆರಳಾಗಿ 'ಲಾಲಾ ಲಲ' ಹಾಕುತ್ತಾರೆ
ಹೆಜ್ಜೆ ವರಸೆ, ಕೊಂಚ ಮಬ್ಬಿನ ಅಂಚಿನಲ್ಲೂ
ಇದ್ದಕ್ಕಿದ್ದ ಹಾಗೇ ಹಿಡಿದು ಬಿಲ್ಲು ಬಂದೂಕು
ಸಿಕ್ಕರೂ ಸರಿ ಗುರಿ ಇಲ್ಲ ಪರವಾಗಿಲ್ಲ ಹೊಡೆಯುತ್ತಾರೆ
ಕಾಯ ಜರ್ಝರಿತ ರಕ್ತಸಿಕ್ತ.

ಹಗಲ ಹೆಗಲ ಮೇಲೆ ಕಾಣಲಾರದು
ನಿಜ ಮುಖ, ಇರುಳ ಹೆರಳ ಒಳಗೂ ಇದ್ದರೆ ಅದೇ
ನಿಜ ಮುಖ – ಎಲ್ಲಕ್ಕೂ ಸುಖ.

೧೬. ಅಲ್ಲಾಹುವಿನ ದಯೆ ಈ ಮಳೆಗಿರಲಿ

ಪ್ರತಿರಾತ್ರಿ ಕನಸಿಗೆ ಬರುವ
ಇನ್ನೂ ಯಾರು ಸ್ಪರ್ಶಿಸಿರದ
ಆ ಸೈತಾನಿ ಚೆಲುವೆಯರು
ನನ್ನ ಹುಡುಗಿಯಂತಿರುವುದಿಲ್ಲ
ಈ ಸಲದ ಜೋರು ಮಳೆಗೆ ಸಿಕ್ಕಿ
ನನ್ನೊಂದಿಗೆ ಕಾಗೆ ಮರಿಯೊಂದು ನೆಂದು ಮುದ್ದೆಯಾಗಿತ್ತು.
ನಾನು ನೆನಪೊಂದರ ಬೆನ್ನು ಹತ್ತಿ
ರಕ್ತವಿಲ್ಲದ ಪದ್ಯಗಳನ್ನು ಗೀಚುತ್ತೇನೆ.
ಈ ಊರಿನ ಶಿಸ್ತಿನ ರಸ್ತೆಗಳಲ್ಲಿ
ನನ್ನನ್ನು ಒಂಟಿ ಮಾಡಿ ಹೋದ
ಆ ಹುಡುಗಿಯ ನೆನಪುಗಳು ಕಾಡುತ್ತವೆ.
ಮಸೀದಿಯೆದುರಿಗಿನ ಚಾದಂಗಡಿಯ ಮುಂದೆ
ಮಿಠಾಯಿ, ನವಿಲುಗರಿ ಮಾರುತ್ತಿರುವ ನನಗೆ
ಯಾರಾದರೂ ಖುದಾ ಹಾಫಿಜ್ ಹೇಳಲಿ ಎಂಬ ಬಯಕೆ

ಈ ರಾಕ್ಷಸ ಮಳೆಗೆ
ಅಲ್ಲಾಹುವಿನ ಮಕ್ಕಳ ಮೇಲೆ
ಯಾವುದೇ ಅನುಕಂಪವಿದ್ದಂತಿಲ್ಲ
ಎಲ್ಲಿಂದಲೋ ಬಂದ ದಿಕ್ಕಿಲ್ಲದ ಪರದೇಶಿಗಳು
ಈ ಶಹರದ ದೊಡ್ಡ ರಸ್ತೆಗಳ ಕಂಡು ಬೆಚ್ಚಿದ್ದಾರೆ
ಅವರ ಅನಾದಿಕಾಲದ ಯಾತನೆಯ ಭಾರಗಳನ್ನು

ಹೊತ್ತುಕೊಳ್ಳಲು ಈ ರಾತ್ರಿ
ಯಾವ ಕೂಲಿಗಳೂ ಸಿಗುತ್ತಿಲ್ಲ
ದೂರದ ನನ್ನ ಅಮ್ಮೀಜಾನ್
ಆ ಮುರುಕು ಜೋಪಡಿಯೊಳಗಿನ ಎಣ್ಣೆ ಕಾಣದ ದೀಪ
ದರ್ಗಾದ ಸಾಂಬ್ರಾಣಿ ಘಾಟಿಗೆ ಕೆವ್ವನೆ ಕೆಮ್ಮುವ
ನಮ್ಮ ಅನ್ನದ ತಟ್ಟೆಯ ಪಾಲುದಾರ ಮುಸಾಫಿರ್ ಬಾಬಾ
ಎಲ್ಲರೂ ಹೊತ್ತಲ್ಲದ ಹೊತ್ತಿನ
ಈ ಮಳೆಯ ನಡುವಿನ ಮೌನದಲ್ಲಿ
ಜೀಕಿ ಜೀಕಿ ನೆನಪಿನಾಳ ಸೇರುತ್ತಿದ್ದಾರೆ.
ಆ ಅಲ್ಲಾಹುಪಿನ ದಯೆ ಈ ಮಳೆಗಿರಲಿ.

೧೭. ಕಣ್ಣಲ್ಲಿ ಬಣ್ಣದ ಲಾಂದ್ರ

ಪ್ರೇಮ: ಹೊಟ್ಟೆ ತುಂಬಿದವರ ಕಾಲ ಕಳೆಯುವ ಗೇಮು

ಕಣ್ಣತ್ತು ನಾಳೆಗಳ ನೆಲದಲ್ಲಿ ನೆಡುವ ಬದಲು
ಭೂತದಲ್ಲಿಯೆ ಬೀಜ ಹುಡುಕುವ ಪಾಪಿ,
ನನ್ನ ಕಾಲಡಿ ನೀನು ಇಡಬಯಸುವ ಹೃದಯಕ್ಕೆ
ಸೇರು ಅಕ್ಕಿ ಬರಬಹುದಾ? ಇಲ್ಲ, ಒಂದಿಷ್ಟು ತರಕಾರಿ?

ಆದರೂ ಪ್ರೀತಿಸಲೆ,
ಉಸಿರಾಟದ ಲಯ ತಪ್ಪಿಸುವ ಮನೆವಾರ್ತೆ ಮರೆಯಲು
ವರ ಬರುವವರೆಗೂ ಬೇಜಾರು ಕಳೆಯಲು

ನನಗೂ ಕಾಣಿಸುತ್ತದೆ ಹೂ-ಹಣ್ಣು ಚುಕ್ಕಿ-ಚಂದ್ರ
ಬಣ್ಣ ಬದಲಾದಷ್ಟೇ; ನನ್ನ ಕಣ್ಣೊಳಗಿರಬಹುದು ಬೇರೊಂದು ಲಾಂದ್ರ

ನಿನಗೆ ಅವಮಾನ ಗೊತ್ತಾ?
ಕದ್ದದ್ದು, ಬಿದ್ದದ್ದು, ಬೇಡ ನೆಲದೊಳಗೆ ಹೂತುಹೋದದ್ದು
ಎದೆಗೆ ನೂರು ಪದವಿ ಪ್ರಶಸ್ತಿ ತೂಗು ಬಿದ್ದರೂ
ನಮಗೆ ಹೊಗೆಯ ನಂಟು, ಕುಕ್ಕರಿನ ಕೇಕೆ ತಪ್ಪುವುದಿಲ್ಲ

ಬರುತ್ತಾನೊಬ್ಬ ನಮ್ಮೆಲ್ಲ ನಾಳೆಗಳ ಮೇಲೆ ಕಾಲಿಟ್ಟು ಕುಣಿಯುವವ
ಎಲ್ಲರೆದುರು ಇಟ್ಟ ತಟ್ಟೆಯ ಮೇಲಿಂದಲೆ
ನೋಟ ಹಾಯಿಸಿ ಸೀರೆ ಸೆಳೆವ ದುಶ್ಶಾಸನ

ಮತ್ತವನೆದುರು ಅಪ್ಪನಂಥ ಅಪ್ಪ ವಿನಮ್ರವಾಗಿ
ಅಯ್ಯಪ್ಪಸ್ವಾಮಿಯ ಭಕ್ತನಂತೆ ಕೈ ಕಟ್ಟಿ ನಿಲ್ಲುವುದು
ಅಪ್ಪ ಅಗತ್ಯಕ್ಕಿಂತ ತುಸು ಹೆಚ್ಚು ಓಡಾಡುವುದು...

ದೊಡ್ಡದಾಗಿ ಜೀವ ಕೊಡುವ ಮಾತಾಡುತ್ತಿ ಮೂರ್ಖನಂತೆ
ನನ್ನ ಕೋಣೆಯ ಒಡೆದ ಕನ್ನಡಿ ತುಂಬಾ ಚೂರಾದ ನೂರು ಚಿತ್ರ
ಜೀವ ಯಾವುದರಲ್ಲಿದೆ: ಯಾವುದನ್ನಪ್ಪಲಿ?

ಊರು, ಜನ, ದನ, ಮಂದಿ, ಮಕ್ಕಳು ಎಲ್ಲರಿಗೂ ಹೆದರುವವಳು ನಾನು
ಹಾಂ, ಹಾಗೆ ನಟಿಸುವವಳು!

ಮತ್ತೆ ಬೇಜಾರಾದಾಗ, ದುಶ್ಯಾಸನರ ದಂಡಿನ ಬರವಿದ್ದಾಗ
ಸುಮ್ಮನೆ ಕಮಲಮ್ಮನವರ ಬಳಿ ಬಂದು ಕಸೂತಿಯ ನೆವ ಹೇಳಿ
ನನ್ನ ಕಣ್ಣ ಹಕ್ಕಿಗೆ ನಾಕು ಕಾಳು ಚೆಲ್ಲೇನು

ಈ ಪ್ರಾಣ, ಪ್ರೀತಿ, ಸತ್ಯಗಳಿಗೆ
ದಾಡಿ ತೆಗೆಯಲು ಆ ಸೆಲೂನಿನಂಗಡಿಯ ಸಣ್ಣಂಗನೂ
ಬುದ್ಧಿಗೆ ಒಪ್ಪುವುದಿಲ್ಲ ಎಂದು ನಿನಗೆ ತಿಳಿದ ದಿನ
ನಾನು ಅರ್ಥವಾಗುತ್ತೇನೆ.

೧೮. ಬಾಲ್ಯ ಮತ್ತು ಒಂದೆರಡು ಚಿತ್ರಗಳು

ಕುಳ್ಳು

ಬತ್ತದ ಬಣವೆಯಂತೆ ದಣಪೆ ಕೂದಲ ರಾಶಿಗೆ
ತಲೆ ಕುಕ್ಕಿಸಿಕೊಂಡೇ ಪಡಗ ನೀರು
ಹುಯ್ಯಿಸಿಕೊಂಡು,
ತೊಟ್ಟಿಕ್ಕುವ ತುದಿಗೆ ಕೆಂಪುರಿಬ್ಬನು ಸುತ್ತಿಕೊಂಡು
ತಂಗಳನ್ನ ಸಾರಿನ ಗಂಗಾಳದ ಮುಂದೆ
ಕೈ ಬಾಯಿ ಏಕ್ ಮಾಡಿಕೊಂಡು,
ಹಳೇ ಊರಿನ ಓಣಿಗಳ ಸಗಣಿ ಪೊತ್ತಲ ಆರಿಸಿ ತಂದು,
ರತ್ನಕ್ಕನ ಮುರಿದು ಬಿದ್ದಿದ್ದ ಮನೆ ಗೋಡೆಗೆ
ಬಡಿದು ಬಂದದ್ದು ಸಾವಿರ ಕುಳ್ಳು
ಸುಟ್ಟದ್ದು ಒಂದು ಸುಂದರ ಬಾಲ್ಯ!

ಇದ್ಲಿ

'ಇದ್ಲೀ ವಲೀ ಮ್ಯಾಲ ಬೆಂದನ್ನ ಬಲು ಹದ'
ಅನ್ನುತ್ತ ಅವರು ಕೊಡುತ್ತಿದ್ದ ಗೋಣೀ ಚೀಲವನ್ನು
ಅಟ್ಲಾಸ್ ಗೋಲ್ಡ್‌ಲೈನ್ ಸೂಪರಿಗೆ ಸಿಕ್ಕಿಸಿಕೊಂಡು,
ಮುಂದೆಂಟಾಣೇದು ಹಿಂದೆಂಟಾಣೇದು
ಗಾಳಿ ಹೊಡೆಸಿಕೊಂಡು

ಹಳೇ ಊರ ಹಗರಿಯ ಬ್ರಿಡ್ಜಿನ ಮೇಲೆದಿರಾಗುವ
ಗೌರ್ಮೆಂಟ್ ಬಸ್ಸಿಗೆ ಸೈಡಾಗಲೇ ಕೂಡದೆಂದುಕೊಂಡು,
ಹಾಲು ಮಾರುತ್ತಲೇ ಇಗ್ಲಿ ಕೂಡಿಡುತ್ತಿದ್ದ
ಹಂಪಮ್ಮನ ಮನೆಯ ಕಂಬಕ್ಕಾತು
ಕಳ್ಳು ಕಷ್ಟ-ಸುಖ ಮಾತಾಡಿಕೊಳ್ಳುತ್ತ,
ಗೋಣಚೀಲಕ್ಕೆ ಇದ್ದಿಲು ತುಂಬಿಕೊಂಡು,
ಮೈ-ಕೈಯೆಲ್ಲ ಕಪ್ಪಾಗಿ ಮನೆಗೆ ಬಂದ ಸಂಜೆ
ಕಂಡದ್ದು ನಿಗಿನಿಗಿ ಕೆಂಡಪಿದ್ದ ಇದ್ದಿಲೊಲೆ

ಬೂದಿಯಾದದ್ದು ಬಾಲ ಸಂಗಮಕ್ಕೆ ಹೋಗುವ
ಪುಟ್ಟ ಕನಸು.

೧೯. ಲಯ

ಗೊತ್ತಿಲ್ಲದೇ ಇರುವ
ಎಷ್ಟೊಂದು ಸಂಗತಿಗಳಿವೆ!
ಸಾಮಾನ್ಯ ಜ್ಞಾನವಲ್ಲವಿದು
ನನ್ನ ನಿನ್ನ ನಡುವಿನ
ಲಯದ ಜ್ಞಾನ

ಮೌನಕ್ಕೆಲ್ಲ ಮಾತು
ಬರೆಯಬಹುದಾಗಿದ್ದರೆ
ಅಕ್ಷರ ಲೋಕದಲ್ಲಿ ಇನ್ನೂ ಹೀಗೆ
ಸ್ಥಳ ಖಾಲಿಯಿರುತ್ತಿರಲಿಲ್ಲ

ಇದು
ನನಗೆ ನಿನಗೆ ಮಾತ್ರ
ಕೇಳುವಂಥದ್ದು
ಕಾಣುವಂಥದ್ದು

ನಿನಗಾಗಿ ತುಡಿಯುವ
ನನ್ನ ಜೀವವ ನಿನಗೆ
ನಾ ಚಿತ್ರ ಬಿಡಿಸಿ ತೋರಿಸಬೇಕಿಲ್ಲ
ಪದ್ಯ ಕಟ್ಟಿಯೂ ಒಪ್ಪಿಸಬೇಕಿಲ್ಲ
ಸೂಕ್ಷ್ಮ ಮನದ ಪದರಕ್ಕೆ
ಎಲ್ಲವೂ ವೇದ್ಯ

ಮಾಸದ ನೇಯ್ಗೆಯ
ಜೀವದ್ರವದಂತಿರುವ
ನಮ್ಮ ಇರುವಿಕೆ ಕಂಡು
ಸುಖಾಂತವೆನ್ನಿಸಿ
ಕೊನೆ ಗಳಿಗೆ ಸಮೀಪಿಸಿದಂತೆ
ಭಯವಾಗುತ್ತಿದೆ!

೨೦. ಧ್ವಜ ಕಂಬ

ಧ್ವಜಕಂಬದಡಿಯಲ್ಲಿ
ತಲೆಬಾಣಗಳ ನೆನೆದರೆ
ಮರಳಿ ಬರುವ ಚಿತ್ರಾನು-ಚಿತ್ರಗಳು
ಸಾಕು ನೆಲವನಪ್ಪಿ ಸಾಗುತ್ತಿರುವ
ಅಮ್ಮಂದಿರ ಸೆರಗಿನ ಒಳದಾಟಿರುವ
ಕಂಬನಿಯ ಸಾಲಿನಲ್ಲಿ
ತೂಗಿಬಿಡುವುದೇ ನಿನ್ನ
ನೇಣ ಚಂಡಿ ನಾಲಿಗೆಯ ತೆವಲು
ಹಸಿದ ಕಂದಮ್ಮಗಳ
ಕವಳದ ತಟ್ಟೆಯಲ್ಲಿ ನಿನ್ನ
ತ್ರಿಶೂಲನಾಲಿಗೆಯ
ಹೊಟ್ಟೆತೇಗುವುದು
ಚಿತ್ತ ಕದಡಿರುವ ಭಿತ್ತಿ-ಪತ್ರ
ಒಡೆಯನಣತಿಗೆ ಸೂರುಮಾರುಗಳು
ಚಿಮ್ಮಿ ನರಿಯ ಮೆದುಳಿಗೆ
ಮಕಮಲ್ಲ ದಿರುಸು
ಹಾಲಾಹಲದ ನಂತರ ಮೌನ
ತೆರಳುವುದು ತಟಸ್ಥ ಮನಸ್ಸಿಗೆ
ಮೆಲ್ಲ ಎಚ್ಚರಿಸುವುದು ಗಾಂಧಿ ನೆರಳು
ಒಣಗಿರುವ ನಿನ್ನ ಭಂಡ
ಸುಡುಗಾಡು ಪಾಡು
ಧರೆಗೆ ಒಪ್ಪುವ ದೀಪಗಳ ಸಾಲು
ತರುಲತೆಯ ವನದಲ್ಲಿ
ಹಿರಿಯರ ಕನಸುಗಳೇ ಮೇಲು
ಎಂದಿರುವ ರಾಮನಪ್ಪಿರುವ ನಾಡು

೨೧. ಅಭಿನಯ

ಶಂಕರಜ್ಞಾನಿ
ಕಾಲದೇಶ
ಅನ್ಯದೇಹ
ಏನಾದರೂ ಹೊಕ್ಕು
ಬರಬಲ್ಲ

ದೇಹಗಂಧವ ಮೂಸಿ
ಪರಿಮಳದೆಲ್ಲೆಯ ಕಂಡ
ಕೊನೆಗೆ ಏನು ಕಂಡನೋ
ಅದೆಲ್ಲ ನಿಜವಲ್ಲ
ಎಂದು ಸಾರಿ ಸಾರಿ ಹೇಳಿದ.

ರೂಪ ರಸವಾಸನೆ ಮೆತ್ತಿದ
ದೇಹ ಹೊತ್ತ ನಟಿ
ಒಂಟಿ,
ಕ್ಯಾಮೆರಾ ಕಣ್ಣನೆದುರು
ಹಾವಭಾವ
ಓರೆಕೋರೆ
ದಾಟಿಕೊಂಡು
ಪರಕಾಯ ಪ್ರವೇಶಿಸುವ
ದುಮ್ಮಾನ

'ನಾನು ಇಲ್ಲ...
ನಾನು ಇಲ್ಲ...'

ನಿಜ, ಇರುವುದು ಏನೋ ಮಾಯೆ,
ಕಣ್ಣು ಕುಕ್ಕುವ ಬೆಳಕು
ಬೆಳಕು ತಬ್ಬಿ ನಿಂತ ಕತ್ತಲು.

೨೨. ಭಾನುವಾರದ ಬೆಳಗಿನ ಹತ್ತು ನಿಮಿಷ

ಈ ಕ್ಷಣ ನಿನ್ನ ಮೂರು ದಿನದ ಗಡ್ಡ
ಚುಚ್ಚಿದಾಗ, ಇದ್ದಕ್ಕಿದ್ದಂತೆ
ಕಣ್ಣಲ್ಲೇ ಮೈಯ್ಯೆಲ್ಲ ಸವರುತ್ತಿದ್ದ
ಆ 'ಅಸಹ್ಯದವನು' (ನಾನೇ ಇಟ್ಟ ಹೆಸರು)
ನೆನಪಾಗಿಬಿಟ್ಟ
ಮೈಮೇಲಿನ ಕೂದಲೆಲ್ಲ
ನೆಟ್ಟಗಾಗಿ, ಕಾಲೆಲ್ಲ
ಜುಮುರು ಜುಮುರು...

ದಿನವೂ ಸಂಜೆ ನನ್ನನ್ನು ತೆಕ್ಕೆಗೆಳೆದು
ಅಳುವ ವಿಶಾಲಾ ಆಂಟಿ ನೆನಪಾದರು
ಮೊದಲ ರಾತ್ರಿಯ ಎರಡನೇ ಜಾವದಿಂದ
ಆ ಅಳು ಶುರುವಾಗಿದ್ದೆಂದು
ಅಮ್ಮ ಹೇಳಿದ್ದು ನೆನಪಾಯಿತು.
ಆ ದಿನದ ನೋವು ತರುವ ಅಳುವಿಗಿಂತ
ನೋವೇ ಇರದ ಅಳು ದೀರ್ಘಾಯುಷಿ
ಎಂದು ಗೊತ್ತಾದ ಮೇಲೆ ವಿಶಾಲಾ ಆಂಟಿ
ಪಾಪ ಎನಿಸುತ್ತಾರೆ...
ಅವತ್ತು ಕಲೆಯಾದ ಬೆಡ್‌ಶೀಟನ್ನು
ಎತ್ತಿಟ್ಟಿದ್ದನ್ನು ನಿನಗೂ ಹೇಳಿಲ್ಲ ಸಾರಿ ಕಣೋ...

ಮೇ ರಜೆಯಲ್ಲಿ ಊರಿಗೆ ಹೋದಾಗ
ಅಜ್ಜಿ ಮಾಡುತ್ತಿದ್ದ ಮೊಟ್ಟೆ ಸಾರು
ನುಗ್ಗೆಕಾಯಿ ಪಲ್ಯ ನೆನಪಾಗಿಬಿಟ್ಟಿತು...
ಅದೇ ಅಜ್ಜಿ ಹುಷಾರಿಲ್ಲದೆ

ಸಾಯಲು ಬಿದ್ದಾಗ ಎರಡೂ ಕೈಯ್ಯಿನ
ಉಗುರು ಸಂದಿಯ ಕೊಳೆ ನೋಡಿ,
ಥೂ ಇನ್ನಾದರೂ ಕ್ಲೀನ್ ಇರುವವರನ್ನು
ನೋಡಿ ಊಟ ಮಾಡಬೇಕು ಎನಿಸಿದ್ದಕ್ಕೆ
ನಾಚಿಕೆಯಾಯಿತು...
ಯಾವ ಬ್ರಾಂಡಿನ ಮಸಾಲೆ ಪುಡಿಗೂ
ಅಜ್ಜಿಯ ಕೈರುಚಿ ಬರುತ್ತಿಲ್ಲ,
ಹಾಂ, ನಂಗೆ ನುಗ್ಗೆಕಾಯಿ ಪಲ್ಯ
ಇಷ್ಟ ಎಂದಾಗ ನಿನ್ನ ಚಿಕ್ಕಮ್ಮಂದಿರು
ಕಿಸಕ್ಕೆಂದಿದ್ದು ಯಾಕೇಂತ ಗೊತ್ತು ಬಿಡು, ಇಶ್ಶೀ...

ಎಸ್ಸೆಸ್ಸೆಲ್ಸಿಯಲ್ಲಿದ್ದಾಗ ಕೆನ್ನೆ ಗಲ್ಲಕ್ಕೆಲ್ಲ
ಸಕ್ಕರೆ ಪಾಕ ಹಾಕಿ ಅದಕ್ಕೆ ಟೀ ಪುಡಿ
ಮೆತ್ತಿಕೊಂಡು ಏಸು ಕ್ರಿಸ್ತನ ಪಾತ್ರ ಮಾಡುತ್ತಿದ್ದ
ಒಫೀಲಿಯಾ ನೆನಪಾದಳು...
ನಿಜವಾಗಿಯೂ ಅವಳು ಏಸುವಿನ ಹಾಗೇ ಕಂಡು
ಹಣೆ, ಎರಡು ಭುಜ ಮುಟ್ಟಿಕೊಂಡು
ತುಟಿಗೊತ್ತಿಕೊಂಡ ತಕ್ಷಣ ಕಳ್ಳಿಯಂತೆ
ಆ ಕಡೆ ಈ ಕಡೆ ನೋಡಿದ್ದು ನೆನಪಾಯಿತು.
ಪ್ರವೀಣ, ಸುನೀಲ ನೋಡಿಬಿಟ್ಟರೆ?
ಲೆಸ್ಲಿ ನೋಡಿದರೆ ಪರವಾಗಿಲ್ಲ
ಖುಷಿಯಾಗುತ್ತಿತ್ತು, ಇಬ್ಬರಿಗೂ

ಚಿಕ್ಕವಳಿರುವಾಗ ಅಮ್ಮನ ಸೀರೆ
ಹೊಟ್ಟೆಗೆ ಕಟ್ಟಿಕೊಂಡು ಆಡುತ್ತಿದ್ದುದು
ನೆನಪಾಯಿತು.
'ತಡ ಇದೆ ಮ್ಹಾರಾಯ್ತಿ' ಎಂದು
ಅಮ್ಮ ಹೇಳಿದ್ದ ಗಳಿಗೆ ಬಂದೇ ಬಿಟ್ಟಿದೆ
ಉಬ್ಬುತ್ತಿರುವ ಹೊಟ್ಟೆ ಹೊತ್ತು
ಎಲ್ಲಿಗೂ ಹೋಗಲು ಮುಜುಗರ
ಎಲ್ಲರೂ ನಗುತ್ತಾರೆಂದು
ಹುಳಿಯೆಂದರೆ ನನಗೆ
ಮೊದಲಿನಿಂದಲೂ ಇಷ್ಟ ಎನ್ನುತ್ತೇನೆ

ಭಾನುವಾರದ ದಿನ ಬೆಳಗ್ಗೆ ಬೆಳಗ್ಗೆ
ಕೀಟಲೆ ಮಾಡಬೇಡ ಎಂದರೆ
ನೀನು ಕೇಳುವುದಿಲ್ಲ
ಥತ್, ದೋಸೆ ಹೊತ್ತಿಹೋಯಿತು ನೋಡು
ಕಾಡುವ ಏನೆಲ್ಲ ನೆನಪುಗಳು
ಬಂದಂತೆ ಕಳೆದುಹೋಗದಿರಲಿ ಈ ದಿನವೂ

ಹೋಗು, ಬೇಗ ಶೇವ್ ಮಾಡಿಕೊಂಡು ಬಾ
ರೇಮಂಡ್ಸ್ ಜಾಹೀರಾತಿನ ಮುದ್ದು ಹುಡುಗನ
ಹಾಗೆ ಕಾಣುತ್ತಿ. ಹೋಗೋ ಪ್ಲೀಸ್...!

೨೩. ರೆಕ್ಕೆ ನಲುಗಿನ ಮೇಲೆ ಹೂವಿನ ಧೂಳು

ನಾನು ನೀನು ಈ ಜಗತ್ತು ಒಂದದೊಳಗೊಂದು
ಒಂದೇ ಒಂದು ಹುಲ್ಲು ಕಡ್ಡಿಯ ಧ್ಯಾನದಲಿ
ಹರಿವ ನೀರಿನ ಮೈಯ ಅದುರಿನಲಿ
ಪ್ರೇಮದ ಹೃದಯ ಮಿಡಿತದಂತೆ
ಕಾಲಗಳ ಹಂಗಿನರಮನೆಯಾಚೆ ಉರಿವ ಲಾಂದ್ರ

ಅಸ್ಪಷ್ಟ ಜಗತ್ತು ಅಪಿಚಿತ ಅವ್ಯಾನ ವಸ್ತು ಸತ್ಯ
ಹಾರುವ ಚಿಟ್ಟೆ
ರೆಕ್ಕೆ ನಲುಗಿನ ಮೇಲೆ ಹೂವಿನ ಧೂಳು

ನಮ್ಮ ಹೆಜ್ಜೆಗಳ ದಾರಿ
ನಾವು ಕಾಲಿಡದೇ ಇರುವ ಹಾದಿ
ನನ್ನ ಕೋಣೆಯ ಗಾಜಿನ ಕಿಟಕಿಯಾಚೆಯ
ಮಂಜು ಕವಿದ ಮುಂಜಾನೆಯ ಸ್ವರ್ಗ ಚಿತ್ತಾರ
ಬೋಧಿ ವೃಕ್ಷದ ತರಗೆಲೆಯ ಮರ್ಮರ
ರೆಕ್ಕೆ ಜಾಡಿಸುವ ಹಕ್ಕಿಗೆ ಆಚೆ ಬದಿಯ
ಬಿಳಿ ಮತ್ತು ಕೆಂಪು ರಕ್ತದ ಮಹಾಯುದ್ಧ ಕೂಡ
ತಿಳಿದಿರಬೇಕು.

ರಣಭೂಮಿಗೆ ಇನ್ನೂ ತಣಿಯದ ದಾಹ
ಮತ್ತೂ ತೀರದ ಬಯಕೆ ಬೇನೆ
ಸದ್ದಿಲ್ಲದೆ ಸತ್ತ ಹೃದಯದ ನಿಶ್ಶಬ್ದ ಸ್ತಂಭನ
ನಿಂತ ಚಿತ್ತಲೆ ವೃಕ್ಷಗಳ ಮೌನ ರೋದನ
ಸಾವಿನ ಮಹಾ ಕಾಡಿನಲಿ ಗುಲಾಬಿ ಮುಳ್ಳಿನ ನಗು
ಒಂಟಿ ಕೂಗಿನ ಯಾವುದೋ ದಿಕ್ಕು ತಪ್ಪಿದ ಹಕ್ಕಿ
ಕೋಗಿಲೆ, ಗೊರವಂಕ, ಗುಬ್ಬಚ್ಚಿ, ಕಾಗೆ, ಗೂಬೆ ಇರಬಹುದು
ಸಹಸ್ರ ಕಣ್ಣುಗಳ ಹಸಿರು ರೆಕ್ಕೆ ಬಿಚ್ಚಿದ ನವಿಲು

ಕೆಸರು ಗದ್ದೆಯ ಹೊಳೆವ ಹೊನ್ನ ಕಿರಣ ಲೀಲೆ
ಹಾದು ಹೋಗಿರಬೇಕು ಅದೃಶ್ಯ ಸೂರ್ಯ ಜಲ
ಕ್ರೀಡೆಯ ಮಾಂತ್ರಿಕ ಶಕ್ತಿಯ ಸಂಚಯ
ಆಪ್ತಮಿತ್ರ ಸದ್ದಿಲ್ಲದೆ ಎದ್ದು ನಡೆದಂತಿದೆ
ರಂಗೇರಿದ ಸ್ನೇಹ ಕೂಟದಿಂದ

ಬೆಳಕಿನ ಕನಸ ಕನ್ಯ ತಾವರೆಯ ಬಿರಿದ ಕೆನ್ನೆ
ನಿಧಾನವಾಗಿ ನಿಧಾನವಾಗಿ
ಗೆರೆಗಳಿಂದ ಹೃದಯದಿಂದ ಥಳಥಳಿಸಿತು
ನೀರ ಕನ್ನಡಿಯ ಮೇಲೆ ಬಿಂಬ ಚೆಲ್ಲಿ
ಸೋಕ್ಕಿಲೆ ಸೆಟೆದ ಸಡಗರದ ಮುಂಗುರುಳು.

ನನ್ನ ಹೃದಯದಲ್ಲಿರುವ ಕಂಪಿತ ಧ್ವನಿಯ ತಂತಿ
ಹಾಗೇ ತೇಲಿಹೋದ ಹಕ್ಕಿಗಳ ಮುಗಿಲ ಸದ್ದು
ಹಾಡಿಗೆ ನಡಿಗೆಯಂತೆ ಬಡಿದು
ಅನಿವಾರ್ಯ ಗೀತೆಗಳ ಗಾಯಗಳ ಗುರುತುಗಳ
ಮರೆತ ಬೇನೆಗಳ ಮದ್ದು

೨೪. ಏನಾದರೂ ಆಗಬಹುದು

ಜತೆಗಿದ್ದವನನ್ನು ಗೆಳೆಯನೆಂದು
ಪರಿಚಯಿಸಿದವಳಿಗೆ
ಹಾಗಾದರೆ ನಾನು? – ಎಂದು ಕೇಳಿದೆ.
ಪಟ್ಟು ಹಿಡಿದು, ಕಸಿವಿಸಿ ಪಟ್ಟಳು.
ಮಾತಿಗೆ ಬರ ಮೌನ ಕೊರತೆಯಾದಾಗ
ಆಗುವುದಿಲ್ಲವೆ ಹಾಗೆ.
ಸತತ ದುಂಬಾಲಿನ ಕೊನೆಗೆ ತೊಟ್ಟಿಕ್ಕಿ
ಏನೂ ಅಲ್ಲ – ಅಂದಳು.

ಮಾತು ಮರೆತ ತೊದಲು
ನಿಷ್ಠುರಕ್ಕೆ ದಾಕ್ಷಿಣ್ಯ.
ನಾನು ಪಟ್ಟು ಬಿಡಲಿಲ್ಲ.

ಎರಡು ನೇರ ದಾರಿಗಳ
ಕವಲುಗಳಲ್ಲೊಂದೊಂದು ಇನ್ನೇನು ಸೇರಿದವೋ
ಎನ್ನುವ ಭ್ರಮೆ ಹರಿದು
ಸಮಾನಾಂತರಗೊಂಡವರು ನಾವು.
ಸಮ ಸಮ ಎಲ್ಲ – ಅಂಕುಡೊಂಕು.
ನುಣುಪು ಬಿರುಸು. ಮೌನ ದುಮ್ಮಾನ.

ಕಣ್ಣ ಸಮಾ ಕಣ್ಣಾಗಿ ಹನಿದು
ಏನೂ ಇಲ್ಲ ಅಂದರೆ ಏನಾದರೂ ಆಗಬಹುದು
ಅಂದದ್ದಷ್ಟೇ ಕೇಳಿಸಿತು.
ಪೇಟೆ ಬೀದಿ. ಬಸ್ಸು ಮೊರೆದ ಮೌನ.
ಸಂದಣಿಯ ಮರದಲ್ಲಿ ಹಕ್ಕಿ ಕುಹೂ ತುಣುಕು.

ಬರಹವಾಗದ ಪದ್ಯದ ಹಾಗೆ
ಅರೆಯುಳಿದ ಮಾತು.
ತಹ ತಹ ವಿರಹವೆನ್ನಲು ಸ್ಪಷ್ಟ ಎಡೆಯೆಲ್ಲಿ?

೨೫. ದೂರಿ ಪದ

ದೂರಮ್ಮ ದೂರಿ ದೂರಿ, ದೂರಮ್ಮ ದೂರಿ
ಹಬ್ಬದ ನೆಪ ಮಾಡಿ ಹೊಕ್ಕಳೋ ಮಾರಿ

ಮರದೊಳಗೆ ರಸವಾಗಿ, ಹಸಿರನ್ನ ದೂರಿ
ನೆಲದೊಳಗೆ ಜಲಕನ್ನೆ ಕಣ್ಣಾಗಿ ದೂರಿ
ಸುಡುಸುಡು ಸೂಡಾಗಿ ಸೂರ್ಯನ್ನ ದೂರಿ
ಬಿರುಗಾಳಿ ಉಸಿರಾಗಿ ಪ್ರಾಣವನೆ ದೂರಿ
ದೂರಮ್ಮ ದೂರಿ ದೂರಿ, ದೂರಮ್ಮ ದೂರಿ

ಎಳೆನಾಗರ್ಹೆಡೆಯಲ್ಲಿ ಗಿಡುಗ ಮುಖ ಊರಿ
ಹುಸಿದಿದ್ದ ಮೈಯೊಳಗೆ ಮಿಂಚುಗಳ ಹಾಡು
ಬಯಕೆ ಬೆಂಕಿಯ ಸುಳಿಗೆ ಎಷ್ಟೊಂದು ಸೆಳವು
ಸೋಬನದ ಹಾಸಿಗೆ ಚಿತೆಯಾಗಿ ಉರಿ ಬೂದಿ
ದೂರಮ್ಮ ದೂರಿ ದೂರಿ, ದೂರಮ್ಮ ದೂರಿ

ಹಸುಗೂಸು ಎಳಗರ ಮಿಡಿಗಾಯಿ ಮರಿತಾಯಿ
ಗಂಗಳದ ಅಗುಳಲ್ಲಿ, ವಿಷಬಿಂದು ಜಲದಲ್ಲಿ
ಗಿಲಿಕಿ ಆಡಿಸಿ ಗಾಳ ಸೃಷ್ಟಿಸಿದ ಮಾರಿ
ನಿನ್ನ ಕೋರೆಗಳ ಕೂಟದಲಿ, ಸ್ವರ್ಗ ನರಕದ ದಾರಿ
ದೂರಮ್ಮ ದೂರಿ ದೂರಿ, ದೂರಮ್ಮ ದೂರಿ

ಮತಿಯಾಳ ಗವಿ ಮಾಯೆ ಗುಡುಗು ದೂರಿ
ಎದೆ ಕಡಲಿಗೆ ಹಾಲಾಗಿ, ಕಾಲ ಕೂಟವೆ ದೂರಿ
ಕಣ್ಣು ರೇವು ಕನಸ ಬಲೆ ಮೀನಾಗಿ ದೂರಿ
ಹಬ್ಬದ ನೆಪಮಾಡಿ ಹೊಕ್ಕಳೋ ಮಾರಿ
ದೂರಮ್ಮ ದೂರಿ ದೂರಿ, ದೂರಮ್ಮ ದೂರಿ

೨೬. ಚರಿತ್ರೆಯ ನೆರಳಿನಲ್ಲಿ

ಬಸವಳಿದಿದೆ ನೆಲ
ಗುಡ್ಡ ಕಣಿವೆ ಕಾಲ್ದಾರಿಗಳ ನಾಡಲ್ಲಿ
ಗುಳೆ ಹೋದವರ ಬದುಕು
ಇಲ್ಲಿ ದಾಖಲಾಗಲಿಲ್ಲ.

ಯಾರೋ ಬರೆದಿಟ್ಟ ಚರಿತ್ರೆ
ಇನ್ನಾರೋ ಕೆತ್ತಿಸಿಟ್ಟ ಕಲ್ಲು
ರಾಶಿ ಮಣ್ಣಿನ ಒಳಗೆ ಹೂತುಹೋಗಿದೆ
ಕನಸು–
ಹೆಕ್ಕುವುದೆಂತು ಗತದ ನೆನಪುಗಳನು.

ನನ್ನ ತಲೆಮಾರಿಗೆ ತಲೆಮಾರುಗಳ ಕಟ್ಟು ಬಿಗಿದು
ಜ್ಞಾನದ ತೊಟ್ಟಿಲಲ್ಲಿ ಬಾವಲಿಗಳ ಹಿಂಡು
ಬಿಟ್ಟುಹೋದವರು ಎಲ್ಲೆಲ್ಲೋ ಅವಿತಿದ್ದಾರೆ.

ನನಗೆ ಅಕ್ಷರಗಳೇ ಪ್ರಿಯ ಸಂಗಾತಿ
ಈ ಮೆಟ್ಟಿಲುಗಳ ಮೇಲೆ ನಡೆದಾಡಿದವರ
ಚಿಂತೆ ನನಗೇಕೆ
ನಾನು ಬೆಳೆದು ಅರಿವಿನ ಹಾಡ ಬರೆದು
ಲೋಕ ಮೆಚ್ಚುವ ಮಗನಾಗಬೇಕು.

ಯಾವ ರಾಜನ ಹೆಬ್ಬಾಗಿಲೋ
ಊರ ಅಗಸಿಯ ಬಾಗಿಲೋ
ಏನಾದರೇನಂತೆ
ಬಯಲಲ್ಲಿ ಸಸಿ ನೆಟ್ಟು ಕಲ್ಲು ನಿಲ್ಲಿಸಿ ನೆರಳಾದವರ
ಪಾದಕ್ಕೆ ಶರಣೆಂದು ಬಂದವನು
ಈ ಕರುಣೆಯ ಮಡಿಲಲ್ಲೇ ನೆಮ್ಮದಿಯ ನಾಳೆ ಕಾಣುವವನು.

ನಾನಿಲ್ಲಿ ಒಂಟಿ
ಚರಿತ್ರೆ ಒಂಟಿಯೇ?
ಅತ್ತ ಗುಳೆ ಹೋದವರ ಬದುಕು ಒಂಟಿಯೇ?

ಅವರು ಮತ್ತೆ ಬರುತ್ತಾರೆ ಮಕ್ಕಳು ಮೊಮ್ಮಕ್ಕಳೊಂದಿಗೆ
ಹೊಸ ಬಟ್ಟೆಯ ಕನಸಿನೊಂದಿಗೆ
ಊರ ಉಡಿಯ ತುಂಬುತ್ತಾರೆ
ದೇವರುಗಳಿಗೆ ಜೀವ ಬರಿಸುತ್ತಾರೆ.

ನಾನೋ...
ಅವರ ಜಾತ್ರೆಗಳಲಿ ಕೂಡಿ
ಹಬ್ಬಗಳಲ್ಲಿ ತುತ್ತಿನ ಹಾಡಾಗುವ ತನಕ
ಈ ಸಾಂಗತ್ಯದಲಿ ಸುಖವ ಕಾಣುತ್ತೇನೆ
ಮಣ್ಣಿನ ಹಾಡ ಕಲಿಯುತ್ತೇನೆ.

೨೭. ಮಸ್‌ಜೀದಿನ ಬೀದಿಯಲ್ಲಿ...

ಮಸ್‌ಜೀದಿನ ಬೀದಿಯಲ್ಲಿ
ಅಲ್ಲಾಹು ಇರುವ ಜಾಗದಲ್ಲಿ
ಸೂಳೆಯೂ ಇದ್ದಳು;

ಬೆಳ್ಳಂಬೆಳಿಗ್ಗೆಯೇ
ಅಲ್ಲಾಹುವಿನ ಕೂಗು ಕೇಳಿಸಿದ ಮೇಲೆ
ಎದ್ದು ಕುಳಿತು ನಮಾಜು ಮಾಡಿ
ಗಿರಾಕಿ ಕಾಯುತ್ತಿದ್ದಳು

ಪ್ರತಿದಿನವೂ, ದಿನದ ಐದು ಹೊತ್ತೂ
ನಮಾಜಿಗೆ ಹೋಗಿ ಬರುವ ಹುಡುಗ
ಇತ್ತಿತ್ತಲಾಗಿ ಮಸ್‌ಜೀದಿನಲ್ಲಿ ಕಾಣುತ್ತಿಲ್ಲ;
ಈ ದಿನ ಶುಕ್ರವಾರ ಬರಬಹುದು,
ಇವತ್ತು ರಮ್ಜಾನಿನ ಪವಿತ್ರ ಹಬ್ಬ ಹುಡುಗ
ಕಾಣಬಹುದು, ಬಕ್ರೀದು ಬಂತು ಸಿಗಬಹುದು;
ದಾರಿ ನೋಡುತ್ತಲೇ ಇತ್ತು ಮಸ್‌ಜೀದು.

ಹುಡುಗ ಸೂಳೆ ಮನೆಯಲ್ಲಿ ಖೈದು!

ಹುಡುಗನ ಸಂಗ ಅಂಗಾತಬಿದ್ದ ಅವಳು
ಯೋಚಿಸಿದಳು; ಅಲ್ಲಾಹು ದಾರಿತೋರಿದಂತಾಗಿ
ಬೆತ್ತಲು ಮೈಗೆ ಬಟ್ಟೆ ಹೊದ್ದಳು
ಗಿರಾಕಿಯ ದಾರಿಬಿಟ್ಟು ಗರತಿ ಪಟ್ಟ ಹೊದ್ದಳು.

ಅದೆಲ್ಲೊ ಕಾಣದಂತೆ ಕುಳಿತಿದ್ದ
ಅಲ್ಲಾಹು ಮುಗುಳ್ನಕ್ಕ...

ನಮಾಜಿಗೆ ಬರಬಹುದೆಂದು ಕಾದವರಿಗೆ
ಹುಡುಗ ಮತ್ತೊಂದು ಸೂಳೆಸಂಗ ಸಿಕ್ಕ!

೨೮. ಮೆಟ್ಟಲಾರದ ಮುಗಿಲು

ಆ ಬಿಳಿಯ ಏರು ಎತ್ತರದ
ಜಗದ ಮೋಡದ ಮಾಡಿಗೆ
ಯಾರು ಹೆಸರಿಟ್ಟವಳು
ಏರಿದಷ್ಟೂ ಎವರೆಸ್ಟು
ಉಳಿಯುತ್ತದೆ ರವಸ್ಯು

ತೆರೆದ ಅಂಗಡಿಯ ತೆರದಿ
ಕಟ್ಟಿ ಕಡೆಯ ಗುಟ್ಟಿನರಿವೆಯ ತೊರೆದು
ಮಲಗಿರುವ ತರಳೆಯನ್ನು ಮಣಿಸಿ
ಮುಂದೇನ ಗೆಲ್ಲಲಿ? ಎಂದು
ಎದೆಯುಬ್ಬಿಸಿ ನಿಂತವರಿಗೆ
ಎರಡು ಮೆಟ್ಟಿಲೇರಲು ಇವತ್ತು
ಉಬ್ಬಸ ಪ್ರಯಾಸ

ಮುದುರಿ ನಿಂತ ಕುದುರೆಗೆ
ಕೆನೆತವಿಲ್ಲ ಅವತ್ತಿನ ಮೊರೆತವಿಲ್ಲ
ಕೈಗೆ ಮೆತ್ತಿದ ಬಣ್ಣ – ನೆನಪು
ಎಷ್ಟು ತೊಳೆದರೂ ಜಾರದು

ಹೆಜ್ಜೆ ಗುರುತುಗಳೆಲ್ಲಾ
ಹಿಮದಡಿಯ ಸಮಾಧಿ

ಈ ಹತ್ಯೆ ಹತಾರುಗಳ
ಹೊತ್ತ ಧೀರರ ಯಾವ ಮಾತೂ
ಅಲ್ಲಿ ನಿಲ್ಲಲೆಡೆಯಿಲ್ಲ
ಅದೇ ಶೂನ್ಯ ಮೌನದ
ಹಿಮದ ನಿರುತ್ತರ

ತೆರೆದ ಅಂಗಡಿಯ ತೆರದಿ ಕಂಡವರಿಗೆ
ನಿಗೂಢ ಗುಹೆಯ ಅರ್ಥ ವಿಸ್ತಾರದ
ಕೀಲಿಕೈ ದೊರಕಲೇ ಇಲ್ಲ

ಮೆಟ್ಟಿ ಬಾವುಟ ನೆಟ್ಟ
ಪ್ರತಿ ಎತ್ತರದ ತುದಿಗೂ
ಒಂದೊಂದು ಬಟಾ ಬಯಲು
ಮೆಟ್ಟಲಾರದ ಮುಗಿಲು.

೨೯. ಅನಾವರಣಗೊಳ್ಳದ ಪ್ರತಿಮೆ

ಪ್ರತಿದಿನ ಹಾದು ಹೋಗುವ ನಿನ್ನ
ಮೈಯ ಪರಿಮಳದ ಲಯಬದ್ಧ ಗಾಳಿ
ದಾರಿ ತುಂಬಿ ಬರುವ ಹೆಜ್ಜೆ ಗತ್ತು
ಮುಖದ ಬೆವರ ನಿರಿಗೆಗಳಲ್ಲಿ ತುಂಬಿಕೊಳ್ಳುವ
ಆಹ್ಲಾದಕರ ತಂಪುನಗೆ ಬಿಂದು
ಇಬ್ಬನಿಗರೆದ ಭಾವ.

ಅಂಬರದ ತಾರೆ ಅಂಗೈಯಲ್ಲಿ ಜೀವ ಪಡೆಯುತ್ತಿದ್ದಂತೆ
ಅಂತರಂಗದ ತುಂಬ
ಬೆಳ್ಳಿಮೋಡಗಳ ಮೆರವಣಿಗೆ.

ಎಲ್ಲವನ್ನೂ ಸೂರೆಗೊಳ್ಳುವ ಕಡಲಂತೆ ಆವರಿಸಿ
ಗೆರೆ ಕೊರೆವ ಬೆಳ್ಳಿ ಮಿಂಚಂತೆ ಸೆಳೆದು
ಎದೆಗತ್ತಲ ತುಂಬೆಲ್ಲ ಬೆಳಕು ತೊಳೆಸಿದರೂ
ಶಬ್ದ ಸದ್ದಾಗಲಿಲ್ಲ ಬೆಳಕೂ ಹತ್ತಿಕೊಳ್ಳಲಿಲ್ಲ.

ಎದೆಯಾಳದಲಿ ಮೊಳೆದ ಮೌನ ಕನ್ನಡಿಮನಸ
ನಿನಗೆ ಓದಲಾಗಲೇ ಇಲ್ಲ.

ಪ್ರತಿಮೆಯ ಜೀವ ಕೊಡು ಶಬ್ದಕ್ಕೆ
ಸರಿವ ರಾತ್ರಿಗಳಲಿ ಅಂಗುಲ ಅಂಗುಲ
ಮಾರು ಹಾಕುವ ನಿನ್ನ ನೆನಪ ಚಿತ್ರಕ್ಕೆ
ಆಕಾರ ಕೊಡಲಾಗದೇ ಆವರಣಕೆ
ಅಪ್ಪಳಿಸುವ ಅಬ್ಬರದ ತೆರೆಗೆ
ಎದೆ ದಡವಾಗಿದೆ.

೩೦. ನೆನಪೊಂದು ನವರಾತ್ರಿ

ನೆನಪೊಂದು ನವರಾತ್ರಿ
ನವರಂಗು ಮೋಡಿ
ಅಂದಚೆಂದದ
ರಾಜಾರಾಣಿ ದರ್ಬಾರು
ದುರ್ಬೀನಿನಲಿ ಕಂಡ
ರಾಜ್ಯಭಾರ

ಹಾಡು ಹಸೆ ಹೊರಗೆ
ಆವಾರದ ತುಂಬ
ಪ್ರಜಾಹಿಕ್ಕೆ

ಯುದ್ಧ ಗಾಣದ ವೈಮನಕೆ
ಚದುರಂಗ ಸೇನೆ
ವಿವಿಧ ವಿನೋದಾವಳಿ
ಡೊಳ್ಳು ಕುಣಿತ

ಚಿನ್ನದಂಬಾರಿ ಹೊತ್ತ
ಬಲರಾಮು ದ್ರೋಣರಿಗೆ
ಕಾಲೆಲ್ಲ ಜೋಮು
ಅಲ್ಲೇ ಸ್ವಲ್ಪ ಕೆಳಗೆ
ಮುರಿದ ಜೀವದ ಬಂಡಿ
ತಿಪ್ಪೆಯಲ್ಲೇ ಬಿರಿದ
ವಸಂತಸೇನೆ

ಸಂಜೆ ಪಂಜು ಕವಾಯಿತು
ಬಾಣ ಬಿರುಸು
ಕಗ್ಗತ್ತಲೆಗೆ
ಮಿನುಗು ಮೆರಗು
ಮೈಸೂರ ತುಂಬ
ಸ್ವರ್ಗದ ಬಡವರ ಮನೆಯ
ಬುಡ್ಡಿ ದೀಪಗಳು

ಲಲಿತಾದ್ರಿ ಹಿಂದೆ
ಪಚ್ಚೆ ಹೊಲ
ಬಿತ್ತಲೆರಡೇ ಕೈ
ಹರಣಕ್ಕೆ ಹತ್ತು
ಎತ್ತಿದ್ದ ಅಮ್ಮ
ಇಳಿಸಿಲ್ಲ ಇನ್ನೂ

೨

ನೆನಪೊಂದು ನವರಾತ್ರಿ
ನವರಂಗು ಮೋಡಿ
ಈ ತುದಿಗೆ ರಾಮ
ಆ ಕೊನೆಗೆ ರಾವಣ
ಮಧ್ಯೆ ಏನುಂಟು! ಏನಿಲ್ಲ!

ಅದಲು ಬದಲು
ಕಂಚಿ ಬದಲು
ಕೌರವ ಪಾಂಡವ
ಕೊಳಲೇ ಸುದರ್ಶನ
ರಕ್ತ ಮಜ್ಜೆ ಕೆಸರು
ಚಿಗುರು.

ಕಪ್ಪು ಹಕ್ಕಿಯ ರೆಕ್ಕೆ ಬೀಸಲಿ
ಕಿರೀಟದ ತಂಪು
ಗೋಳಿಡುವ ದ್ರೌಪದಿ
ಮಂಡೋದರಿಯರ ಭೋಪರಾಕ್
ಭೋ ಪರಾಕ್
ಕೋಟೆ ಬಾಗಿಲಿನಾಚೆ
ಕಾಳಮ್ಮನ ಮಂಜುಗಣ್ಣಿನ ತುಂಬ
ಮಗನ ಮುಂಡ
ನೂರು ಮೊನಚಿನ ಮೇಲೆ
ಉತ್ತರಾಯಣಕೆ ಕಣ್ಣು
ದಾವಾರದ ಬದುಕಿಗಿಷ್ಟು
ಪಾತಾಳ ಗಂಗೆ

ಮತ್ತದೇ ಸೂರ್ಯ
ಹೊರಳಿ
ಅದೇ ಸೆರಗು
ಅದೇ ಕಣ್ಣು
ತಣಿಯದ ಮಣ್ಣು
ಚಕ್ರ ಸುರುಳಿ

ಮಹಾನಿದ್ರೆಗೆ ಹೊದಿಗೆ
ತಿಳಿ ಬೆಳುದಿಂಗಳು
ಹೂವಿನೊಳಗೊಂದು
ಹುಳದ ಹೆಜ್ಜೆ

೩೧. ದಿನಚರಿ

ಸಂಜೆಯಾದಂತೆ ಅರಸಿ, ಅರಸಿ,
ಕಂಗಳು ಸೋಲುತ್ತವೆ.
ವಾಹನ ಸಾಗರದ ನಡುವೆ
'ನಾನೊಂದು ತೀರ, ನೀನೊಂದು ತೀರ'
ಥಕ್ಕನೆ ಬೆಳಕು ಮಿಂಚಿಸಿ ನುಗ್ಗಿ ಬಂದ ಹೀರೋ ಹೋಂಡಾ
ತಿರುವಿನಲ್ಲೆಲ್ಲೋ ಮರೆಯಾಗುತ್ತದೆ.

'ಅಮ್ಮ ಇನ್ನು ನನ್ನಿಂದಾಗದು'
ಟೈಪಿಸುತ್ತಾ ಮರಗಟ್ಟಿದ ಕೈಬೆರಳು
ನಿದ್ದೆಯ ರಾಗಕ್ಕೆ ತಾಳ ಹಾಕುತ್ತಲೇ
ಕನಸ ನೇಯಲು ಮರೆಯುತ್ತವೆ
ಕತ್ತಲ ಸೀಳಿ ಬಂದ ವಾಹನ
ಬೆಳಗಿಗೆ ಮುನ್ನುಡಿಯಿಡುತ್ತಾ
ತಿರುವು ವೃತ್ತಗಳ ದಾಟಿ,
ಮಬ್ಬು ಬೆಳಗಿಗೆ ನಿದ್ದೆಯಂಗಿ ತೊಡಿಸಿ,
ನಾಲ್ಕು ಗೋಡೆಗಳ ಕತ್ತಲೆಗೊಯ್ಯುತ್ತದೆ.

ಹೊಟ್ಟೆಯ ಬೆಂಕಿಗೆ ತಂಗಳ ಶಮನ
ಒತ್ತಿ ಬರುವ ನಿದ್ದೆಗೆ ಮಾತುಗಳ ಆಹುತಿ ಕೊಟ್ಟು
ಮಾತಿನ ಮನೆಗೆ ಮೌನದ ಚಿಲಕ ಹಾಕಿ
ಧೊಪ್ಪೆಂದು ಹಾಸಿಗೆಗೆ ಕುಸಿಯುವ ಜೀವ
ಮತ್ತೆ ಕಿವಿಗೊಡುವುದು
ಅಲರಾಮಿನ ಸುಪ್ರಭಾತಕ್ಕೆ...

ಇಷ್ಟರ ನಡುವೆ ಅವೆಷ್ಟೋ ಸದ್ದುಗಳು
ಗೋಡೆಗಳ ನಡುವೆ ಬಾಗಿಲು ಕಟ್ಟಲು ಸೋತು, ಸೋತು,
ಬೆಳಗಿನ ತಂಗಾಳಿಗೆ ನಿಟ್ಟುಸಿರಿನ ಸಾಥಿ ನೀಡುತ್ತವೆ.

೩೨. ಮಗ್ಗುಲಾದರೆ ರಾತ್ರಿ

ಹಗಲೆಂದರೆ ಇವಳು ಕಾಣುವ ಕನಸು
ಹೊತ್ತು ತರಬೇಕು ಇವಳಿದ್ದಲ್ಲಿ
ನಿದ್ದೆ-ಮಂಪರು-ಕನಸು-ಕಂಪನ
ಕದಡಿ ಹಾಕುತ್ತಾಳೆ ಕತ್ತಲ ಪಿಪಾಸೆಯಲ್ಲಿ

ರಾತ್ರಿ ಚಾದರದಡಿಗೆ ದಂಡು ದಂಡು
ಮಂದಿ ಬಂದು ಬೀಳುತ್ತಾರೆ
ಉಂಡಷ್ಟೂ (ಸಹ) ಭೋಗ
ಕೊಂಡಷ್ಟೂ (ಸ)ರಾಗವೆಂದು.

ಸಾವಿರ ಗಂಡಸರಿಗೆ ಮೊಲೆಯುಣಿಸಿ
ಲಾಲಿ ಹಾಡುತ್ತಾಳೆ,
ಅವರು ಅಲ್ಲೇ... ಹಾಗೇ...
ತಣ್ಣಗೆ, ಅವಳ ಮಡಿಲಲ್ಲಿ
ಮಲಗುವ ಹಾಗೆ.
ಇವಳ ಕತ್ತಲ ಅಹಂಕಾರಕ್ಕೆ
ಸೊಕ್ಕಿ ಉಕ್ಕುತ್ತದೆ ಕಡಲು
ಹರಳ ಬಿರಿಬಿಟ್ಟರೆ ಅಲ್ಲಿ,
ಸಿಕ್ಕಲ್ಲಿ ಹೊಕ್ಕು ನಲುಗುವ
ಒಂಟಿ ಮಲ್ಲಿಗೆ ಹೂವು;
ಕೆಳಗೆ ಝುಳು ಝುಳು ಧಾರಾಕಾರ
ಹರಿವ ಹುಣ್ಣಿಮೆ ಬೆಳಕು.

ಇವಳು ಕತ್ತಲ ಕನ್ಯೆ!
ಅಡಗಿದ್ದ ಸೂರ್ಯನ್ನ
ಆಕಾಶಕ್ಕೆ ಕೊಡವಿ,
ಮತ್ತೆ ಮುಡಿ ಕಟ್ಟುತ್ತಾಳೆ.

೩೩. ಪಾದ್ರಿಯ ಮದ್ಯಚಿತ್ರ

ಆತ ಸದಾ ಕಾಲ ಕುಡಿದ ಸ್ಥಿತಿಯಲ್ಲಿದ್ದು
ಹಸಿರುವರ್ಣದ ಮ್ಯಾಕ್‌ಡೊವೆಲ್ ವಿಸ್ಕಿ
ಸೀಸೆಗಳಲ್ಲಿ
ಮಲಗಿಕೊಂಡಿರುತ್ತಿದ್ದ
ಪರದೇಸಿ ಮಕ್ಕಳ ಮಧ್ಯೆ ಸುಳ್ಳು ನಿದ್ದೆ
ಹೋಗುವ
ಕೇಡಿ ಖದೀಮನಂತೆ.

ಕುರುಡು ಸಿಲ್ವರ್ ಮರಗಳಿಗೆ
ತಲೆ ಒಡೆದುಕೊಂಡು,
ಪೈನ್ ಮರದ ಬುಡದಲ್ಲಿ ರಾತ್ರಿ
ಕಳೆಯುತ್ತಿದ್ದ.

ಮೂಗಿನ ಹೊಳ್ಳೆಗಳಲ್ಲಿ ಸುಳಿದಾಡುವ
ಬರಿ ಮೈಮೇಲೆ ಬಂದು ಕೂರುವ ಬಲಿಷ್ಠ
ನೊಣಗಳನ್ನು ಬಡಿದು ಹಾಕುವಂತೆ
ಗ್ರಾಮದ ಅಸ್ಪೃಶ್ಯ ಹುಡುಗಿಯರನ್ನು
ಹಾಸಿಗೆಗೆ
ಕೆಡವಿಕೊಳ್ಳುತ್ತಿದ್ದ.

ಸ್ತನಗಳು ಉಸಿರುಗಟ್ಟುವಂತೆ
ಸನ್ಯಾಸಿನಿಯರ ಬಿಳಿ ವಸ್ತ್ರಗಳಲ್ಲಿ ಸಿಗರೇಟಿನ
ಧಾರಾಕಾರ ಹೊಗೆ ಚಿಮ್ಮಿಸುತ್ತಿದ್ದ.

ಕ್ರಿಸ್‌ಮಸ್ ಹಬ್ಬದಲ್ಲಿ ಅಸಂಖ್ಯ ಹೂಗಳ
ನಡುವೆ
ಜಾಲಿಗಿಡದಂತೆ ಮೂಡಿಬರುತ್ತಿದ್ದ ಅವನನ್ನು
ನಾವು
ದೇವರ ಸೇವಕನೆಂದು ನಂಬಿ,
ಹಾಡಲಾಗದ ಗೀತೆಗಳನ್ನು ಅದೆಷ್ಟು
ಸರಾಗವಾಗಿ
ಉಚ್ಚರಿಸುತ್ತಿದ್ದೆವು!

ಅಲ್ಲಿ, ಅವನ ಕೋಣೆಯಲ್ಲಿ ಮದ್ಯದ
ಸೀಸೆಗಳು
ಬಾಯ್ತೆರೆದುಕೊಂಡು
ಬೆತ್ತಲೆ ಹೆಣ್ಣಿನಂತೆ ನೆಲದ ಮೇಲೆ
ಉರುಳಾಡುವ
ಮಾದಕ ಶಬ್ದ
ಅವನದಲ್ಲದ ನಮ್ಮ ಗೋಡೆಗಳನ್ನು ಅವನು
ಹತ್ತಿ
ಇಳಿಯುವವರೆಗೂ ಕೇಳಿಸುತ್ತಿತ್ತು.

೩೪. ಸೆಪ್ಟೆಂಬರ್ ೧೧ರ ಅಪವೇಳೆಯಲಿ

ಸ್ವರ್ಗದೂರಿನ ಬೀದಿಗಳಲಿ
ನರಕದ ಬೆಲೆ ಭಾರೀ ದುಬಾರಿ.

ಸುಕ್ಕಡರದ ಕೆನ್ನೆಯ ಹುಡುಗಿಯರು
ತಲೆ ನೆರೆಯದ ಹುಡುಗರು
ಅಲ್ಲಿ ಹೊಡೆಯುವ
ಅಮರ್ತ್ಯ ಹರಟೆಯಲ್ಲಿ
ಅದೇ
ಹೊಸದೆಂಬ ಹಳೆಯ ಕೆಸೆಟ್ಟಿನ ರೀಲು
ಸುತ್ತುತ್ತಾ ಸುತ್ತುತ್ತಾ
ಕರಕ್ ಕಿರಕ್ ಗದ್ದಲವೆಬ್ಬಿಸಿದಾಗ
ನರಕವೆಂಬೋ
ಮರ್ತ್ಯದ ಕಾಮ
ನ ಬಿಲ್ಲು
ಮಿಂಚಿ ಮರೆಯಾಗಿ
ಗುಲ್ಲು... ಗುಲ್ಲು... ಗುಲ್ಲು...
ದೇವದಾನವರ ಬಾಯೊಳಗೂ
ಹೊಸ ರುಚಿಯನರಸುವ ಜೊಲ್ಲು!

ಕಲ್ಪವೃಕ್ಷದ ಹಣ್ಣು
ವೃಂದಾವನದ ಬಾಡದ ತರಕಾರೀಲಿ
ಬೇಯಿಸಿದ ಭೋಜ್ಯವ
ಭಕ್ಷಿಸುವ ಬೊಜ್ಜುಗಳಿಗೀಗ
ವ್ಯಾಯಾಮ.
ಮಳೆಯ ವಾಸನೆಗೆ
ಮೂಗರಳಿಸಿ ಮೈ ಕೊಡವಿ
ಡೈವ್ ಮಾಡುತ್ತಾವೆ
ಸೀದಾ
ನರಕದೂರಿನ ಯೋನಿ ಚರಂಡಿಯೊಳಗೆ

೩೫. ಆತುಮ

ನಕ್ಷತ್ರಗಳು ಖಾಲಿಯಾಗಿ ಚಂದ್ರ ಖಾಲಿಯಾಗಿ
ಬರೀ ರಾತ್ರಿ –
ಕನಸು ಖಯಾಲಿ ಬರಖಾಸ್ತು
ಆದಂತೆ.

ಈಗ ನಾನು ಬರೀ ಕೈಯಿ –
ಅಂತ ಆಗದವರು ಅಂದು,
ಚಿಟ್ಟೆಗಳು ಬಣ್ಣ ಬೀಳಿಸಿ
ಅತ್ತ ಹೋದಾಗ

ಮಮಕಾರ ಕತ್ತಲಾಗೇ ಸುತ್ತಿಕೊಳ್ಳುವುದು.

ಇರುವೆಗಿಲ್ಲದ ಆಸೆ ಆನೆಗಿಲ್ಲದ ಆಸೆ
ಈ ನರ ಜೀವಕೂ ಯಾಕೆ ಬೇಕೆಂದು
ಬೆರಳುಗಳು ಅವು ಅವೇ ಕಳಚಿಬಿದ್ದು
ತೋಳುಗಳು ಅವು ಅವೇ ಕಳಚಿಬಿದ್ದು
ಪಾದ ಕಣಕಾಲು ಮಂಡಿ ತೊಡೆ ಹೀಗೆ
ಕೀಲು ಕೀಲು ಹಾಗೆ
ಹಾಗೇ ಕಳಚಿ ಎದೆಗೂಡಿಂದ ಒಂದೇ
ಹೃದಯವೂ ತುಪಕ್ಕೆಂದು ಕಳಚಿಬಿದ್ದು
ಅದನು ಒಂದು ಕಣ್ಣು ನೋಡಿ
ಇನ್ನೊಂದು ನೋಡದಾಗಿ

ಇರುಳು ಇನ್ನೂನು ಇರುಳಾಯಿತು.

ಎಲ್ಲಿ ಅದೆಲ್ಲಿ ಅದು ಆತುಮ ಎಂದು ಆತುಮಕ್ಕಾಗಿ
ತಡಕಾಡಿ ಬಂದವರು ಕಿರಿಕ್ಕು ಪೊಲೀಸರಲ್ಲ
ಸಮೀಪದೃಷ್ಟಿಯ ವೇಪರಿನವರಲ್ಲ
ದೂರ
ದರುಶನದವರೂ ಅಲ್ಲ

ಯಾವುದೋ ಒಂದು ಭಿಕಾರಿ
ಮನಸು ಚಿಂದಿ
ಆಯುವ ಹುಡುಗನ ತೆರದಿ
ತಡಕಾಡಿ

ಬೇವಾರ್ಸಿ ಎಂದು ಉಗಿದುಹೋಯಿತು.

ನರಮಾನವ ಎಂಥವನೋ
ಅಂಥದೇ ತಾನೆ ಆತುಮ
ಎಂದು ಹೇಳುವುದು
ರೂಢಿ.

ಕತ್ತಲಲ್ಲಿ ಅಡಗಿದ
ಗೋಲಿ ಕಣ್ಣುಗಳು ರೆಪ್ಪೆಗಳ ಮುಚ್ಚಿದರೂ

ಒಂದು ಕಣ್ಣಲ್ಲಿ ಚಂದ್ರ
ಇನ್ನೊಂದರಲ್ಲಿ ಸೂರ್ಯ
ದಿಟ್ಟಿಸುತ್ತಿರುವುವು
ತದೇಕ,

ಏನನು?

೩೬. ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್

ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
ನಮ್ಮ ಟೀವಿ ಪರದೆಯ ಮೇಲೆ
ಮೂಡುವ ವೇಳೆಗೆ ಸರಿಯಾಗಿ
ನಮ್ಮ ಮನೆಯಲ್ಲಿ ಗಣೇಶನ ಹಬ್ಬ
ಭಾರೀ ಗೌಜು ಮಾತುಕತೆ ಕೇಕೆ
ಸಡಗರದಿಂದ ಓಡಾಡುವ ಕಾಲ್ಗಳು
ಕಾಲ್ಗಳಲ್ಲಿ ಕಿಂಕಿಣಿಸುತ್ತಿರುವ ಗೆಜ್ಜೆ
ಹಬ್ಬದ ಜರಿ ಸೀರೆ ಪುಟಾಣಿಗಳಿಗೆ ಲಂಗ
ಎಲ್ಲರ ಕಣ್ಣಲ್ಲೂ ಮಿಂಚು

ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
ಬಸ್ ಏರಿ ಪಯಣ ಆರಂಭಿಸುವ
ವೇಳೆಗೆ ಸರಿಯಾಗಿ
ನಮ್ಮ ಮನೆಗೆ ಸಾಕಷ್ಟು ನೆಂಟರು;
ಮುತ್ತೈದೆತನ ಗಟ್ಟಿಯಾಗಿರಲಿ ಎಂದು
ಹಾರೈಸುವ ಬಾಗಿನ
ನಮ್ಮ ಬದುಕು ನಮಗೇ ಸರಿಯಾಗಿ
ಕಾಣಲಿ ಎಂದು ಮೇಲೊಂದು ಪುಟ್ಟ ಕನ್ನಡಿ

ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
ಹೊರಟ ಬಸ್ಸಿಗೆ ದಂಡು ಲಗ್ಗೆ ಹಾಕಿದೆ
ಚೀರಿ ಹೇಳುತ್ತಿದೆ ಬೆಂಕಿ ಕಾರುತ್ತಿದೆ;
'ನಿನ್ನ ಧರ್ಮಕ್ಕೆ ರುಜುವಾತು ಬೇಕು'

ನಮ್ಮ ಮನೆಯಲ್ಲಿ ಈಗ ಮಂಗಳಾರತಿ
ಎಲ್ಲ ಮನೆಯಲ್ಲಿ ಬೆಳಕು ಮೂಡಲಿ
ಮುಂದಿನ ಹಬ್ಬದವರೆಗೂ ವಿಘ್ನ ಬಾರದಿರಲಿ
ಕಣ್ಣುಗಳ ಕಾಂತಿ ಆರದಿರಲಿ
ಹಾಡು ಎಲ್ಲ ಎದೆಯಲ್ಲಿ ಹುಟ್ಟಲಿ

ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
ಜೊತೆಗೊಂದು ಮಗು, ಹಣೆಯಲ್ಲಿ ಕುಂಕುಮವಿದೆ
ಮಾತನಾಡುತ್ತಿರುವ ಭಾಷೆ ತಮಗೆ ಬೇಕಾದ
ಧರ್ಮದ್ದು ಎಂದು ಗೊತ್ತಾಗಿದೆ
ಉಟ್ಟ ಸೀರೆಯೂ ಧರ್ಮಕ್ಕೆ ಒಪ್ಪುವಂತಿದೆ
ನಮ್ಮ ಮನೆಯಲ್ಲಿ ಈಗ ಹಬ್ಬ ಖಂಡಿತಾ
ಹಬ್ಬದ ಕಳೆ ತಂದಿದೆ ಸಂತಸ ಉಕ್ಕಿಸಲು
ಹಸಿರು ತೋರಣ ಕೌದಿಗೂ ಕುಸುರಿಗೆಲಸ
ಮಾತಿನಲ್ಲಿ ಒಂದಿಷ್ಟು ಹೆಚ್ಚು ಸರಬರ
ಎಲ್ಲವೂ ಹಬ್ಬಕ್ಕೆ ತಕ್ಕಂತೆ
ಸರಿಯಾಗಿಯೇ ಇದೆ

ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
ಇದ್ದ ಬಸ್‌ನಲ್ಲಿ ಮಾತ್ರ ಈಗ ಲೆಕ್ಕ ತಪ್ಪಿದೆ
ಏರುವಾಗ ಇದ್ದ ಪಯಣಿಗರ ಸಂಖ್ಯೆಯಲ್ಲಿ
ಈಗ ಎರಡು ಕಡಿಮೆಯಾಗಿದೆ. ಚೀರುವವರ
ಮಧ್ಯೆ ಬಸ್‌ನ ಚಾಲಕ ಕೂಡ
ಮತ್ತೆ ತಲೆ ಎಣಿಸುವುದನ್ನು ಮರೆತಿದ್ದಾನೆ
ದಶಕಗಳ ಹಿಂದಿನ ಮಾತು ಆಡುತ್ತಿದ್ದ
ಅಜ್ಜನ ದಂತಪಂಕ್ತಿ ಸಮುದ್ರದ ಅಲೆಯ
ಹೊಡೆತಕ್ಕೆ ಸಿಕ್ಕಿದೆ
ಜೊತೆಗಾತಿಯ ಕನ್ನಡಕ
ಅಲ್ಲೇ ಪಕ್ಕದ ಬಂಡೆಗೆ ಸಿಕ್ಕು
ನುಚ್ಚುನೂರಾಗಿದೆ.

ನಮ್ಮ ಮನೆಯಲ್ಲಿ ಈಗ ಊಟದ ಸಮಯ
ಬಾಳೆ ಎಲೆ ಹರಡಿದ್ದಾಗಿದೆ
ಒಂದಿಷ್ಟು ಪಲ್ಯ ಬೇಕಾದಷ್ಟು ಕಡಬು
ಒಂದು ವರ್ಷ ಹೇಗೆ ಕಾಪಾಡಿದನಲ್ಲಾ
ವಿಘ್ನೇಶ್ವರ ಎಂಬ ಪ್ರಶಂಸೆ
ಮತ್ತೊಂದು ವರ್ಷವೂ ನಮ್ಮನ್ನು
ಹೀಗೇ ಕಾಪಾಡು ಎಂಬ ಮೊರೆ;
ಊಟ ಸಂಭ್ರಮದಿಂದ ಸಾಗಿದೆ

ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್
ಏರಿದ್ದ ಬಸ್‌ನಲ್ಲಿ ಮಾತ್ರ ಲೆಕ್ಕ ತಪ್ಪಿದೆ...

'ಮಿಸ್ಟರ್ ಅಂಡ್ ಮಿಸೆಸ್ ಅಯ್ಯರ್' ಸಿನಿಮಾ ನೋಡಿ

೩೭. ಅಕ್ಕ ಚಿಟ್ಟೆ ಮತ್ತು ಗಾಳಿಪಟ

೧

ಅಕ್ಕ, ಒಂದರ್ಥದಲ್ಲಿ
ನೀನು ಎರಡಾಗಿ ಮೂರಾದವಳು
ಅಷ್ಟೆಲ್ಲಾ ಬಣ್ಣದ ಮಾತೇಕೆ?
ಊರಿನಲ್ಲೆಲ್ಲಾ ನೀನು 'ಮೂರೂ ಬಿಟ್ಟವಳು!'

ನೆನ್ನೆ ಮೊನ್ನೆಯ ತನಕ
ನೀನು ಇಷ್ಟೇ ಉದ್ದ
ಲಂಗ ದಾವಣಿಗಳ ಚುಂಗಾಣಿಯೊಳಗೆ
ಮಣ್ಣ ಬೊಂಬೆಯಂತೆ
ಮುಟ್ಟಿದರೆ ಮೃದು
ಮುರಿದರೆ ಹದ ಮೀರಿ ಊರ ಹುಡುಗರ
ಕೈಯ ಉಗುರೆಲ್ಲಾ ಸೋಕಿ
ಕಿಟಾರನೆ ಕಿರುಚಿ
ಅಮ್ಮನ ಬಾಯಲ್ಲಿ 'ಕಿಲಾಡಿ'ಯಾದವಳು

ಅರ್ಧ ಅಳು ಮೋರೆ
ಅರ್ಧ ನಗು ಮೋರೆ
ಬಾಗಿಲ ಸಂದಿಯ ಪಡಸಾಲೆಗೆದುರು
ಗುಡಿಸಲಲ್ಲಿ ಮೈನೆರೆದು ಕೂತಾಗ
ತುಪ್ಪದ ಬಟ್ಟಲು, ಕೊಬ್ಬರಿ ಬಟ್ಟಲು
ಯಾವ ಬಟ್ಟಲಿನ ಆಸೆಗೆ
ತೊಟ್ಟಿಲು ಕಟ್ಟಿದೆ ಜಾಣೆ?

ನಿನ್ನ ನಾಲಿಗೆಯ ತೀಟೆಗೆ
ಅವು ಹಿಂಡಿ ಬೂಸಾ ಅಲ್ಲ ಕಣೆ

ಈಗ ಕೇರಿ ತುಂಬಾ
ಹೋರಿಗಳ ಸವಾರಿ
ಚಿಗುರು-ಪೊಗರು ಮೀಸೆ
ಮಿಠಾಯಿ ಚಪ್ಪರಿಸುವ
ನಾಲಗೆ ಮಸೆದು
ನಿನ್ನ ಗುಡಿಸಲ ಕಡೆಗೆ ಗುಟುರು ಹಾಕ್ಯಾರೆ
ಅದಕ್ಕೇ ಈಗ
ನಿನ್ನ ಮುಂದಲೆ ಅಮ್ಮನ ಕೈಯಲ್ಲಿ!

ನೀನು ಬಣ್ಣದ ಚಿಟ್ಟೆಯ ಹಾಗೆ
ಹಾರಾಡ ಬಯಸುವೆಯಾದರೆ
ಈ ಊರ ತುಂಬಾ ತೋಟಗಳಿವೆ
ತೋಟದ ತುಂಬಾ ಹೂಗಳಿವೆ
ಒಂದೊಂದಕ್ಕೂ ದಟ್ಟ ಕೋಟೆ
ಮುಟ್ಟಲಾಗದ ಮುಳ್ಳಿನ ಕಿರೀಟ
ಮುಟ್ಟಬಾರದು ನೀನು ಮುಟ್ಟಾದವಳು
ಗುಟ್ಟಾಗಿ ಏನೇನೋ ಮಾತಾಡುತ್ತಾರೆ
ಊರೊಳಗೆ ನಿನ್ನ ಬಗ್ಗೆ

ಅದಕ್ಕೇ...
ಅಮ್ಮ ನಿನ್ನ ರೆಪ್ಪೆ ಕತ್ತರಿಸುತ್ತಾಳೆ
ಲಂಗ ಕಳಚಿ, ದಾವಣಿ ಹೊದಿಸುತ್ತಾಳೆ
ಮೈನೆರೆದ ಹುಡುಗಿ ನೀನು
ಅಕ್ಕಾ... ಹಾರಿ ಹೋಗೆ

ಹಾರಲಾಗದ ಬೇಲಿ
ಬಾಳಲಾಗದ ಊರು
ಬಂಧನದ ಒಳಗಿರುವ
ನಂದನದ ಹೂವಿಗೆ
ಮಧುಪ ಬರುವನೆ ಜಾಣ?

ಅಂಗಾಂಗದೊಳಗಿರುವ
ಸಂಗಮದ ಚೇತನಕೆ ಬಾನಗಲ
ದೂರ ದಿಗಂತಕೆ ಹೊಸ ದಾರಿ ಬೇಕು
ಹಾರಿ ಹೋಗುವ ಚಿಟ್ಟೆಗೆ ದಾರಿ ಹೇಳು?

ಉದ್ದುದ್ದ ಉಗುರು ಬೆಳೆದು
ದಾಡೆಗಳ ಮಸೆದು,
ಸೊಂಟಕ್ಕೆ ಅಂಟಿದ್ದ ನಂಟುಗಳ ಕಡಿದು
ಇನ್ನಿರದ ಪಯಣಕ್ಕೆ, ಮುನ್ನುಡಿಯ ಬರೆದು
ಹಾರಿಯೆ ಬಿಟ್ಟಳು ಅಕ್ಕ
ಗಾಳಿಯಲೆಯಲಿ ಗಾಳಿಪಟವಾಗಿ

೨

ಅಕ್ಕನ 'ಹುಣ್ಣಿಮೆ' ಚಂದಿರನ
ಹೆಣ ಬಂತೋ ಮುಗಿಲಾಗ ತೇಲುತಾ ಹಗಲ '
ಈಗಲೂ ತಮ್ಮನ ಅಳುವಿನ ಸದ್ದು
ತಮ್ಮನ ಸಂತೈಸಲು ಬರುವ
ಅಕ್ಕನ ಗಾಳಿಪಟದ ಚಿತ್ರ
ಕೇರಿಯವರಿಗೆಲ್ಲ ಕಾಣುತ್ತದೆ.

೩೮. ಮೂರನೇ ಜಾವದಿ ಬಿದ್ದ ನಾಲ್ಕು ಕನಸು

೧

ದಿಕ್ಕು ದಿಕ್ಕುಗಳಿಂದ ಉಕ್ಕುವ ಸದ್ದುಗಳ ಅಬ್ಬರಕ್ಕೆ
ಅವಡುಗಚ್ಚುವ ಸರ್ಕಲ್ಲಿನ ದೀಪ ಕಂಬದ ನಟ್ಟನಡುವೆ
ನೆಲ ನಾಭಿಯಿಂದ ಚಿಗುರಿ ಮುಗಿಲಿಗೇರಲಿ ಅರಳಿ
ದಶದಿಶೆಯಿಂದಲೂ ಬಂದು ನೆಲಸಲಿ ನೂರು ನೂರು ಗಿಳಿ
ಮೊರೆದು ಕಿವಿ ತುಂಬಲಿ ಚಿಂವ್ ಚಿಂವ್ ಚಿಂವ್
ತೊಟ್ಟು ಕಳಚಿದ ಹಣ್ಣುಗಳೊಂದಿಗೆ ಹಕ್ಕಿಪಿಕ್ಕೆಗಳು
ಅರಳಿಯಡಿ ರಂಗೋಲಿಯಾಗಿ ಮೂಡಲಿ

೨

ಬೆವರು ನಡುಕ ಕಾಣದ ಅನಿಮೇಷೆ
ಸುಕ್ಕಾಗದ ನೆರಿಗೆ ನಗೆಯ ಹುಡುಗಿ
ಹಾಲುಗಲ್ಲದಲಿ ತಿದ್ದಿ ತೀಡಿದ ಬೆಡಗಿ
ಅವಳ ಬೊಗಸೆ ಕಂಗಳಿಗೆ ಹರಿದು ಬರಲಿ
ಎಲ್ಲಿಂದಲಾದರೂ ಹನಿ
ಎದೆ ಕದ ಸರಿದು
ಜೀವದ ಹಣತೆ ಉರಿಯಲಿ

೩

ಜನಜಾತ್ರೆಯ ನಡುವೆ ಆಳು ಕಳಕೊಂಡ
ಒಂಟಿ ಜೀವ ; ಹಾಲುಗಲ್ಲದ ಕೂಸು
ಹುಬ್ಬು ಕುಣಿಸುತ್ತ ಸೆರಗು ಹಾರಿಸುತ್ತ
ತುಟಿತೇವ ಉಳಿಸಿಕೊಳ್ಳಲು ಹೆಣಗುವ ಹೆಂಗಸರು

ಆ ಹೆಣ್ಣ ಮೊಲೆಗಳಿಗೆ ಮಗು ತುಟಿಯಿಡಲಿ
ಅವಳ ಮೊಗಕ್ಕೆ ನಾಚಿಕೆ ಮರಳಲಿ

೪

ನಗರಾರಣ್ಯದ ಬೆಂಕಿ ಪೆಟ್ಟಿಗೆಗಳೊಳಗೆ
ಚಿತ್ರ ಪೆಟ್ಟಿಗೆಗಳಿಗೆ ಕೀಲಿಸಿದ ಕಣ್ಣುಗಳು
ಇರುಳು ಮುಗಿಲಿಗೆ ನೆಡಲಿ
ಮುಗಿಲ ಚುಕ್ಕಿಗಳ ಕಂಡು ಉರಿದೀಪಗಳು ನಂದಲಿ
ಇಳಿದು ಬರಲಿ ಬೆಳದಿಂಗಳು
ಎದೆಯೊಳಗೂ ಕಣ್ಣುಗಳೊಳಗೂ
ರಸ ಕಮರಿದ ಬದುಕು ಬದುಕಿನೊಳಗೂ!

೩೯. ಮುಖ

ನಟ್ಟನಡುವಲ್ಲೇ ಅರೆಬೆತ್ತಲೆ ಹುಚ್ಚಿಯ ಫುಲ್
ಸ್ಟಾಪಿಲ್ಲದ ಮಾತು
ಹಾಡು ಮೌನಗಳೊಳಗೆ ಮುಖಗಳೋ ಮುಖಗಳೂ.
ಕೆಲವು ವಾಚ್ಯ. ಕೆಲವು ಸಿಂಬಾಲಿಕ್.
ಕೆಲವು ಮಗು ಆ ಈ ನೆಪದಲ್ಲಿ ಬರೆದ ರೇಖಾಚಿತ್ರಗಳು.

ಸೃಷ್ಟಿಯ ಚರಾಚರ ಜೀವ ಸಂಕುಲಗಳೆಲ್ಲಾ ಮುಖಗಳಲ್ಲಿ
ಮೂಡು– ಕೆಲವು ಹಾವು ಮುಂಗುಸಿ ನರಿ ತೋಳ
ನವಿಲು.
ಸೂರ್ಯ ನರ್ತನ
ಭೂಮಿ ನರ್ತನ
ಚಂದ್ರ ನರ್ತನ
ಇತ್ಯಾದಿ ಇತ್ಯಾದಿ ಗ್ರಹತಾರೆಗಳೇ ಮುಖಮಂಟಪದ ಮೇಲೆ
ನರ್ತನ. ಸುಳಿವೇ ಇಲ್ಲದೆ ಮುಖದೊಳಗೆ
ಕಾಲ ನರ್ತನ.
ಕೆಲವು ಮುಖಗಳಿಗೇನಾಗಿದೆ ಅಜ್ಜಿಯ ಮೊಲೆಗಳಂತಾಗಿದ್ದಾವಲ್ಲ...

ಒಂದು ಮುಖಿ ಹೂವೇ ಆಗಿದೆ.
ಆದ ಮುಟ್ಟಲು ಅರೆಕ್ಷಣ ದೇವರಾಗಿ ಬಿಟ್ಟರೆ
ದೇವರಾಗುವುದೆಂದರೆ ಕಲ್ಲಾಗುವುದು.
ದುಂಬಿಯೋ ಚಿಟ್ಟೆಯೋ ಚಿಕ್ಕ ಗುಬ್ಬಿಯೋ
ರೂಪಾಂತರವಾಗುವಂತಿದ್ದರೆ... ಆಗಲು ಹೋಗಿ
ಯಃಕಶ್ಚಿತ್ ಕಾಷ್ಠನ ಒಂದು ಹುಳು ಆಗಿಬಿಟ್ಟರೆ

೪೦. ನಕ್ಷತ್ರ ನದಿ !

ಇಂತಹ ಕತ್ತಲ ರಾತ್ರಿಯಲಿ
ಹೇಗೆ ಉಕ್ಕಿ ಹರಿದುಬರುತ್ತಿದೆ ನೋಡಿ
ನಕ್ಷತ್ರ ನದಿ!

ಆ ಎತ್ತರದ ಇಳಿಜಾರಿಗೆ ಉಕ್ಕುಕ್ಕಿ ಮುನ್ನುಗ್ಗಿ
ಇರುವ ಪಾತ್ರದ ಮಿತಿಯಲ್ಲೆ
ತನ್ನೆಲ್ಲ ಬಲ ಒಗ್ಗೂಡಿಸಿ ರಭಸದ ಸದ್ದ
ಮದ್ದಲೆಯಂತೆ ಪ್ರತಿಧ್ವನಿಸಿ
ಹೇಗೆ ನುಗ್ಗಿ ಬರುತ್ತಿದೆ ನೋಡಿ ಈ ಮೆಟ್ರೋ ನಗರದೊಳಗೆ.

ಮಳೆ ಎಂಬುದಿಲ್ಲ ಎಲ್ಲಿಂದ ಬಂತೋ...
ಮನೆ ಮನೆಯ ಮುಂದೆ ಸಾಲುನಿಂತ ಖಾಲಿ ಕೊಡಗಳು!
ಎಲ್ಲಿಗೆ ಹರಿದು ಹೋಗುತ್ತೋ
ಯಾವ ಭಗೀರಥನ ತಪೋಬಲವೋ
ಬೇಸಿಗೆಯ ರಾತ್ರಿಯಲಿ ಹೇಗೆ ಹರಿಯುತ್ತಿದೆ ನೋಡಿ
ನಗರದೊಳಗೆ ನಕ್ಷತ್ರ ನದಿ.

ಅಂತಹ ರಭಸದಲ್ಲೂ ಅದೇನು ನಿಯಂತ್ರಣ
ನಗರದೊಂದು ಮೂಲೆಗೆ
ಓಡುತ್ತಿರುವ ಮನಸು ತಟ್ಟನೆ ನಿಲ್ಲುವಂತೆ
ನಿಂತುಬಿಡುತ್ತೆ.
ಅದಕ್ಕೆ ಅಡ್ಡಡ್ಡಲಾಗಿ ಹರಿದುಹೋಗುವ ಮತ್ತೊಂದು ನದಿ
ಹೀಗೆ ಮತ್ತಷ್ಟು ನದಿಗಳು ನಿಂತು ಮತ್ತೆ ಹರಿಯುತ್ತವೆ

ಏನು ಹೊಂದಾಣಿಕೆ
ಪ್ರತಿಯೊಂದರದೂ ವ್ಯವಸ್ಥಿತ ಚಲನೆ
ಒಂದರೊಳಗೊಂದು ಸೇರಿ ಘರ್ಷಣೆಯ ಬೆಂಕಿಗೆ
ಭಸ್ಮವಾಗುವುದು ತಪ್ಪಿಸಲು

ಯಾವ ಅಣೆಕಟ್ಟೆಯೊ
ಯಾರ ನಿಯಂತ್ರಣವೊ ಯಾವ ಇಚ್ಛಾಶಕ್ತಿಯೊ!?
ಎಲ್ಲಿ ಹುಟ್ಟುತ್ತೋ ಯಾವ ಕೊನೆ ಮುಟ್ಟುತ್ತೊ
ದೇಹದ ವಿವಿಧ ಭಾಗಗಳಿಗೆ ರಕ್ತನಾಳಗಳ ಮುಖೇನ
ಹರಿವ ರಕ್ತದ ಹಾಗೆ.

ಆ ಎತ್ತರ ಕಟ್ಟಡದ ಮೇಲೆ ನಿಂತು ನೋಡಿದರೆ
ನಗರದ ಇಂತಹ ನೂರಾರು ನದಿಗಳು ಕಣ್ಣಿಕುಕ್ಕುತ್ತವೆ.
ನನ್ನ ಮಗನಿಗೆ ಅಲ್ಲಿಂದಲೆ ವಿವರಿಸುತ್ತೇನೆ
ನದಿ ಹೀಗೇ ಹರಿಯುತ್ತೆ ನೋಡು ಎಂದು!

ನದೀನೂ ಹೀಗೆ ನಿಂತು ಹೊರಡುತ್ತಾ ಎಂಬ ಅವನ ಪ್ರಶ್ನೆಗೆ
ತಬ್ಬಿಬ್ಬಾಗಿ
ನಡೀ... ಡಿಸ್ಕವರಿ ಚಾನಲ್‌ನಲ್ಲಿ ತೋರಿಸುತ್ತೇನೆ
ಎನ್ನುತ್ತಾ ಮನೆಯೊಳಗೆ ಕರೆದೊಯ್ಯುತ್ತೇನೆ!

೪೧. ಒಂದು ಹೂಜಿ ಮತ್ತು ಕವಣೆ ಏಟು

೧

ಒಂದು ಸುಂದರ ಖಾಲಿ ಹೂಜಿಯ
ತಳಭಾಗದಲ್ಲಿರುವ ಒಂದು ಸಣ್ಣ ರಂಧ್ರ
ಅದರ ಅಂದ ಕೆಡಿಸಲಾರದು.
ರಂಧ್ರಗಳು ಮೂಡುತ್ತಲೇ ಇರುತ್ತವೆ
ಕುರುಡನ ಕವಣೆ ಏಟುಗಳಿಗೆ.
ಅದು ನಿಂತೇ ಬಿಡುತ್ತೆ
ಮೈಗತ್ತಿದ ನವಿರ ಮರೆತ
ಬಾಹುಬಲಿಯ ಹಾಗೆ.
ಅದರ ಮೇಲೆ ಸಾವಿರಾರು ಚಿತ್ರಗಳು;
ರಾಜ, ರಾಜಬೀದಿ, ಮಹಾರಾಣಿ
ಸೂಳೆ, ವಿದೂಷಕ,
ಸೈನಿಕ, ಸನ್ಯಾಸಿ
ದೂರ-ದೂರದವರೆಗೆ ಹಬ್ಬಿ ನಿಂತ
ತೋಟಗಳು, ನಡುಬಾಗಿಸಿದ ರೈತರು.
ಹೀಗೆ, ಹೂಜಿ ಒಂದು ಬಲಿಷ್ಠ ರಾಷ್ಟ್ರ.

೨

ಒಮ್ಮೊಮ್ಮೆ ಅದರ ಖಾಲಿತನ ತುಂಬಲಿಕ್ಕೆ
ತಯಾರಿ ನಡೆಯುತ್ತೆ. ಅದು
ರಾಜನ ಅಧಿಕಾರಕ್ಕೆ
ಸೂಳೆಯ ಮೊಲೆ ತುರಿತಕ್ಕೆ
ವಿದೂಷಕನ ವ್ಯಂಗ್ಯಕ್ಕೆ

೩

ಕಂಠಪೂರ್ತಿ ವೈನ್ ತುಂಬಿ
ತಳದಲ್ಲಿ ತೊಟ್ಟಿಕ್ಕುವ ವಸಂತಗಳ
ಮಣ್ಣವಾಸನೆಯತ್ತ ಬಾಗಿ ಅರಳುವ
ಹೂವುಗಳ, ಯಾರದೊ ನಡೆ ಕದ್ದು
ವಾಲಾಡುವ ಜನರ ನೋಡಿ
ಖುಷಿ ಪಡಲಾಗುತ್ತೆ, ಮುಳುಗದೆ
ಈಜು ಕಲಿತ್ತಿದ್ದರ ಬಗ್ಗೆ!

೪

ಅದೂ ಬೇಸರವೆನ್ನಿಸಿ
ಅದರ ತುಂಬಾ ರಕ್ತ ತುಂಬಲಾಗುತ್ತೆ. ಆಗ;
ರಂಧ್ರದ ಅಂಚು ದೇಶದ ಗಡಿಯಾಗುತ್ತೆ
ತೊಟ್ಟಿಕ್ಕತೊಡಗುತ್ತೆ, ಯುದ್ಧದ ಬೇಸರವ
ವಿಷಾದವ
ಸಾವು ನೋವಿನ ಕೂಗ.
ಹೂಜಿ ಹೋಳಾಗುತ್ತೆ ; ಅದರೊಳಗಿನ
ದಟ್ಟ ದಾರಿದ್ರ್ಯದ ಮುಲುಕಾಟಕ್ಕೆ.
ಬದುಕು ಸವೆಸುತ್ತೆ
ಹಾಳು ಸ್ಮಶಾನದ ಗೋರಿಯೊಂದರ
ಚಿತ್ರವಾಗಿ.

೪೨. ಅಧಿಕ ಚರಿತ್ರೆ

ಅವನ ಅರಮನೆಯಾಗಿತ್ತು ಅದು
ಯಾರು ಅವನು
ಅವರ ಮನೆಗಳಾಗಿದ್ದವು ಅವು
ಯಾರು ಅವರು

ಅವನು ಗೊತ್ತು ಅವರು ಗೊತ್ತಿಲ್ಲ
ಗೊತ್ತು ಮಾಡಿಸುವ ಗೋಜಿಲ್ಲದ ಕಲ್ಲುಗಳು
ಶಾಲೆಯೊಳಗಿನ ಬೋರ್ಡುಗಳು

ಕಲ್ಲ ಮೇಲೆ ನಡೆಯುವಾಗ
ಬೋರ್ಡು ಮುಂದೆ ಕೂರುವಾಗ
ಕಟ್ಟಿಕೊಳ್ಳುವ ಕನಸಿನಲ್ಲಿ ಕಳೆದುಹೋದವರೇ ಅಧಿಕ
ಯಾಕೆ?

ಅಧಿಕ ಚರಿತೆಯ ಸಮಸ್ಯೆಯಲ್ಲ
ಏಕೆಂದರೆ ಅದು ಗಣಿತವಲ್ಲ

★

ಅಧಿಕ ಉಣಲೆ
ಭಾಗ ಗುಣಲೆ
ಶೂನ್ಯದ ಸುತ್ತ ಅಂಕಿಗಳ ಪರದಾಟ
ಪ್ರಮೇಯ

ಬಿಡಿಸಬಲ್ಲವರಾರು ಬಿಡಿಸಿಬಿಟ್ಟವರಾರು
ಅಧಿಕವೆಲ್ಲಾ ಶೂನ್ಯ
ಮಾಸ
ಕೂಡಿ ಹಾಕಿದ ತಿಥಿ ವಾರ ನಕ್ಷತ್ರ
ಕಾಲ ಶೂನ್ಯದಲ್ಲೂ ಏನೋ ಸಂಪಾದನೆ
ಯಾರಿಗೆ ಗೊತ್ತು

ಅದು ಲೆಕ್ಕದ ಸಮಸ್ಯೆಯಲ್ಲ
ಕಾರಣ ಅದು ಅನುಭಾವವಲ್ಲ

★

ಶೂನ್ಯದ ಅನುಭಾವದಲ್ಲಿ
ಹರಿವ ನದಿಗೆ ಮೈಯೆಲ್ಲಾ ಕಾಲು
ಅಧಿಕದ ಸ್ವಭಾವದಲ್ಲಿ
ಹರಿವ ನದಿಗೆ ಮೈಯೆಲ್ಲಾ ಕವಲು

ಚರಿತೆಗೂ ಒಂದು ಪಿರಿಯಡ್
ಪಾಠ ಮುಗಿಯಲೇ ಬೇಕು
ಗಣತಕೂ ಒಂದು ಅವಧಿ
ಎಣಿಸಿ ಮುಗಿಸಬೇಕು
ಅನುಭಾವಕೂ ಒಂದು ಮಿತಿ
ಮಿತಿಯೊಳಗೇ ನೀತಿ ಹೇಳಬೇಕು

ನಿಂತ ಶಾಲೆಗೆ ಮೈಯೆಲ್ಲಾ ಗಂಟೆ

ಹೊಡೆದು ಬಂದ ಮಕ್ಕಳು
ಯಾರಿಗೇನು ಗೊತ್ತೋ ಯಾರಿಗಾರು ಗೊತ್ತೋ
ಗೊತ್ತು ಮಾಡಿಸುವ ಗೋಜಿಲ್ಲದ ಮೇಲೆ
ಮನೆಗೋಡೆಯ ಕಲ್ಲು ಹೇಳುವುದೇನು
ಇದು ನಮ್ಮ ಮನೆ
ನಮಗೆ ಗೊತ್ತು
ಅದು ಪಕ್ಕದ ಮನೆ
ಯಾರು ಅವರು?

ಉರು ಹೊಡೆಯುವ ಮಕ್ಕಳು
ಅವನು ಬಸವ ಇವಳು ಕಮಲಾ
ಉಳಿದವರು ಎಲ್ಲೋ

ಮನಕೊಂದು ಮನ
ಮನೆಗೊಂದು ಮನೆ ಅಧಿಕ

ನಿಂತ ಊರಿಗೆ ಮೈಯೆಲ್ಲಾ ಗಡಿ

★

ಹತ್ತಾರು ಚರಿತೆಗಳ ಹೊತ್ತು ತಂದವರು
ಬಾಗಿಲು ಬಡಿಯುತ್ತಲೇ ಇದ್ದಾರೆ
ನಾ ಮುಂದು ತಾ ಮುಂದು ಎಂದು

ಉರು ಹೊಡೆಯುವ ಮಕ್ಕಳು
ಮೆಲ್ಲಗೆ ಇಣುಕುತ್ತಿವೆ.

೪೩. ನಿನಗೆ ನಾನು ಹುಟ್ಟಿದ ನಿಮಿಷ

ಅಖಂಡ ಮೌನದೆದೆಯಿಂದ ಕಿತ್ತು ಬಂದ
ಅನಾಥ ಅಕ್ಷರದಂತೆ...
ನೋವಿನ ಸಬಲ ಗೋಡೆಗಳನ್ನು
ಸೀಳಿ ದಿಕ್ಕೆಟ್ಟು ನಿಂತ ಕಣ್ಣೀರಿನಂತೆ...
ನಿನ್ನ ಮಡಿಲೊಳಗೆ ನಾನು ಬಿದ್ದೆ !
ನನ್ನ ಎದೆ ತುಟಿ, ಗಲ್ಲಗಳೆಲ್ಲಾ ಒದ್ದೆ.
ನಿನಗೆ ನಾನು ಹುಟ್ಟಿದ ನಿಮಿಷ
ತಾಯೀ, ನನಗೆ ಇಪ್ಪತ್ತೈದು ವರುಷ!

ನಾನು ನಿನ್ನೊಳಗಿನವನೋ,
ನೀನು ನನ್ನೊಳಗಿನವನೋ,
ಆ ಕ್ಷಣದ ಪುಳಕಕ್ಕೆ ಸದ್ದುಗಳಿದ್ದರೆ ನೀನು
ಆಲಿಸುವೆ ಸಂಗೀತದಂತೆ!
ಎಲ್ಲಿ ಬಚ್ಚಿಟ್ಟಿದ್ದೆ ತಾಯೀ, ನಿನ್ನ
ಎಲ್ಲಿ ಬಚ್ಚಿಟ್ಟಿದ್ದೆ ನನ್ನ

ಬಿಸಿಗೆ ಬಿಸಿ ಹುಟ್ಟಿ ತನ್ಮಯತೆಯ ತಣಿಸು
ಎಂಜಲಿಗೆ ಎಂಜಲು ಅಮೃತ
ಪಡೆದೆ ಮರಳಿ ತವಕದ ಬಿಸಿಯುಸಿರು
ನಿನ್ನೆದೆಗೆ ತುಟಿ ಕೊಟ್ಟು ಬೆಳೆದೆ
ಕೊಟ್ಟಷ್ಟೂ ಹಿಗ್ಗು ನಿನಗೆ
ಹಸಿದ ತಬ್ಬಲಿ ಕೂಸು ನಾನು ಎದೆ ಹಾಲಿಗೆ

ಹಬೆಯಾಡಿದ ದೇಹ, ಹಿಗ್ಗರಳಿ ತೊನೆದ ಮುಖ
ಮುಖದಡಿ ಕೆಳಗೆ ಶಿಖರಾಗ್ರ ತೊಟ್ಟು
ಗಳ ನಡುವೆ ಜಾರಿದರೋ ಕೌತುಕದ ಗವಿ
ಪರವೂರಿನ ದಾರಿ

ಆದಾಗ ನಾನು ಕಣ್ಣು ಬಿಟ್ಟವನೋ,
ಕಗ್ಗಾಡ ನಡುವೆ ಕಣ್ಣು ಕಟ್ಟಿ ಬಿಟ್ಟವನೋ,
ನಿಜ ಹೇಳಿದರೆ ನೀನು ನಂಬಲಾರೆ
ನಾನಂತೂ ಆ ಕ್ಷಣದ ಮಗು!
ನಿನಗೆ ನಾನು ಹುಟ್ಟಿದ ನಿಮಿಷ
ತಾಯಿ, ನನಗೆ ಇಪ್ಪತ್ತೈದು ವರುಷ!

೪೪. ನನ್ನ ಕಪ್ಪು ಪ್ರತಿಬಿಂಬ

ಗುಬ್ಬಿಗಿಟ್ಟ ಗುರಿಯ ತೆಗೆದು
ಕಡಲಿನ ಎದೆಯ ಅವಳಿಗಿಟ್ಟೆ
ನಿಂತಲ್ಲಿ ನೀರಾದಳು, ಮೊಲೆ ತೊಟ್ಟಿಗೆ ಬಾಯಿಟ್ಟು ಮಗು
ಕಣ್ಣಿಂದ ನೀರು ತೊಟ್ಟಿಕ್ಕಿತು.

ಕಣ್ಣಲ್ಲಿ ಕಾಲಿಟ್ಟ ಸೂರ್ಯ
ತೂಗುತ್ತಿದ್ದ ಹಗಲು ರಾತ್ರಿ
(ಇಲ್ಲ ಕತ್ತಲು ಬೆಳಕು)
ಕಮಲದ ಪಿಸುಮಾತಿಗೆ ಕಣ್ತೆರೆದು
ಎದೆ ಕುದ್ದು ತುಪ್ಪಳ ಹಕ್ಕಿಗಳಾಗಿ
ಆಕಾಶ ತುಂಬ ಹಾರಾಡುತ್ತವೆ ರೆಕ್ಕೆಗಳು
ನೆಲ ಮುಗೀಲಿನ ಆಚೆಗೂ...

ಚಿಮ್ಮುವ ಯೌವನದ ಚಿತ್ತಾರದ ಮೈಯವಳು
ಊರ ಮುಂದಿನ ಕೂಡುದಾರಿಯಲಿ ಉಸಿರಿಟ್ಟಳು
ಯಾವ ಕಣ್ಣೀರಿನ ತಪ್ಪಿಗೋ ಕಪ್ಪು ಪ್ರತಿಬಿಂಬವಾಗಿದ್ದೆ

ಹಸಿರು ಮೆತ್ತಿದ ಕಾಡಿನ ಬುಡದಲಿ ಹರಿವ ನೀರು
ತೇಲುವ ಮೋಡ ಹಾರುವ ಅವಳ ಮುಂಗುರುಳು
ಬೆಂಕಿ, ಕಾಡು, ನಾಡು ನೆಲದಲಿ ನಿದ್ದೆ ಹೋದ ಕೂಸುಗಳು
ತೆವಳಿ ಬಂದು ಅವರು ನಿಂತಾಗ
ಮುಂದೆ ನಿಂತ ಜನರು ಮುಟ್ಟಿದರು.

೪೫. ಸಂಕರಮೂರ್ತಿ

ಈ ಮೈಮೇಲಿನ ಬಟ್ಟೆಯ ಹೆಸರು
ಷರಟು
ಇದರ ಗುಂಡಿ ಯಾರು ಮಾಡಿದರೊ
ಇದರ ದಾರ ಯಾವ ಮರದ ನಾರೋ
ಇದನ ಯಾರು ನೇದರೊ
ಇದು ನನ್ನ ಅಳತೆಗೆ ಹೊಲೆದ ಷರಟು.

ನಾನೂ ಹೀಗೇ ಷರಟಿನ ಹಾಗೇ...
ಅಜ್ಜಿಯ ಕಣ್ಣು ಅಮ್ಮನ ಹುಬ್ಬು,
ಸಂಪಿಗೆ ಮೂಗು, ಕೊಕ್ಕರೆ ಉಗುರು,
ತಾತನ ಹೆಸರು, ಪರಂಗಿ ಬಣ್ಣ
ಹತ್ತೆಂಟರ ಸಂಕರ ಸಂಕರಮೂರ್ತಿ

ನಮ್ಮ ಅಳತೆಗೆ ನಮ್ಮನ್ನ ಹೊಲೆದು
ಕೊಳ್ಳುವುದೆಂದರೆ ಸುಲಭವೇ?

'ಇದು ನನ್ನ ಬೀಜಾನೇ ಏನೇ'
ನನ್ನ ನೋಡಿ ಅಪ್ಪ ಅಮ್ಮನನ್ನ ಕಿಚಾಯಿಸುತ್ತಾನೆ.
ಯಾರು ಯಾರ ಬೀಜವೋ ಕಾಣೆ
ನಾನಂತೂ ನಾನಾಗಿದ್ದೇನೆ.
ಯಾರಾದರೂ ರೇಗಿಸಲೆಂದೇ
ಏನಯ್ಯಾ ಸಂಕರಮೂರ್ತಿ ಎಂದರೆ
ಖಂಡಿತಾ ಅವಮಾನವಿಲ್ಲ ನನಗೆ
ನಾನು ಸಂಕರಮೂರ್ತಿನೇ.

ಎಂದೂ ಕತ್ತಿ ಮಚ್ಚಿನ ಜೋಡಿ ಆಡಲಿಲ್ಲ
ಬಿಳಿ ಕಾಲರು ಕನಸಿನಲ್ಲೂ ತೊಡಲಿಲ್ಲ
ಇದು ಒಳಿತೇ ಎನಿಸಿದೆ ಇವಳಿಗೆ;
ಸ್ತ್ರೀವಾದ ತಪ್ಪಿಯೂ ಸುಳಿದಿಲ್ಲ ಬಳಿಗೆ
ಅವಳ ಕೈಯಲ್ಲಿ ಕೋಟು ನನ್ನ ಕೈಯಲ್ಲಿ ಸೌಟು
ನಮ್ಮ ಮನೆಗೂ ಒಂದು ಹಿತ್ತಿಲಿದೆ ಎಲ್ಲರ ಹಾಗೆ
ಬಚ್ಚಲ ನೀರು ದಿನಾ ಹರಿಯುತ್ತದೆ ಆ ಹಿತ್ತಿಲ ಮರಕ್ಕೆ
ಅದರ ಎಲೆ ಎಲೆಗೂ ಕಾಮನ ಬಿಲ್ಲಿನ ಬಣ್ಣ;
ಸದಾ ತೂಗುತ್ತವೆ ಒಂದೇ ಮರದಲ್ಲಿ
ಹಾಗಲ ಬೇವು ನಿಂಬೇ ಹಲಸು ಮಾವು
ಟೊಂಗೆ ಟೊಂಗೆಯಲಿ ತರಾವರಿ ಕಾಯಿ ಹಣ್ಣು ಹೂವು
ಬೇರೆಲ್ಲ ಇಲ್ಲೇ ಇದ್ದರೂ ಊರೂರು ಕೇರಿಗಳ
ದೇಸಾನುದೇಸಗಳ ಮಿನಿಯೇಚರು

ಮಗನೂ ಡಾಕ್ಟರು ಸೊಸೆಯೂ ಡಾಕ್ಟರು
ನಾನೂ ಆಗಾಗ ಇವಳನ್ನುಕಿಚಾಯಿಸುವುದುಂಟು
ಇವನು ನನ್ನ ಮಗಾನೇ ತಾನೆ?
ಹುಟ್ಟಿದ್ದೇನೋ ನಮಗೇ ರೀ
ಬೆಳೆದಿರುವುದು ಯಾರಿಗೋ!
ಫ್ರೀ ಸೈಜ್ ರೆಡಿಮೇಡು.

ನಮಗೂ ಒಬ್ಬ ಮೊಮ್ಮಗ ಇದ್ದಾನೆ
ನಿಮಗೂ ಇರುವ ಹಾಗೆ – ಸಂಬ್ರಕಾಗೆ *
ಬಹುಮಾನ ಬಂದಿದೆ ಅವನು ಬರೆದ ಚಿತ್ರಕ್ಕೆ
ನಾನು ಬಡಕೊಂಡೆ 'ನಟರಾಜನ ಚಿತ್ರ ಬರೆಯೊ
ಕಾಳಿಯ ಚಿತ್ರ ಬರೆಯೋ' ಕೇಳುತ್ತಾನಾ ಅವನು
ಅವನು ಅವನದೇ ಚಿತ್ರ ಬರೆದಿದ್ದಾನೆ;
ಇದರ ಸೆಲೆಗೆಟ್ಹೋಗ*
ಅದು ಯಾರ ಸಾಲಿಗೆ ಬಿದ್ದವನೋ ಕಾಣೆ.

---

* ಸೆಲೆಗೆಟ್ಹೋಗೆ – ಒಂದು ಪ್ರೀತಿಯ ಬೈಗುಳ ಪದ
* ಸಂಬ್ರಕಾಗೆ – ಅತ್ತ ಕಾಗೆಯೂ ಅಲ್ಲದ ಇತ್ತ ಕೋಗಿಲೆಯೂ ಅಲ್ಲದ ಒಂದು ಮಧ್ಯಮ ಜಾತಿಯ ಪಕ್ಷಿ

ಆ ಚಿತ್ರವೋ ಆ ದೇವರಿಗೇ ಪ್ರೀತಿಯಾಗಬೇಕು
ಅಲ್ಲಿ ಮ್ಯಾಪುಗಳು ಕಲಸಿಹೋಗಿವೆ ಅಡ್ಡ ತಿಡ್ಡ ರೇಖೆಗಳಲ್ಲಿ
ಥೇಟು ಅಟ್ಲಾಸು ಸೀಳಿ ಬೆಳೆದ ಕೆಂಚಣ್ಣ ಕರಿಯಣ್ಣರ ತಳಿಗೆ
ಇಪ್ಪತ್ತು ಕೈಗಳು ಹತ್ತು ತಲೆಗಳು.
ಅಲ್ಲಲ್ಲೋ ಮೂಲೆ ಮುಡುಕಲ್ಲಿ ಸ್ವಿಚ್ಚುಗಳು
ಒಂದೊಂದು ತಲೆಗೂ ತರತರದ ಕಣ್ಣು ಮೂಗು
ಒಂದೊಂದು ಕೈಗೂ ತರ ತರದ ವಾಚು, ಪೆಪ್ಪಿ
ಒಂದೊಂದು ಕಾಲಿಗೂ ಹೆಣೆದ ಪುಡಿಬೇರು ಗಡಿರೇಖೆ

ಒಂದೊಂದೂ ಆ ಮರ ಆ ಮರ ಆಮರ ಆ ಮ
ರಾಮ ರಾಮ ನೂರು ನೂರೆಂಟರ ಸಂಕರ ಲೋಕ

ಇಂದಿನ ಆದಿಯಾದಿಯ ಬಲ್ಲವರಾರು?
ನಾಳೆಯ ಗಾಳಿಯ ಸೋಸುವರಾರು?
ಸಾಗರವ ಬಲೆ ಹಾಕಿ ಮೀನುಗಳಂತೆ
ನದಿಗಳ ಜರಡಿ ಹಿಡಿಯಲುಬಹುದೆ!

೪೬. ಅಗ್ನಿಸೂಕ್ತ

ಹೀಗೆ, ಯಜಮಾನ ಕಿಚ್ಚು ಇರುಳೆಲ್ಲ ಆವರಿಸಿ
ಕಣ್ಣು ಕಿವಿ ಮೂಗು ಕರಗಿ ಹೋಗಿ,
ಎಲ್ಲೋ ತೇಲಿದ ಸೆರಗ, ಎಲ್ಲೋ ಮುದುಡಿದ ಮನಸ
ನನ ಕೂಸಿನರಿಚಾಟ, ಇರಿದು ಬೀಳುವ ಆಚೆ ಕೇರಿಯ ಹುಂಜ
ಧುತ್ತನೆಬ್ಬರಿಸಿ – ನಿನ ನೆನಪ ತರಿಸಿ.

ಬಾರೆಬಾರಲೆ ಬೆಂಕಿ –
ಈ ಮಣ್ಣು ಕಸಿದ ಒಲೆ, ಈ ತಣ್ಣಗಿರುವ ಒಲೆ –
ಬಾ ಇಲ್ಲಿ ಕುಕ್ಕರಿಸು –
ನನ ಕೂಸ ಹಸಿವಿನ ಬೆಂಕಿ, ಯಜಮಾನ ಬೆಂಕಿ
ಎಲ್ಲ ಆರುವ ಹಾಗೆ ಕೂರು ಬಾ ಇಲ್ಲಿ.
ಈ ಮಡಕೆಯನ್ನುರಿಗೈಯಲ್ಲಿ ಮುಟ್ಟಿ ಮುಟ್ಟಿ
ಸವರುತಿರು ಮಸಿ ಬರದ ಹಾಗೆ
ಈ ಹಸಿಗೊರಡಲ್ಲಿ ಉರಿಯೋ ಹೊಗೆ ಬರದ ಹಾಗೆ.

ಲೋ, ದೇವರ ಬಸಿರಚೀಲದೊಳಕ್ಕೆ
ಈ ನೆಲವಂಟಿಸಿದ ಹೊಕ್ಕುಳ ಬಳ್ಳಿ
ತಾರೋ ಆ ಬ್ರಹ್ಮಾಂಡ ಹೊಟ್ಟೆಯಿಂದ
ನನ್ನ ಹಸಿವಿಗೆ, ಇವರ ಹಸಿವಿಗೆ, ಆವರ ಹಸಿವಿಗೆ
ಕೊನೇಪಕ್ಷ ಕಲಬೆರಕೆ ಅಮೃತವನ್ನು;
ಇಲ್ಲ ಹೊಟ್ಟೆ ಚೀವೆ ಸೀವ ಯಮದ ಕಿಚ್ಚನ್ನು.

ನಾಕಾಣೆಗೊಂದು ಮಡಕೆಯ ಕಾಲ ಆಗಿಹೋಯಿತು ಕಾಣೋ,
ಈಗದಕೊಂದು ಬೆಂಕಿಕಡ್ಡಿ ಬರದು!
ಯಜಮಾನ ರಟ್ಟೆಯ ಬೆಲೆ ಕುಸಿದು
ಆದಕೀಗ ಚಿಕ್ಕಾಸು ಕೂಡ ಸಿಗದು.
ಕೋಳಿ ಕೆದರಿದ ಕಾಳು, ಮಗ ಕದ್ದ ಕಾಳು,
ಗಂಡನ ಸಾರಾಯಿ ಮರೆಸಿ ಬೀಸಿದ ಹಸಿಟ್ಟು ಕಾಣೋ, ಇದು,
ಸುಮ್ಮನೆ ಸವರುತಿರು; ನೆಕ್ಕಬೇಡ.
ಇರೋ ಒಂದು ಮಡಕೆಯನು ಸಿಡಿಸಬೇಡ.

ನನ್ನ ಎದೆಯಿಂದ ಹೊರತೆಗೆದ ನನ್ನ ಅಡುಗೆಮನೆ ಸರದಾರ.
ನನ್ನ ಚಿಮಣಿಯ ಬೆಳಕೆ,
ನನ್ನ ಕಣ್ಣೀರ ಕಿಡಿಯೆ –
ಹೇಗಾದರೂ ಈ ಕಲಬೆರಕೆ ಹಸಿಟ್ಟ ಅಡುಗೆ ಮಾಡು,
ಕಲ್ಲ ಕರಗಿಸಿ ಮಂತ್ರ ವಿದ್ಯೆ ಮಾಡು,
ಬಾರೋ ದೇವರ ದೂತ, ನನ ಸವತಿಯ ಮಿಂಚ, ಮುದ್ದೆ ಮಾಡು.

೪೭. ನವನೀತವಾಗುವುದಕ್ಕೆ...

ವ್ಯಾಸ ಉಂಡು ಎಸೆದ ಎಂಜಲೆಲೆ;
ಗಾಳಿ ಬೀಸಿದ ಹಾಗೆ, ಹರಡುತಿದೆ ವಾಸನೆ.
ಆಚರಣೆ, ಸಿದ್ಧಾಂತಗಳ ತಲೆಕೆಳಗು ಮಾಡಿ,
ಅಂದಾದುಂದಿ ಲಂಘಿಸಿದ ಆಸೆಗಳನ್ನಲ್ಲೇ ಅದುಮಿ,
ಥಿಕ್ಕಿಯಾಗಿದೆ- ವೃಂದಾವನದ ತುಳಸಿಗೆ.

ಅಜ್ಜ ಉಟ್ಟು ಮೆರೆದಿದ್ದ ಪಟ್ಟೆ ಪೀತಾಂಬರ;
ಅಪ್ಪನದಾಗುವಾಗಲೇ ಅರ್ಧಾಯುಷ್ಯ ಸವೆದು,
ಈ ನಡುವೆ ಬರಿಯ ಪೂಜೆಗೊದಗುತ್ತಿರುವ ಮುಗುಟ.
ನವೆದು ಹಿಸಿದ, ಕಮಟು ನಾತದ ಜರತಾರಿ.
ಕಾಯುತ್ತಿದೆ ನನಗೆ- ವರ್ತಮಾನದ ಒಡೆಯನಿಗೆ.

ವಿಶ್ವಾಮಿತ್ರ ಸ್ವರ್ಗದಲ್ಲಲೆಯುತ್ತಿರುವ ನಹುಷ ಸಂತತಿಗೆ.
ಕೊಡುವಾತುರದ ಅವಿವೇಕ, ಭಂಗಿ ನುಂಗಿದ ಪೆಡಸು.
ಸಪ್ತರ್ಷಿಗಳಿಗೂ ರಾಜನಣತಿಯ ಬಿರುಸು,
ಕಣ್ಣು ಕಂಡಲ್ಲೆಲ್ಲ ದೊಂಬಿ, ದಾಸರ ಕುಣಿತ.
ಆಟಾಟೋಪ ತಗ್ಗುವುದಕ್ಕೆ ಪರ್ಯಾಯ ಪರ್ವ ಮುಗಿಯಲೇಬೇಕು?

ಬರಿಗೊಡಗಳಿಗಿಷ್ಟು ದಿನ ಸಮಾಧಾನ;
ಹೇಳುತ್ತಲೇ ಕಾಲ ಸವೆಸಿದ ಬೀದಿಯ ನಲ್ಲಿ,
ಗೊರಗುಡುತಿದೆ ಸುಡು, ಸುಡುವ ಈ ಮಧ್ಯಾಹ್ನದಲ್ಲಿ.
ಕಣ್ಣಾಪು ಕಿತ್ತು, ಕೆನೆದು ಕೇಳುತಿದೆ ಕುದುರೆ,
ಗುರಿ ಇರದ ಓಟಕ್ಕೆ ನನ್ನನಟ್ಟುವೆಯೆ, ನೀನೆ ತಂದೆ.

ಬಿಚ್ಚಿಕೊಳ್ಳುತ್ತಲೇ ಇರುವ ಕತೆಗಳೊಟ್ಟಿಗೇ ಬೆಳೆವ,
ನಮ್ಮೊಳಗೇ ಇರುವ ಎಷ್ಟೊಂದು ತಾಕಲಾಟಗಳು,
ಹಸ್ತಿನಾವತಿಯರಸುವನ್ನೂ ನಾಚಿಸುವ ಕುರುಡುಗಳು,
ಲಂಕೇಶನನ್ನೇ ಮೀರಿಸುವ ಅಸಂಖ್ಯ ತಲೆಗಳು,
ಹರಿಶ್ಚಂದ್ರ, ದಧೀಚಿ, ಜೀಮೂತವಾಹನರ ಚಿತ್ರಗಳು.

ಹಾಗೇ ತಳಾತಳಕ್ಕಿಳಿದು ಅಂತಃಸತ್ವವನ್ನೆತ್ತಿಕೊಳ್ಳುವ
ವರಾಹದ ಕೋರೆ ದಾಡೆಗಳ ಬಲಿಷ್ಠ ಶಕ್ತಿ,
ಕಲ್ಲು ಕಂಬವನ್ನೊಡೆಸಿ ಹೊರತರುವ ಭಕ್ತಿ,
ಪರಸ್ಪರರ ಕೊಲ್ಲುತ್ತ ನಾಶವಾಗುತ್ತಿರುವಕ್ಷೋಹಿಣಿಗಳ ವಿರಕ್ತಿ,
ನಡುವೆ ವಿಶ್ವರೂಪ ದರ್ಶನದ ಸಮ್ಯಕ್ ಜ್ಞಾನದ ಯುಕ್ತಿ,

ದೇಶ ಕಾಲಗಳ, ಕವಿತೆ ಸಾಲುಗಳ ದಂಡ,
ಉದ್ದಂಡ ನಮನ- ಈ ದೇಹ ದೇವಾಲಯದ ಮೂರ್ತಿಗೆ.
ಬೆಳಕು ಚಿಮ್ಮುತ್ತಿರಲಿ, ತಮದ ಗುರುತಿನ ಮೇಲೆ;
ವಲ್ಮೀಕ ಒಡೆದು, ಮಹರ್ಷಿ ಪಡಿಮೂಡುವುದಕ್ಕೆ,
ಸ್ಥಿತ್ಯಂತರದ ಸತ್ಯ ಒಳಗೇ ಮಥಿಸಿ ನವನೀತ ಹುಟ್ಟಿಬರುವುದಕ್ಕೆ!?

೪೮. ಹಸಿರ ಹೊರೆ

ಅವನು ಕೈ ಹಿಡಿದಾಗಲೆಲ್ಲ
ಅವನ ನೆನಪು
ಅಪ್ಪಿ ಬೆಚ್ಚಗಿದ್ದಿದ್ದೆಲ್ಲ
ಇಲ್ಲಿ ತಣ್ಣಗೆ

ಒಂದೇ ಬೊಗಸೆಯ
ನೀರಾದರೂ ರುಚಿ
ಏಕೋ ಬೇರೇ ಬೇರೆ
ತಿರುಗಣಿಯ ತಿರುವಿನಲ್ಲಿ
ಹೇಳಲಾರದ
ಕೇಳಲಾರದ
ಭಾವನೆಗಳು

ಅಲ್ಲಿ ನಿರಂತರ ಮೌನವಿದ್ದರೆ
ಇಲ್ಲಿ ಮಾತು
ನೋಡಿದ್ದು ಅನುಭವಿಸಿದ್ದು
ಅಂಕೆಗೆ ಸಿಕ್ಕರೂ
ಸಿಗದಂತೆ ಹಾರಿಹೋಗಿದೆ
ಗಾಳಿಯಲ್ಲಿನ ಬಿಂದುವಾಗಿ
ಮಳೆಹನಿಯಲ್ಲಿನ ತುಂತುರಾಗಿ

ನೀಡಿದ್ದೇನೆನ್ನುವ ಕೌತುಕದಲ್ಲಿ
ಕಳೆದುಕೊಂಡಿದ್ದೆ
ತಿಳಿಯದೆ ಕತ್ತಲಾಗಿದೆ

ಬೆಳ್ಳಂಬೆಳಗಿನ
ಬರೀ ಬೆಳಕಲ್ಲಿ
ಹರಿದ ಪ್ರೀತಿಯ
ಮಹಾಪೂರ
ಸಾಗಲಾಗದೆ
ನಿಲ್ಲಲಾಗದೆ, ನಿರಾಳವಾಗಿದೆ.

ಕಂಡಿದ್ದು ಕಪ್ಪು ಕನಸಾ?
ಅಥವಾ
ಹಾಡುಹಗಲಿನಲಿ
ಹೆತ್ತ ನನಸಿನ ಕೂಸಾ?
ಅಲ್ಲಿ
ಹೊದೆಸಿದ ಹಸಿರು
ಹೊರಿಸಿದ ಹೊರೆ
ಇಲ್ಲಿ
ಮೈದುಂಬಿ ಫಲ ನೀಡಿ
ಕೆಳಗಿಳಿದು ಖಾಲಿಯಾಗಿದೆ.

೪೯. ಪ್ರತಿಫಲ

ಕಂದಾ
ಹದಬೆಂದ
ಮಲ್ಲಿಗೆಯರಳಿನ ಅನ್ನಕ್ಕೆ
ಘಮಘಮಿಸುವ ತುಪ್ಪ
ರುಚಿಗಿಷ್ಟು ಉಪ್ಪು
ಮೇಲೊಂದಿಷ್ಟು ಮಮತೆ ಸುರಿದು
ಅಮೃತವೆಂದೇ ಕಲಸಿ
ಪುಟ್ಟ ಪರಶುರಾಮನ
ಬಾಯಿಗೆ ತುತ್ತಿಟ್ಟ ರೇಣುಕೆ
ಹಾರೈಸಿದ್ದು ಆದರ್ಶಪುರುಷನಾಗೆಂಬ
ಅಶ್ರುಧಾರೆಯ ಹಾರೈಕೆ
ಅವನ ಬಾಯ್ತುಂಬ
ಪ್ರಮಾಣಗಳ ಮೊಳಕೆ!

★

ಕಂದಾ
ಮೆದ್ದ ಅನ್ನಕ್ಕೆ ತಿಳಿದಿದ್ದ ಸತ್ಯ
ಜಾರಿದ ಕಣ್ಣೀರಿಗೆ ಹೃದ್ಯವಾದ ಮಮತೆ
ಎದೆ ತುಂಬಿ ಜಾರಿದ ಪ್ರಮಾಣ
ಕಾಲನೊಂದಿಗೇ
ಗಾಳಿಯಲ್ಲಿ ತೂರಿಹೋಗಿ
'ನಿನ್ನ ಸಾವೇ ನನ್ನ ಬದುಕು'
ಎಂದ ಬೆಳೆದ ಪರಶುರಾಮನ ನುಡಿ ಕೇಳಿ
ತಲೆ ಕಡಿಸಿಕೊಳ್ಳುವ ಮುನ್ನವೇ
ಸತ್ತ ರೇಣುಕೆಯ ವಿಷಾದದ ನಗೆ
ಕಂದನೇ ಹಗೆಯಾದ ಬಗೆಗೆ
ಅತ್ತು ಇಂಗಿತ್ತು ಕಣ್ಣೀರು
ಹರಿದಿತ್ತು ನೆತ್ತರು!

★

ಕಂದಾ
ಪರಶುರಾಮನೀಗ ಜಗಮಾನ್ಯ
ಬಲಿಯಾದ ರೇಣುಕೆ ಇತಿಹಾಸಕ್ಕೆ ನಗಣ್ಯ
ತುತ್ತಿತ್ತ ಋಣಕ್ಕೆ
ಅವನ ಇತಿಹಾಸದಲ್ಲಿ
ಅನಿವಾರ್ಯವಾಗಿದ್ದಾಳೆ ರೇಣುಕೆ
ಅವನು ಎತ್ತರಕ್ಕೆ ಬೆಳೆದುಬಿಟ್ಟ ನೆಪಕ್ಕೆ
ಅವನ ಭವಿಷ್ಯದಿಂದ ಹೊರಕ್ಕೆ!

★

ಕಂದಾ
ಈ ನಾಡ ಕಥೆಗಳೇ ಹೀಗೆ
ಎಲ್ಲವೂ ಅಪೂರ್ವ
ಎಲ್ಲವೂ ಕಟುವಾಸ್ತವ!
ಹೊಸತೇನಿದೆ ಇಲ್ಲಿ?
ನೀತಿ ಕಥೆಗಳು ಕಲಿಸಿದ ಪಾಠ
ನಿತ್ಯ ಕಂಠಪಾಠ!

೫೦. ದೇವರ ದನ

ಛಿದ್ರ ವಿಛಿದ್ರ ಹಪಹಪಿಗಳು
ಕಪ್ಪು ಕೊಡೆಯ ಮೇಲೆ
ಕೆಂಪು ಮಖಮಲ್ ಮೈಯ ದೇವರ ದನ
ಕಂಡೂ ಕಾಣದಂತೆ ಚಲಿಸುತ್ತ'ದೆ
ಕಣ್ಣೀರು ಗುಪ್ಪೆಯಾಗಿ ಮಖಮಲ್ ಮೈಯಾಗುತ್ತದೆ
ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ
ಹತ್ತು ಹನ್ನೆರಡರ ವಯಸ್ಸು
ಯೌವನದಂಚಿನ ಕತ್ತಲೆಯಲ್ಲಿ
ಮೊಂಬತ್ತಿ ಹಚ್ಚಿ ಬೆತ್ತಲಾಗಿ ನಿನ್ನೆದುರು
ಧ್ಯಾನಸ್ಥವಾದ ಹೊತ್ತು
ನಿನ್ನ ದೇಹದ ಗಮಲು
ನನ್ನ ಬೆಳಗಿಗೆ ಪಾರಿಜಾತವಾಗುತ್ತದೆ
ಮೊದಲ ಮಳೆಗೆ ಮೈಯೊಡ್ಡಿ ಮೇಲೆದ್ದು ಬಂದ
ಕೆಂಪು ಮಖಮಲ್ ಮೈಯ ದೇವರ ದನ
ಸ್ಪರ್ಶಕ್ಕೆ ಗುಪ್ಪೆಯಾಗಿ, ಕೆಂಪು ಹನಿಯಾಗಿ
ನನ್ನ ಅಂಗೈಯಿಂದ ಜಾರುತ್ತದೆ
ಏರಿಳಿಯುವ ಕಾಡುಗುಡ್ಡಗಳಲ್ಲಿ
ಸುರಿವ ಮಳೆ ಸಹಸ್ರ ಸಹಸ್ರ ಪಾತ್ರಗಳಲ್ಲಿ ಹರಿಯುತ್ತದೆ
ಈ ತಡಿಯಲ್ಲಿ ಆವಾಹಿಸಿಕೊಳ್ಳುತ್ತೇನೆ

ದಟ್ಟೈಸಿದ ಮೋಡ, ಭೋರ್ಗರೆಯುವ ಸಾಗರ
ನಿನ್ನ ಹಸಿರು ಕೆಸರಿನ ಕೆಂಪು ಮಣ್ಣಿನ ದೇಹದಲ್ಲಿ
ಪ್ರತಿಗೀರಿಗೂ ಒಂದು ಪ್ರವಾಹ
ನನ್ನ ಆ ಗಟ್ಟಿ ಕಲ್ಲಿನ ಕೆಂಪು ಮಣ್ಣಿನ ಬಿರುಕುಗಳಲ್ಲಿ ಹರಿಸುತ್ತದೆ ಸೆಲೆ
ಆ ಅನಾಹತ ಮಳೆ

ನಾನಿಲ್ಲಿ ಬಾಚಿಕೊಳ್ಳುತ್ತೇನೆ.
ನಿನ್ನ ಏರು ಹರಹುಗಳಲ್ಲಿ
ನನ್ನ ಬದುಕಿನ ಮಣ್ಣಾ ವಾಸನೆ

ಮತ್ತೆ ಇಲ್ಲವಾಗುತ್ತೇನೆ
ಈ ಮಣ್ಣಲ್ಲೇ ಗಮ್ಯ ಹುಡುಕುವಂತೆ
ಕಾಣದಾಗುತ್ತದೆ ಕೆಂಪು ಮಖಮಲ್ ಮೈಯ ದೇವರ ದನ

ದೇವರ ದನ ಅಂತ ಆಡುಭಾಷೆಯಲ್ಲಿ ಕರೆಸಿಕೊಳ್ಳುವ ಒಂದು ಅಪರೂಪದ ಪುಟ್ಟ ಜೀವಿ, ಮಲೆನಾಡು, ಕರಾವಳಿಯ ಕೆಲವು ಪ್ರದೇಶಗಳಲ್ಲಿ ಮೊದಲ ಮಳೆಯ ಹೊತ್ತಿಗೆ ಭೂಮಿಯಿಂದ ಮೇಲೆದ್ದು ಬರುತ್ತದೆ.

೫೧. ವಕ್ರೀಭವನ

ಮನೆಯಲ್ಲಿದ್ದುದು ಒಂದೇ ಕನ್ನಡಿ
ಪರಿಷೆಯಲ್ಲಿ ತಂದದ್ದು
ಬೆಲ್ಜಿಯಮ್ ಗಾಜು ಬೀಟೆ ಮರದ ಫ್ರೇಮು, ಗದೆ ಭಾರ
ದೇವರಗೂಡಿನ ಮಗ್ಗುಲಿಗೆ ಈ ದರ್ಪಣ ಸ್ಥಾವರ
ಈ ಬತ್ತಿ ಎಳೆಯುವವರು, ಗಂಧದ ಬೊಟ್ಟಿಕ್ಕುವವರು
ಕಂಚಿ ಕುಂಕುಮ ಸರಿ ಮಾಡಿಕೊಳ್ಳುವವರು
ಎಲ್ಲರೂ ಅಲ್ಲೇ, ಅದು ಇದ್ದಲ್ಲೇ, ಎಟುಗದಿದ್ದರೂ ಮೆಟ್ಟಿಲುಗಾಲೇರಿಸಿ
ಸಕುಟುಂಬ ಸಪರಿವಾರ ಬಳಕೆ; ಲಗತ್ತು ಸ್ಥಿರ ಎಚ್ಚರಿಕೆ
''ಕೈಯಲ್ಲಿ ಹಿಡಿಯಬ್ಯಾಡ್ರೇ, ಗೋಡೆ ಮೇಲಿದ್ದಂಗೆ ನೋಡಿಕೊಳ್ರೇ''

ನಾವು ಅಕ್ಕ ತಂಗೇರು ಕದ್ದು ಮುಚ್ಚಿ
ಅಮ್ಮನಿಲ್ಲದ ಹೊತ್ತು ಮೊಳೆಯಿಂದ ಇಳಿಸಿ
ನಡುಮನೆ ಬೆಳಕಿಗೆ ಹುಷಾರಾಗಿ ಸಾಗಿಸಿ
ಒಬ್ಬರಾದ ಮೇಲೊಬ್ಬರು ನೋಡಿಕೊಂಡು...
ಇದ್ದುದ್ದ ಇದ್ದಂಗೇ ತೋರಿಸುತ್ತಿತ್ತು
ದಪ್ಪಗಿದ್ದರೆ ದಪ್ಪಗೆ ಕಪ್ಪಗಿದ್ದರೆ ಕಪ್ಪಗೆ
ಮೂಗಿನ ಹೊರಳೆ ಎತ್ತಿದ್ದವಳಿಗೆ ಎತ್ತಿ
ಎಸೂಳು ಮೂಗನ್ನು ಎಸೂಳಾಗೇ ಇರಿಸಿ

೨

ಹಾಸ್ಟೆಲ್ಲಿನಲ್ಲಿ ಎಷ್ಟೊಂದು ಕನ್ನಡಿಗಳೆಂದರೆ
ಬಾಗಿಲಿಗೊಂದು, ಕದಕ್ಕೊಂದು
ಟ್ರಂಕೊಳಗೊಂದು, ವ್ಯಾನಿಟಿ ಜಿಪ್ಪಿಗೊಂದು
ಒಂದೇ ರೂಮಲ್ಲಿ ಕಿಕ್ಕಿರಿದಂತೆ
ಹನ್ನೆರಡು ತುಪ್ಪೇರದ ದರ್ಪಣ
ತಿಪಟೂರಿನ ಕೊಬ್ಬರಿ ಮಂಡೀ ಹುಡುಗಿ
ಒಂದು ಮಗ್ಗುಲು ಕಿಟಕಿಯನ್ನೇ ಮುಚ್ಚಿಬಿಟ್ಟಿದ್ದಳು
ಮೂರೂವರೆ ಅಡಿಯ ಅರೆನಿಲುವುಗನ್ನಡಿ ತೂಗಿ
ಮಲೆಯಾಳಿಯದು ಐದು ಮೂಲೆಯ ಆಯನ
ಮೇಲೊಂದು ಮಾಯಾ ಮುಚ್ಚಳ ಬೇರೆ
ವಿಜಯವಾಡದ ಕನ್ನಡಿಯ ಸುತ್ತ
ಪರ್ಪಸ್ಸೇ ಮರೆಸುವಂತ ಕುಸುರಿಗೆಲಸ

ನಾವುಗಳು ನಂಮ್ಮೆತ್ತರಕ್ಕನುಕೂಲವಾದ ಕಡೆ
ಅವಳಿಗಿಂತ ಇವಳಿಗಂತ ನಾನೇ ಚೆಂದ ಎನಿಸುವೆಡೆ
ಬ್ಯಾಕ್‌ಬಟನ್ನಿನ ಹುಕ್ಕು ಭದ್ರವೇ
'ಬ' ಪಟ್ಟಿ ಹದ್ದುಬಸ್ತಿನೊಳಗಿದೆಯೇ
ನೈಲೆಕ್ಸ್ ಸೀರೆಯ ಸುರುಗಿ ಹಿಮ್ಮಡಿಯನು ಮುಚ್ಚಿದೆಯೇ
ಇತ್ಯಾದಿ...
ಭೂಗೋಳಿಕ ವಿವರಗಳ ತಪಶೀಲಾದ ಮೇಲೆ
ಹಗೂರ ಪ್ಲಾಸ್ಟಿಕ್ಕಿನ ಕಟ್ಟಿನಲ್ಲಿ ಹುದುಗಿದ್ದ
ಹ್ಯಾಂಡ್ ಮಿರರ್ರಿನಲಿ
ಮುಖ ಚರಿತ್ರೆ

೩

ಕೆಲಸಕ್ಕೆ ಸೇರಿದೆ; ಎಪ್ಪತ್ತರ ದಶಕದ ಕೊನೆಯರ್ಧ
ರಿಪೋರ್ಟಾದ ದಿನವೇ ಸಾಹೇಬರು ಆದೇಶಿಸಿದರು
'ಎಮರ್ಜೆನ್ಸಿ ಜಾರಿಯಲ್ಲಿದೆ ಗೊತ್ತೇನ್ರೀ
ಕಾಲಕ್ಕೆ ಸರಿಯಾಗಿ ಡ್ಯೂಟಿಗೆ ಬರ್ರಿ
ಹೊತ್ತು ಪಕ್ಕಾದ ಮೇಲೇ ಕಛೇರಿ ಬಿಡ್ರಿ'

ಮೊಟ್ಟಮೊದಲ ಸಂಬಳದಲ್ಲೊಂದು ಸ್ವಂತ ಕನ್ನಡಿ ಕೊಂಡಿದ್ದೆ
ಬಸ್ಸು ಹತ್ತಿ ಇಳಿದು
ಮುಂದಿನದು ಬಂದೀತೋ ಇಲ್ಲವೋ
ಸದಾ ಭಯದಲ್ಲೇ ಕಾಯ್ದು ಕಾಯ್ದು ಕಾಯ್ದು
ತುಥ್ ಇದರವ್ವನ...
ಕನ್ನಡಿಯ ಸದುಪಯೋಗವಿರಲಿ
ದುರುಪಯೋಗವೂ ಆಗಲಿಲ್ಲ ಕಣ್ರೀ

೪

ಅತ್ತೆಯಿಲ್ಲದ ಅತ್ತೆ ಮನೆ ಸೇರಿದೆ
ಪಡಸಾಲೆಯಲ್ಲಿ ನರಸಿಂಹದೇವರು ಏಕಕಾಲಕ್ಕೆರಡು ಸಲ
ಉದ್ಭವಿಸಬಹುದಾದ ದೊಡ್ಡ ಅಲಮಾರು
ಅದಕ್ಕಂಟಿಸಿದ್ದ ಆಳೆತ್ತರದ ಕನ್ನಡಿ
ಇತ್ತಬಂದರೆ ಅತ್ತ ಹೋದರೆ ಅನಾಮತ್ತಾಗಿ
ಚಲನವಲನಗಳ ಮಹಜರು

ವಕ್ರೀಭವನ ನಿಯಮಾನುಸಾರ ಈ ಸಪಾಟು ಮಸೂರ
ಅಡುಗೆಮನೆಯಲ್ಲಿದ್ದರೂ ಬಿಂಬಿಸುತ್ತಿತ್ತು
ನನ್ನನ್ನು ಇಡೀ ಮನೆಗೆ
ಈ ಮುಂಡೇದನ್ನ ಕಳಚಿಬಿಡೋಣವೆಂದು
ಸ್ಕ್ರೂಗಳನ್ನೊಂದೊಂದೇ ಸಡಿಲಿಸುತ್ತಬಂದೆ
ಅಷ್ಟೊತ್ತಿಗೆ ಬಸುರಿ
ಬಾಣಂತಿ ಕೋಣೆಗೆ ಕನ್ನಡಿ ನಿಷಿದ್ಧ
ಒಂದು ದಿನ ಯಾವುದೋ ಮಾಸ್ ಕ್ಯಾಂಪಲ್ಲಿ
ಯಶಸ್ವಿ ಸಂತಾನಹರಣ ಶಸ್ತ್ರಚಿಕಿತ್ಸೆ

೫

ಹೊಸ ಮನೆಯಲ್ಲಿ
ರೂಮಿನ ಅಳತೆ ಮೊದಲೇ ಅಳೆದು
ಕ್ಯೂಟಾಗಿಯೂ ಟಫ್ ಆಗಿಯೂ, ನೈಸಾಗಿಯೂ ಇರುವ
ಡ್ರೆಸ್ಸಿಂಗ್ ಟೇಬಲ್ ತಂದಿರಿಸಲಾಗಿದೆ
ಮುಂದೊಂದು ಕುಂಡೆಯೂರಲು ಗಿಡ್ಡಮಣೆ
ಅಂಗರಾಗಗಳಿಗೆಲ್ಲ ಕ್ರಮಾನುಸಾರಿ ಮುಚ್ಚುಖಾನೆ
ಕೂತಂತೆಯೇ ಎಲ್ಲ ಪಾರ್ಶ್ವಗಳೂ ತೆರೆದು
ವದನಾರವಿಂದಕ್ಕೇ ಸೀದಾ ಬೆಳಕು ಬಿದ್ದು
ವಾಹ್! ... ಅದ್ಭುತ
ಕೆಲಸ ಮುಗಿಸಿ ಬಂದು ನಿಲ್ಲುತ್ತೇನೆ
ಅದರ ಮುಚ್ಚಳ, ಅದರ ಬಿರಡೆ, ಅದರ ತಲೆ ಇದರ ಕಾಲು,
ಸ್ಟಿಕ್ಕು, ಪಿನ್ನು, ಬ್ಯಾಂಡು, ಕ್ಲಿಪ್ಪು... ಸಂತೇ ಗೋಜಲು
ಈಡಾಡಿರುವುದನ್ನೆಲ್ಲ ಒಕ್ಕಲೂಡಿ
ಒರಸು ಸಿಗದಿದ್ದರೆ ಸೆರಗಲ್ಲೇ ಗಾಜಿನ ಧೂಳೊರೆಸಿ
ಆ ನಡುವೆ ಮುಖ ಕಂಡರೆ
ನಂದೇನಾ ಎಂದುಕೊಳ್ಳುತ್ತ...

೬

ಅಕ್ಕಾ ಕೇಳೇ,
ನಾನೆಷ್ಟೊಂದು ಕನ್ನಡಿ ಕಂಡೆ!

೫೨. ಒದ್ದೆ ಮಣ್ಣಿನ ತುಂಬಾ ಚುಕ್ಕೆ ಚಿತ್ತಾರ

ಅಂಬರದೊಡಲು ಹೊತ್ತಿದ್ದ ಕಪ್ಪು ಮೋಡದ
ಅಳಲು ಕರಗಿ ಬೆಳ್ಳಿದೀಪದ ಮಿಂಚು
ಬೆಳಕಲ್ಲಿ ಹನಿ... ಹನಿ... ದೇವತೀರ್ಥ
ಮೇಲೆ ನೀಲಿಯಲ್ಲಿ ನೀರತೇರನುತ್ಸವ

ಸಡಿಲಗೊಂಡ ಬೇರುಗಳು ಮತ್ತೆ ಮಣ್ಣನ್ನು
ಅಪ್ಪುಚುತ್ತಾ ಭದ್ರವಾಗುತ್ತಲೇ ನಿಧಾನ...
ಹಳದಿ ಎಲೆಗಳ ಮರದ ತುಂಬೆಲ್ಲಾ
ಹಸಿರು ನೆತ್ತರ ಸಂಚಾರ

ಮಂತ್ರಾಕ್ಷತೆ ಎರಚಿದಂತೆ ಹುಲ್ಲದಳಗಳ
ಮೇಲೆಲ್ಲಾ ನೀರ್ಮಣಿಗಳ ಇಂಚರ
ಮುಗಿಲ ಮುತ್ತಿನ ಮಣಿಗಳ ಆಲಿಕಲ್ಲು
ನೀರಾಗುವ ಮುನ್ನ ಪೋಣಿಸಿ ಮುಡಿಯುವಾತುರ

ಎಲ್ಲ ಕೊಳೆ ಕೊಚ್ಚಿಹೋದ ಸ್ವಚ್ಛ
ದಾರಿಯುದ್ದಕ್ಕೂ ಇವನ ಹೆಜ್ಜೆ ಗುರುತು ನಿಚ್ಚಳ
ಮುಖ ತೊಳೆದೆದ್ದಾ ಇವಳೆದೆಯ ತುಂಬಾ
ಬರೀ ಮಳೆಯದೇ ಸಪ್ಪಳ

ಅದೆಷ್ಟು ಕಥೆ, ಕವಿತೆ, ನಾಟಕ, ತತ್ವಪದ
ಬಿಸಿಲ ಬದುಕ ಸಂತೈಕೆಗೆ!
ಸಾಲದೇ ತುಂತುರು ಜೀವಮಳೆ
ಒಡಲಾಳದ ತಣಿಕೆಗೆ?

ನೀರಹನಿಸಿ ಉಸಿರ ಮುಡಿಸಿ
ಕಣ್ಣಾಪಾಪೆಯಲ್ಲಿ ಹಸಿರು ತೇವವಿರಿಸಿ
ಅತಿಥಿ ಮಳೆ ನೇಪಥ್ಯ ಸರಿವಾಗ
ಒದ್ದೆ ಮಣ್ಣಿನ ತುಂಬಾ ಚುಕ್ಕೆ ಚಿತ್ತಾರ
ಹೂ ಬಿಟ್ಟ ಗಿಡದಲ್ಲೆಲ್ಲಾ ನವಿಲು ವಯ್ಯಾರ

೫೩. ಗಿಳಿಯು ಪಂಜರದೊಳಿಲ್ಲ...

ನಡೆದರೆ ಧಿಗಿಧಿಗಿ ಎನ್ನುವ ನೆಲ
ಪಾದದಿಂದ ನೆತ್ತಿಯ ತನಕ ಉಕ್ಕಿ ಹರಿವ ಚೈತನ್ಯ
ಅಷ್ಟದಿಕ್ಕುಗಳಿಗೂ ಕೈಚಾಚಿ ತಬ್ಬುವ ತವಕ
ನಿನ್ನ ಅಪ್ಪುಗೆಯಲಿ ಪಾಪಿ - ಪರದೇಶಿಗಳ ಮೈ ಪುಳಕ!

ನೂರಾರು ಮೈಲುಗಳಾಚೆ ನೀನಿದ್ದರೂ
ನಿಂತ ತಾವಿನಲ್ಲೇ ನನಗೊಂದು ಧೈರ್ಯಗಂಬ
ನಿಸ್ತಂತುಗಳ ಜಾಡು ಹಿಡಿದು ಬರುವ
ನಿನ್ನ ದನಿಯೇ ಮೈ-ಮನಗಳಿಗೆ ನವಿರು ಬಿಂಬ!

ಬದುಕಿನ ಸಾವಿರ ಸಾವಿರ ಸಂಕಷ್ಟಗಳು
ಮೂಡಿಸಲಿಲ್ಲ ನಿನ್ನ ಮುಖದ ಮೇಲೆ ಒಂದೂ ಸುಕ್ಕು
ತರಲಿಲ್ಲ, ಅಪ್ಪನಂಥ ಅಪ್ಪನ ಅಗಲಿಕೆಯೂ
ನಿನ್ನೊಡಲೊಳಗೆ ಒಂದೂ ಬಿಕ್ಕು!

ಕರುಳ ಕುಡಿಗಳಿಗಾಗಿ
ತುಟಿ ಕಚ್ಚಿ ನುಂಗಿದ ನೋವು
ತಿಂದೀತೆ ನಿನ್ನೊಳಗನ್ನು
ಅಣು-ಅಣುವಾಗಿ ಮಧುಮೇಹದ ರಾಹು?

ಸಾವು-ನೋವುಗಳ ನಡುವೆಯೂ ಬತ್ತದ ಪ್ರೀತಿಯೊರತೆ
ಸುಧೆಯ ಸವಿ ತೀರುವ ಮುನ್ನವೇ ಬಂದ ಕಾಲನ ಮರೆತೆ!
(ಅ) ಕಾಲನ ಕರೆಗೆ ಓಗೊಡುವಾಗ ಗಿಳಿಯು ಪಂಜರದೊಳಿಲ್ಲ!
ನೀನುಳಿಸಿ ಹೋದ ಶೂನ್ಯದಲಿ ಅಶ್ರುಬಿಂದುಗಳೇ ಎಲ್ಲ!!

ಎಳೆ ಬಿಸಿಲ ಇಬ್ಬನಿ ಕರಗಿ, ಸುಡು ಬಿಸಿಲ ಬೇಗೇಗೆ ಒರಗಿ
ಸಂಜೆಗೆ ಮಾಗಿ ರಸ ತುಂಬುವ ಮುನ್ನ ತೊಟ್ಟು ಕಳಚಿತಲ್ಲ
ನೀ ನಂಬಿದ ಕಿಡಿಗೇಡಿ ದೈವಕೆ ಕರುಣೆಯೆಂಬುದಿಲ್ಲ!
ಜಗವೆಂಬ ಜಗಕೆ ಕವಿದ ಕಾವಳ, ಶಿಶಿರದ ಸೂರ್ಯ ಮುಖದೆರೆಯಲಿಲ್ಲ!!

ನಿನ್ನ ಕೊನೆಯ ಪಯಣದಲಿ ಅತ್ತವರ್‍ಯಾರೋ ಬಿಕ್ಕಿದವರ್‍ಯಾರೋ
ಆಳಲಾಗದೇ ಒಳಗೊಳಗೆ ನೊಂದವರ್‍ಯಾರೋ ಬೆಂದವರ್‍ಯಾರೋ
ಸ್ಫಟಿಕ ಶುದ್ಧ ಪ್ರೀತಿಗುಂಟೆ ಜಾತಿ ಮತ ಕುಲ ಸೂತಕ?
ಆ ವಿಶ್ವ ರೂಪ ದರುಶನದಲಿ ನಾನಾದೆ ಪರುಷ ಸೋಂಕಿದ ಲೋಹಕ!

ಕನಸಲ್ಲಾದರೂ ಬಂದು ಹೇಳಬಾರದೇನೆ ಅವ್ವ
ನಿನ್ನ ಬದುಕಿನ ರೀತಿ - ನೀತಿಯ ಗುಟ್ಟು?
ಎನಿತು ಕಾಲ ನಿನ್ನೊಡನಿದ್ದರೂ
ನೀನಾಗಿ ಹೋದೆ ಒಂದು ಒಡೆಯಲಾಗದ ಒಗಟು!

೫೪. ಮಾತುಗಳು ಏನನ್ನೂ ಹೇಳಲಾರವು

೧

ಆ ತಂಪು ಕಣ್ಣುಗಳಿಗಾಗಿ
ಅರಸುತ್ತ ಕಳೆದೆ ನಾನು.

ಸಿಕ್ಕಿದಾಗ ಹಿಗ್ಗುವುದನ್ನೂ
ಮರೆತು.

೨

ಮಾತುಗಳು
ಏನನ್ನೂ ಹೇಳಲಾರವು.

ವಿವರಿಸ ಹೋದಷ್ಟೂ
ತಿವಿಯುವ ಕೊಂಬಿಗೆ
ರೆಕ್ಕೆ ಮೂಡುತ್ತದೆ.
                ಅವಮಾನಕ್ಕೆ
                ಜೀವ
                ಅಲ್ಲಾಡುತ್ತದೆ.

೩

ಇಲ್ಲೇ ಇರುವುದನ್ನು
ಇನ್ನೆಲ್ಲೋ ಹುಡುಕುತ್ತೇವೆ.

ಕಾಲಿಗೆ ತೊಡರಿಕೊಳ್ಳುವ
                ಬಳ್ಳಿಯನ್ನು
ತುಳಿದು ಸಾಗುತ್ತೇವೆ.

೪

ಪ್ರೀತಿಯ ರುಚಿ
ತಮಗಷ್ಟೇ ದಕ್ಕಿದೆ
ಎಂದು ಹಿಗ್ಗುವವರು
ಹಿಗ್ಗುತ್ತಲೇ ಇರುತ್ತಾರೆ.

ತನ್ನ ಹುಡುಗನಿಗಾಗಿ
ಕನವರಿಸುವ
ಪುಟ್ಟ ಹುಡುಗಿಯ
ಸಡಗರದ ಮೇಲ್ಪದರವನ್ನೂ
ಅವರು ಸ್ಪರ್ಶಿಸಲಾರರು.

ತನ್ನ ಅಪಾರವಾದ
ದುಃಖವನ್ನು

ಆ ಹುಡುಗಿ
ನಿಧಾನ ಮರೆಯುತ್ತಾಳೆ
ಎಂಬುದು ಅವರಿಗೆ ಗೊತ್ತಿರುತ್ತದೆ.

ಒಸರುವ ಹಸಿ ರಕ್ತಕ್ಕಾಗಿ
ಕಾದಿರುವ
ಕಪ್ಪು ಬೆಕ್ಕಿನಂತೆ

ಆ ಒಂದು ಕ್ಷಣಕ್ಕಾಗಿ
ಅವರು
ಕಣ್ಣಾಪಾಪೆ ಮುಚ್ಚದೆ ಕಾದಿರುತ್ತಾರೆ.

೫

ನೋಡಿದ್ದೇನೆ:

ಹೊತ್ತಿ ಉರಿಯುವ
ಸಾವಿನಂತಹ ನೆನಪುಗಳನ್ನೂ
ಮಾರುಕಟ್ಟೆಗಳಲ್ಲಿ
ಕೊಳ್ಳಬಹುದು
ಎಂದು ಬೀಗುವ ಮಂದಿಯನ್ನು

ತಲೆತುಂಬ
ಸಿಡಿಮದ್ದಿನ ಮಂಕು ತುಂಬಿ
ಊದಿ ಉಬ್ಬಿಸಿಕೊಂಡು
ತಮ್ಮದೇ ಗಾಳಿ ಬೆಲೂನು

ಮಣಕು ಹೆಣಗೆಗಳಲ್ಲಿ
ಅವರು
ಮೆರವಣಿಗೆ ಹೊರಟಿರುವುದನ್ನು.

ಕರುಣೆಯಿಂದ ಬಿಗಿವ ಅವರ
ಇಡಿಯಾಗಿ ಅಪ್ಪಲೇ
ಮಾರುವೇಷದಲ್ಲಿ ಸುಳಿವ ಅವರ
ಕಣ್ಣೀರ ಒರಸಲೇ
ಸುಳ್ಳು ಕಪಟಗಳ ಸರದಾರರು
ಅವರ ಗುರುತು ಸಿಗಿದು ನಗಲೇ
ಚಿನ್ನದ ನಗೆ ಅಂಟಿಸಿಕೊಂಡು
ಮಾಯೆಯಾಗಿ ಕಾಡಲೇ

ನಡೆಯುತ್ತಲೇ ಇದ್ದೇನೆ
ನಾನು.

ಸ್ಫೋಟಿಸುವ ಕಾಮದಂತಹ
ಅವರ ವಾಂಛೆಗಳಿಂದ ದೂರ.

೬

ಹರಿವ ಕಣ್ಣೀರಿಗೆ
ಹಿಮ್ಮೆಟ್ಟಿದೆ ಕಾಲ.

ಉರಿವ ಗೋಲವಾಗಿದೆ
ಇದು ಬರಿ, ದೇಹ.

ಬಯಲ ಆ ತುದಿಯಲ್ಲಿ
ಕೇಳುವ ಕಿವಿಗಳೆ ಇಲ್ಲ,
ಆಡುವ ಮಾತುಗಳಿಗೆ
ಆಕಾರವೆ ಇಲ್ಲ.

ದೀರ್ಘವಾಗುತ್ತ ನಡೆದಿವೆ
ರಾತ್ರಿ ಉಗಿವ ನೆರಳುಗಳು
ಬಟ್ಟಲಿನಂತೆ ಉರಿಯುತ್ತಿದ್ದಾನೆ
                ನಿಶ್ಚಲ
ಪಿಸುರುಗಣ್ಣಿನ ಸೂರ್ಯ.

ಸಿಗಲಾರವೇ ನನಗೆ
ಆ ಕಣ್ಣುಗಳು ಇನ್ನೆಂದಿಗೂ
ಮರೆತು ಬಿಟ್ಟವೆಯೇನು
              ನಾನಿಲ್ಲಿ
ಮರೆತು ಬಿಟ್ಟಿರುವ ಹಾಗೆ.

ಕಿತ್ತು ನಿನ್ನ ದನಿಯನ್ನು
ನನ್ನೆದೆಗೆ ಮೆತ್ತು.

ಕಳೆದು ಹೋಗುವಂತೆ ನಾನು

ಮಳೆಬಯಲಲ್ಲಿ
ಮಿಂಚಲ್ಲಿ
ಗುಡುಗು ಸಿಡಿಲುಗಳಲ್ಲಿ.

ಹೃದಯ ಕಲಕುವ ಹಾಡಿನ
ಮಂಡಿಗೆ ಮುಖವೂರಿ;
ನುಗ್ಗಿ ಬರುವ ನೆನಪುಗಳ
ನೆಲದೊಳಗೆ ಹೂಳಿ.

೭

ನಡೆಯುತ್ತಲೇ ಇದ್ದೇನೆ
ನಾನು

ನಿಜದ ನೆಲೆ ನಿಜಕಿಲ್ಲ.

೫೫. ವಿಷಯ

ಅಹಲ್ಯೆಯ ಮನೆಯಿಂದ ಹೊರಬಿದ್ದ
ಬೆಕ್ಕು
ಈ ಕಕ್ಕಾಬಿಕ್ಕಿ ಮನ!
ಒಳಗೊಳಗೇ ಕಂಡ ಕಂಡ ಕದವ
ತಟ್ಟಿ ಮೆಟ್ಟಿ
ಮೊಸರಂಟಿಕೊಂಡ ಮೂತಿ
ತಪಸ್ಸಿಗೆ ಕೂತ ಪರಿ
ಪಂಚತಂತ್ರದ ನರಿ

ಇಂದ್ರಿಯಗಳ ನಿಗ್ರಹಕ್ಕೆ
ಬಿದ್ದು
ಕೊತಕೊತ ಕುದಿವಂತರಂಗ
ವಾರೆನೋಟದಿಂದ ಕಂಡದ್ದೆಲ್ಲವ
ಚಪಲದೊಳಗೆ ನಾದಿ
ಲಟ್ಟಿಸಿ ಅಟ್ಟದ ಮೇಲೆ ನಿಂತು
ನಿಂತ ನೆಲೆ ನೆಲ ಎಂದು
ಮರೆವ ವ್ಯಾಧಿ

ಮಲ್ಲಿಗೆಯ ಬಿಡಿಸಿದ ಬೆರಳು
ಮಾಲೆಯ ಜಪಮಣಿಯ ಸರಿಸಿ
ಗಾಳಿ ಹೊತ್ತು ತಂದ ಸುಗಂಧಕ್ಕೆ
ಮೂಗು ಮತ್ತೆ ಮಹಾರಂಪ!
ಹೊಗೆಯೂ ಬೆಂಕಿಯೂ ಕೂಡಿ
ಕೂಟಕ್ಕೆ ಹಾ! ತೊರೆವ
ನಿರ್ಲಜ್ಜತತ್ತ್ವ

'ಅತ್ತಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ'
ಎಂದೆ
ಮನದ ಕಾಲುಗಳನ್ನು ಕತ್ತರಿಸುವವರಾರೋ
ಇದು ಕತ್ತರಿಸಿಕೊಂಡಷ್ಟೂ
ಚಿಗುರುವ ಹೂ ಹಸಿರು
ರಕ್ತಬೀಜಾಸುರನ ತವರು
ಅದುಮಿಟ್ಟು ಒತ್ತಡಕ್ಕೆ
ಎಷ್ಟೊಂದು ತತ್ತ್ವ ಪುರಾಣ ವೇದಾಂತ
ಎಣೆಯಿಲ್ಲದ ಬಯಕೆಗೆ ಅಣೆಕಟ್ಟು!

ಆಪಲ್ಕೆಯ ಮನೆಯಿಂದ ಹೊರಬಿದ್ದ
ಬೆಕ್ಕು
ನಗಲಿಲ್ಲ
ಮೀಸೆಯಡಿ ಮಿಂಚಿದ
ಬೆಳಕು ಹಾಗೆ ಕಂಡಿತ್ತು.

೫೬. ಗೂಡು ಕಟ್ಟುವ ಚಿತ್ರ

ದುಷ್ಟರ ಜೊತೆ ಮಾತಾಡಬಾರದೆಂದು
ನಿರ್ಧರಿಸುವೆ. ಹಾಗೆ ನಿರ್ಧರಿಸಿದ ಕ್ಷಣದಿಂದ
ನನ್ನ ಜೊತೆ ಮಾತಾಡಿಕೊಳ್ಳಲು ಕೂಡ ಭಯವಾಗುತಿದೆ.

ಈ ಜಗತ್ತಿನ ಅಪ್ರತಿಮ ಮೋಸಗಾರ್ತಿ
ಅವಳೇ ಇರಬಹುದೇನೋ ಎಂದುಕೊಂಡರೆ
ಅಂದು ಗಾಳಿಯಲಿ ತೊನೆದಾಡುತ್ತಿದ್ದ
ಅವಳ ಮುಂಗುರುಳಿನ ನೆನಪು
ಎದೆಯಲ್ಲಿ ಕಾಲೂರಿ ನಿಂತಿದೆ.

ದೇವರುಗಳನೆಲ್ಲ ಒಡೆದು ಚಿಂದಿ ಚೂರು ಮಾಡಿ
ಚರಂಡಿಗೆಸೆಯಬೇಕೆಂದಿರುವೆ.
ಬೆಳಗ್ಗೆಯಿಂದ ಅಕ್ಕಿ, ಹಿಟ್ಟು ಅರಿಶಿನ, ಕುಂಕುಮ,
ವೀಳ್ಯದೆಲೆ, ಹಣ್ಣು ಹೂವು... ಹಿಡಿದು ನಿಂತವರು
ಆರ್ತವಾಗಿ ನುಡಿಯುತ್ತಿದ್ದಾರೆ; ನಮಗಿರುವ
ನಂಬಿಕೆಯ ಕೊನೆಯ ಗುರುತನ್ನು ಅಳಿಸಬೇಡ ಎಂದು.

ಧರ್ಮಗುರುವಿನ ಪ್ರವಚನ
ರಾಜಕಾರಣಿಯ ಭಾಷಣ
ಕವಿಯ ಕಾವ್ಯ
ಇವುಗಳ ನಡುವಿನ ವ್ಯತ್ಯಾಸವನ್ನಳಿಸಿದವರು
ಯಾರೆಂದು ಹುಡುಕುತ್ತಿದ್ದೇನೆ
ಯಾರೊ ಹೊಗೆ ಹಾಕಿ
ಜೇನುಗೂಡಿನಿಂದ ರಸ ಕದ್ದಿದ್ದಾರೆ
ಇದ್ಯಾವುದರ ಪರಿವೆಯಿಲ್ಲದಂತೆ
ಸಾವಿರಾರು ಜೇನುಗಳು ಮತ್ತೆ ಗೂಡುಕಟ್ಟುವ
ಚಿತ್ರ ಕಣ್ಣು ತುಂಬಿದೆ.

ಆಳರಸರ ನಖಗಳು ಎಷ್ಟು ತೀಕ್ಷ್ಣವಾಗಿವೆ.
ಅದೆಷ್ಟು ಸೊಗಸಾಗಿ ಇರಿಯುತ್ತಾರೆ
ಚೂರೂ ಗಾಯವಾಗದಂತೆ

ನೀರನ್ನು ಕಲಕುತ್ತಲೇ ಇದ್ದಾರೆ ತಿಳಿಗೊಳಿಸುತ್ತೇವೆಂದು.
ಇವರನ್ನು ಎದುರಿಸುವುದು ಹೇಗೆಂದುಒದ್ದಾಡುತ್ತಿದ್ದರೆ...
ಹರಕು ಅಂಗಿಯ ಪೂಗದಸ್ತು ಗಡ್ಡದ ಬಾಬಾ ಹೇಳುತ್ತಿದ್ದಾನೆ;
'ನಮ್ಮಂಥ ಫಕೀರರ ಗೆಳೆತನ ಮಾಡಿರಿ
ನಿಮಗೆ ಬಾದಷಹಾನನ್ನು ಸೋಲಿಸುವುದು
ಹೇಗೆಂದು ಕಲಿಸುತ್ತೇವೆ.'

೫೭. ಪರದೇಶಿ

ಅಪರಂಪಾರ ಘನ ಆಕೃತಿಗಳನ್ನು
ನಾನು ಕಂಡಿದ್ದೇನೆ
ಅವು ನನ್ನ ಮುಟ್ಟಿವೆ ತಟ್ಟಿವೆ
ಬಡಿದಿವೆ ಕೆಲವೊಮ್ಮೆ ಕವುಚ ಹಾಕಿವೆ
ನಾನು ಸುಯ್ಯುವ ಉಸಿರಿನೊಂದಿಗೆ
ಅಗಾಧ ದಹಿಸಿದ್ದೇನೆ, ಕಾದಿದ್ದೇನೆ
ಆ ಆಕೃತಿಗಳಿಗೆ ಕಣ್ಣು ಮೂಡಿ
ಕಣ್ಣಾಳದಲಿ ಬೆಳಕ ಸೆಲೆಯೊಡೆದು
ಸೆಲೆ ತುಂಬಿ ಹನಿ ಮೊಗೆದು
ಬಿತ್ತುವ ಹಸಿ ಹಂಬಲದಲಿ.

ಆ ಆಕೃತಿಗಳು ಉಣ್ಣುವುದನ್ನ ತಿನ್ನುವುದನ್ನ
ಮಲಗುವುದನ್ನ ಮಥಿಸುವುದನ್ನ
ದೇವರೆದುರು ಗಂಟೆಯೆತ್ತಿ ಬೆಳಗುವುದನ್ನ
ಗೋಮಯ ಹಾಕಿ ಎಂಜಲೆತ್ತುವುದನ್ನ ಕಂಡಿದ್ದೇನೆ.
ಎಷ್ಟೆಲ್ಲ ಬೆಳಗು ಕತ್ತಲುಗಳಲಿ
ನಾನು ಅವುಗಳೊಂದಿಗೇ ಉಳಿದಿದ್ದೇನೆ
ಕೇಳಿದ್ದೇನೆ ಆ ದೇವರನ್ನ
ಓ ದಯಾಮಯ ಭಗವಂತನೆ,
ಬೇತಾಳಗಳ ಬೀದಿಯಲಿ ಅಲೆವ
ಪರದೇಸಿಯ ತಾಪ ನಿನಗೆ ತಿಳಿದಿರಲಿ.

ಒಂದು ಬೆಳಗು
ಕಡಲು ನನ್ನ ಕನಸಿಗೆ ಬಂದು ಸುದ್ದಿ ಹೇಳಿತು
ಬೇಲಿ ಬದಿಯ ಸುಗಂಧಿ ತನ್ನ ಒಡಲಿಂದ
ಒಸಗೆ ಕಳಿಸಿತು
ನನ್ನ ಕಣ್ಣೀರಿಗೆ ಪಹರೆ ಹಾಕಿದ ಬೇತಾಳಗಳಿಗೀಗ
ಮಾಯದ ನಿದಿರೆ
ನಾನು ಸತ್ಯಾದ್ರಿಯ ತುದಿಯನ್ನೇರಿದೆ.
ತಾಯ ಒಡಲಿನಂಥ ಕಡಲಿಗೆ ಕೂಗಿ ಹೇಳಿದೆ –
ನೋಡೀಗ ನನ್ನ ಬಳಿ ಯಾವ ಆಕೃತಿಗಳಿಲ್ಲ
ಉರಿಗಣ್ಣಿಲ್ಲ, ಇರಿವ ಉಗುರುಗಳಿಲ್ಲ
ಯಾವುದೂ ನನ್ನ ಮೆಟ್ಟಿ ಬೀಳಿಸುವುದಿಲ್ಲ.

ರಾತ್ರಿಗಳು ಬೇನೆ ತಿನ್ನುತ್ತ ಹಗಲ ಕೂಸುಗಳ ಹೆತ್ತಿವೆ
ನೋವಿನ ಸಣ್ಣ ಸಣ್ಣ ಚಳಕುಗಳಲಿ ಜೀವ ಸೋತಿದೆ.
ನನ್ನ ನೆನಪುಗಳ ಗಿರವಿ ಹಿಡಿದ ಬೇತಾಳಗಳ
ಬಿಡಿಸಲು ಈಗಲೂ ಅದೇ ಓಟ, ಅದೆ ಸಂಕಟ ಸುಸ್ತು.

೫೮. ಕದ್ದರೆಂದು

ಅವರು ನಮ್ಮ ಪಾಲಿನ ರೊಟ್ಟಿ ಕದ್ದರೆಂದು
ನಾವು ದೂರುವುದು ಬೇಡ.
ಅವರ ಹೊಟ್ಟೆ ತಣ್ಣಗಿರಲಿ –
ನಮ್ಮ ಹೊಟ್ಟೆಗಳಿಗೆ ತಣ್ಣೀರು
ಸಮಾಧಾನ ಹೇಳಬಲ್ಲುದು.

ಅವರು ನಮ್ಮ ರಾತ್ರಿಯ
ನಿದ್ದೆ ಕದ್ದರೆಂದು
ನಾವು ಹಲುಬುವುದು ಬೇಡ.
ಅವರು ನಿದ್ದೆಯಿಂದ
ಎಚ್ಚರಾಗದಿರಲಿ –
ಈ ನಿದ್ರಾಹೀನ ರಾತ್ರಿಗಳಲ್ಲಿ
ನಕ್ಷತ್ರಗಳು ನಮ್ಮ ಜೊತೆಗಿರುತ್ತವೆ.

ಅವರು ನಮ್ಮ ತುಟಿಯ
ಮೇಲಿನ ನಗೆಯ ಕದ್ದರೆಂದು
ನಾವು ದುಃಖಿಸುವುದು ಬೇಡ.
ಅವರು ಸದಾ ಮಂದಸ್ಮಿತರಾಗಿರಲಿ
ನಾವು ಇಡೀ ಜಗತ್ತಿನ ಕಣ್ಣೀರಿಗೆ
ಬೊಗಸೆಯಾಗೋಣ.

ಅವರು ನಮ್ಮ ರೊಟ್ಟಿ, ನಿದ್ರೆ
ಮತ್ತು ನಗೆಯನ್ನು ಕದ್ದದ್ದಕ್ಕೆ
ಒಂದು ಸಲ ನಾವು ಆ ಮೇಲಿನವನ
ಅದಾಲತ್ತಿನಲ್ಲಿ ನ್ಯಾಯ ಕೇಳೋಣ.
ಆದರೆ, ಸದ್ಯದ ಸ್ಥಿತಿ ಹೇಗಿದೆ
ನೋಡು,
ಅವರು ಕದಿಯಬೇಕೆಂದರೂ
ನಮ್ಮ ಬಳಿ ಏನೂ ಉಳಿದಿಲ್ಲ!

ಅವರು ನಮ್ಮಷ್ಟೇ ನಿರುಪಾಯರಾದ
ಬಗ್ಗೆ ನನಗೆ ಖೇದವಿದೆ.

೫೯. ಆ್ಯಕ್ಸಿಡೆಂಟ್ ಜಾಗದಿಂದ ನೇರ ಪ್ರಸಾರ..

ಎಡವಿಬಿಟ್ಟಿದೆ ರೈಲು ಸುರಂಗದಲ್ಲಿ
ಗಾಳಿಪಟ ನಿಂತಂತೆ ಆಕಾಶದಲ್ಲಿ

ಲೇಖಕ: ಆಹಾ ಎಂಥ ರೂಪಕ
ರಕ್ತ ಹರಿದಿದೆ ತುಂಬು ಹೊಳೆಯಂತೆ
ರೈಲೋ, ಮುಳುಗಡೆಯಾದ ಊರಿನಂತೆ

ವಿಮರ್ಶಕ: ಸಾವು ಬದುಕಿನ ಮಾಪಕ
ಹಳಿಯ ತಪ್ಪಿತೆ ಅದು, ಮತ್ತೇರಿ ಎಡವಿತೆ
ಕಳೆದುಕೊಂಡಿತೆ ಬದುಕು ತನ್ನ ಲಯವ

ಶೋಷಕ : ಇಲ್ಲ ಜ್ಞಾಪಕ
ಸತ್ತ ಚಿಣ್ಣರು ಕನಸುಗಣ್ಣರು
ಮಣ್ಣಾಗಿಹೋದರು ಎಲ್ಲರೂ

ಕುಡುಕ: ಹಳಿಯೆ ಒಂದು ಸ್ಮಾರಕ
ಬೋಗಿಗಳೆಲ್ಲ ಅತ್ತಿತ್ತ ತೂಗಾಡಿ
ಕೂಗಿಕೊಂಡವೇ ನೀಗಿಕೊಂಡವೇ

ಭಾವುಕ: ಬದುಕು ಒಂದು ಆಕಸ್ಮಿಕ
ಸುದ್ದಿಪತ್ರಿಕೆಯ ಸದ್ದಿನಲ್ಲಿ
ಕರಗಿಹೋಗುವುದು ರೈಲಿನ ಚುಕುಬುಕು

ಸೈನಿಕ : ಸಾಯವುದೇ ಕಾಯಕ

೬೦. ಗೋಡೆ

ಉಪ್ಪು ನೀರ ಸಾಗರ
ಮೌನ ಮರಳ ತೀರ
ಒಂದರ ಮೇಲೆ ಒಂದು
ಒಂದರ ಪಕ್ಕ ಮತ್ತೊಂದು
ಇಟ್ಟಿಗೆ ಜೋಡಣೆ ನಾಜೂಕು
ಜಡೆ ಹೆಣೆದು ನಕ್ಷತ್ರದ್ದೊಂದು
ಮಿನುಗು ಕ್ಷಣದಲ್ಲಿ
ಖಾಲಿ ಸೈಟಿನಲ್ಲೊಂದು ಬೇನಾಮಿ ಕಟ್ಟಡ

ತಳಪಾಯದಲ್ಲಿ ಉಸಿರು ಸಿಕ್ಕಿ
ಬಿಕ್ಕುತ್ತದೆ ನರಳಾಟ
ನೆನಪುಗಳ ಹೆಬ್ಬಾವು ಭೂತ
ಕಾಲನೇಟಿಗೆ ಹೊರಳಿ ಹೊರಳಿ
ನುಂಗಿದ ನೋವು ದೇಹದ ಮೂಳೆ
ಮುರಿದು ಕಟಕಟ ಸದ್ದು
ಜೀರ್ಣಗೊಂಡಿತೇ?
ಅಸಹನೆಯ ಅಜೀರ್ಣ ನೋಟ.

ಗೋಡೆ
ಏಳುತ್ತಾ ಏಳುತ್ತಾ ಮೊಳೆ ಹೊಡೆತ
ಕರುಳು, ಕನಸು, ಕನವರಿಕೆಗಳ
ನೇತು ಹಾಕಲು ಸನ್ನದ್ಧ
ಯುದ್ಧವಿಲ್ಲದ ಸೋಲುಗಳು
ನಾಲಿಗೆಯ ನಂಜು ಚೂರಿ

ಹೃದಯಗಳಲ್ಲಿ ಎರೆಹುಳುವಿನ ಒದ್ದಾಟ
ಬಾಂಬುಗಳು ಮೌನಗೊಂಡ ಬಳಿ
ನಿಶ್ಶಬ್ದದ ಸ್ಫೋಟ ಕಾಲಬುಡದಲ್ಲಿ
ಹಿಡಿಬೂದಿಯ ಮಹಾಕೂಟ

ಗೋಡೆ ಎತ್ತರ ಎತ್ತರ
ಆಕಾಶಕ್ಕೂ ಲಗ್ಗೆ ಇಟ್ಟು
ಬಿದ್ದ ಲಗೋರಿ ಕಲ್ಲುಗಳ ಜೋಡಿಸಿ
ಆಟ ಗೆಲ್ಲಿಸುವವರು ಯಾರು?
ಸುತ್ತಲೂ ನಿಂತಿದ್ದಾರೆ ಹಿಡಿದು ಚೆಂಡು
ಕಲ್ಲುಗಳ – ಉರಿವ ದೊಂದಿಗಳಿಗೆ ಕಟ್ಟಿ

ಗೋಡೆ ಏಳುವ ಮುನ್ನ
ಗೊತ್ತಿರಲಿಲ್ಲ ಎರಡೂ ಬದಿಯವರಿಗೆ
ಇಷ್ಟೆಲ್ಲಾ...
ಹೀಗೆಲ್ಲಾ... ಆಗುತ್ತದೆಂದು
ರಕ್ತದ ಬದಿ ಉರಿತದ ಮೈಯ್ಯ
ಮೆತ್ತಿಕೊಳ್ಳುತ್ತದೆಂದು

೬೧. ಚರಿತ್ರೆಯ ಜಾಡ ಆಚೆಗೆ

ಇವಳೇ,
ಎಲಿಯಟ್ಟನ ವೇಸ್ಟ್‌ಲ್ಯಾಂಡಿನ
ಪ್ರಬುದ್ಧತೆಯ ಧಾರ್ಷ್ಟ್ಯದೆದುರು
ನಮ್ಮೂರ ಸಂಜೆಕಥೆಗಳ 'ಒಂದಾನೊಂದೂರು'
ಹೀಗೇ... ಮಾಸಿ ಹೋಗುತ್ತದೆನ್ನುವಾಗ
ಈ ಹುಚ್ಚನ ಕನಸುಗಳು ಬಂದುವು.
ಬಂದು ಎಲ್ಲ ಕೊಳಕು, ಕೊಳೆ, ಕೊಳಚೆಗಳಿಗೂ
ತನ್ನದೇ ಕುಂಚದಲ್ಲಿ
ಬಣ್ಣ-ಬಣ್ಣ - ಬಣ್ಣ ಬಳಿದು
ಕೇಸರಿ - ಬಿಳಿ-ಹಸಿರಾಗಿಸದೇನೇ
ಬಂದು ಚೆಂದ ತಂದುವು.
.... ಒಂದಾನೊಂದೂರು ವೇಸ್ಟಾಗಲಿಲ್ಲ.

★

ಆದರಿಲ್ಲೊಬ್ಬನ ನಾಯಿ ಮನ ದಶಕದಿಂದಲೂ
ನಿನ್ನೆಯ ಚಕ್ರ ತಿದ್ದುವವನ ಕೈ ಮೀರಿ, ಕಣ್ ಮೀರಿ
ಚರಿತ್ರೆಯ ಟೇಪು ಬಿಚ್ಚಿದರೆ?
ಪಾಂಚಜನ್ಯವೆಂದು
ಭ್ರಮಿಸಿದವನ ಕೈಯಲ್ಲಿದ್ದುದು
ಒಂದಾನೊಂದೂರ ಹೊಸ ಯುಗದ
ಕಹಳೆಯೂದಲು ಹಾತೊರೆದವನ ಬಾಯಲ್ಲಿದ್ದ
ಜಾತ್ರೆಯ ಪೀಪಿ!
'ಎಲ್ಲ ಬಳ್ಳಿಗಳ ಕಿತ್ತೂ ಅಂತಸ್ಥನಾಗದೆ
ಹೊರಬರುವ ವಿದ್ಯೆ ಕಲಿಯಬೇಕು' ಎಂದೂವಿದರೆ
'ಯದಾ ಯದಾಹಿ ಧರ್ಮಸ್ಯ...
ಸಂಭವಾಮಿ ಯುಗೇ... ಯುಗೇ' ಕೇಳುವುದು
ಚರಿತ್ರೆಯ ರೀಲಿನಲಿ.

ಇವಳೇ,
ಅಲ್ಲಿ ಒಂದಾನೊಂದೂರೇ ಇಲ್ಲವೆ?

ರೀಲು, ರಿಯಲ್ಲುಗಳ ಒಂದಿಷ್ಟೂ
ಅಂತರ ತಿಳಿಯದೆ ಕಕ್ಕಾಬಿಕ್ಕಿಯಾದವರಿಗೆ
ಸತ್ಯ, ಸುಳ್ಳು, ಗಾಂಧಿ...
ಯಾರು?! ಎಲ್ಲಿ?
ಯುಗದ ಸಾರವ ಹರಳುಗಟ್ಟಿಸಿ
ಬುದ್ಧ ಗಾಂಧಿ, ರಾಮ.... ರಾಮ?
ಬುದ್ಧರಾಮ, ಗಾಂಧಿ ರಾಮ... ರಾಮರಾಮಾ...
ಪಲ್ಲಕ್ಕಿ-ಪಾದುಕೆಗಳ
ಮೆರವಣಿಗೆ ಮುಂದೆ, ರಥ ಹಿಂದೆ...
ಹಿಂದೆ... ಹಿಂದೆ...

★

ಈಗ, ಇಲ್ಲದ ಒಂದಾನೊಂದೂರ ಕೇರಿಯ
ಗೂಡಂಗಡಿಯ ಬೈಟೂ
ಟೀನಲ್ಲಿ ಬಲೆ ಹಾಕಿ ಕನಸುಗಳ
ಹಿಡಿದವರ ನಡುವೆ
'ಮಧ್ಯಾಹ್ನ ಮಲ್ಲಿಗೆಯ ಮುಡಿದವಳು
ಸಂಜೆ ಅಳಲೇಬೇಕೀಗ!
'ತೆಂಗು ಗರಿಗಳ ಬೀಸಿ ಕೈಚಾಚಿ ಕರೆದವಳ'
ಕೊನೆಗೂ ನಿನ್ನ
ಹೊಟ್ಟೆ ಚರಂಡಿಗೇ ಸೆಳೆದುಕೊಂಡು
ಹಸಿವ ಇಂಗಿಸುವ ಭರದಲಿ
ಯೂರಿಯಾವನೆ ನುಂಗಿದ ಬಸುರಿ.
ಇವಳೇ
ನೀನೀಗಲೂ 'ಫಲವತ್ತಾದ ಕಪ್ಪು ನೆಲ'ವೇನೇ?
ಬಸಿರಿಳಿದವಳ ತವರಲಿ
ಇದ್ದಬದ್ದವರೆಲ್ಲ ಗಡ್ಡಧಾರಿಗಳಾಗಿ ವಿಭೂತಿ-ವೀಸಾ!
ನಾಡಿ ಬಡಿತಕೂ ಕೆಂಪು-ಕೇಸರಿ ಲೇಬಲ್ ಇಲ್ಲಿ!
ಮತ್ತೊಂದರ ಕ್ಯಾಂಟೀನಿನ ಬೈಟೂ ಟೀಗೆ
ನಮ್ಮ ಜೊತೆಗೂ ಬರುವ
ಇವಳೇ,
ಸದಾ ವತ್ಸಲೇ
ನಿಶ್ಚಿಂತೆಯ ನಿದ್ದೆಗೆ ಇನ್ನೂ ಎಷ್ಟು ದಿನ?

೬೨. ಕಾಡುವ ಕನಸುಗಳು

ಕಂಬಳಿ ಹೊದ್ದು ಕಣ್ಮುಚ್ಚಿದ ಕ್ಷಣ
ಕನಸುಗಳದೆ ಮೆರವಣಿಗೆ
ಅಪ್ಪನಪ್ಪನ ಕಾಲದವು ಅವರಪ್ಪನ ಕಾಲದವು
ಚಿತ್ರದೊಳಗೆ ಚಿತ್ರ ವಿಚಿತ್ರದೊಳಗೂ ಚಿತ್ರ

ಕರಿಮೈಯ ಬಿಳಿಗಡ್ಡದ ಅಯ್ಯನ ನರಳುವ ದನಿ
ಅವ ಹತ್ತಿರ ಬಂದಷ್ಟು ಗಬ್ಬುನಾತ
ಬಿಳಿಪೇಟದ ಹುರಿಮೀಸೆಯ ದಡಿಯ
ಕರಿಹೆಣ್ಣನ ಜೊತೆ ಕೊಟ್ಟಿಗೆಯಲಿ
ಬರೀ ಇಂಥವೇ ಕನಸುಗಳು
ಕಾಡುವ ಕಾದಾಡುವ ಕನಸುಗಳು.

ದಿಗ್ಗನೆ ಎದ್ದು ಎದೆಪಟ್ಟಿ ಹಿಡಿದು ಜಗ್ಗುವ ಕನಸುಗಳು
ಸೇಡು ತೀರಿಸಿಕೋ ಮಗನೆ ಎಂದು ಎದೆಗೆ ನುಗ್ಗುವ ಕನಸುಗಳು
ಹಳೆಯ ಗಾಯದಲಿ ಹೆಪ್ಪಾದ ರಕುತವ ಕಾರುತ್ತ
ಎದ್ದೇಳು ಮಗನೆ ಎಂದು ಬಡಿದೆಬ್ಬಿಸುವ ಕನಸುಗಳು
ಬರಿ ಇಂಥವೇ ಕಾಡುವ ಕಾದಾಡುವ ಕನಸುಗಳು

ಗಡಿಗೆಯಲಿ ಕುದಿಯುವ ಬಾಡಿನ ಗಮಲು
ಹೆಗಲಿಗೆ ಕಟ್ಟಿದ ತಮಟೆಯ 'ಚಡುಕನಕುಣ' ಸದ್ದು
ಭಟ್ಟಿಯಲಿ ಕುದಿಸಿದ ಹೆಂಡದ ಕಮಟು –
ಎಲ್ಲವೂ ಒಂದರ ಹಿಂದೆ ಒಂದು ನುಗ್ಗುವ ಕನಸುಗಳು
ಎದೆ ಪಟ್ಟಿ ಹಿಡಿದು ಜಗ್ಗುವ ಕನಸುಗಳು

ಜೀತಕ್ಕಾಗಿ ಮಣ್ಣಲ್ಲಿ ಮಣ್ಣಾದವನ ಕನಸು
ಕನಸು ಮನಸುಗಳ ಮಾರಿಕೊಂದವರ ಕನಸು
ದಣಿಯ ಎಕ್ಕಡವ ತಲೆಮೇಲೆ ಹೊತ್ತವರ ಕನಸು
ಬರಿ ಇಂಥವೇ ಕಾಡುವ ಕಾದಾಡುವ ಕನಸುಗಳು
ಸೇಡು ತೀರಿಸಿಕೋ ಮಗನೇ ಎಂದು ಎದೆಗೆ ನುಗ್ಗುವ ಕನಸುಗಳು

೬೩. ಹೂ ಅರಳಿದ ಸದ್ದು

ಮೌನ
ಮಲಗಿದೆ ಅಲ್ಲಿ ತಣ್ಣಗೆ
ತಟ್ಟಲು
ಇವಳು ಪದಗಳಿಗೆ –
ತಡಕಾಡುತ್ತಾಳೆ ಇಲ್ಲಿ

ನಿಶ್ಶಬ್ದ ಅಲುಗಾಡುವಂತೆ
ತುಟಿ ಹೇಳಿದ್ದೇನು?
ರೆಪ್ಪೆ ಹೊದ್ದು ಮಲಗಿದ್ದ ಕಣ್ಣು
ಚಣಮಿನುಗಿ ಸೂಚಿಸಿದ್ದೇನು?
ಸೂಚನೆಗಳು ಸುಳಿವು ಬಿಟ್ಟು ಕೊಡವು
ತಿಳಿದಂತೆನಿಸಿದರೂ ತಿಳಿಯದು

ಯಾವ ಮಾತಿನ ಪದಗಳಲಿ
ಮೌನವ ತಟ್ಟಲಿ
ಮಾತಿನ
ಕಾಗುಣಿತ ವ್ಯಾಕರಣಗಳ
ಗಿಡ, ಮರ, ಮಣ್ಣು ಮುಗಿಲು ಹೇಳಿಕೊಟ್ಟಾವೆ?

ನೆಲಕೆ ಬೇರುಬಿಟ್ಟು
ಮುಗಿಲಿಗೆ ಮುಖ ಮಾಡಿ
ಕೈಯ ಬಳ್ಳಿಗಳು
ತೂಗಿ ತೂ... ಗಿ... ಸೋತಾಗ
ಒಡಲಿನಾಳದೊಳಗೊಂದು ಮಿಣುಕು
ಮಿಣುಕಿನೊಳಗೊಂದು ಆಲಾಪ
ಸದ್ದೆ ಇಲ್ಲ
ತಾಳ-ತಂತಿಗಳಿಲ್ಲ
ಕಾಗುಣತ – ವ್ಯಾಕರಣಗಳ ಬಂಧವಿಲ್ಲ

ಬರಿ ಆಲಾಪ
ಹಿಡಿಯಲು ಆಳು
ಉಸಿರಿಡಿದು ಕಲ್ಲ ಹೂವಾದಳು
ಹೂ ಅರಳಿದ ಸದ್ದು
ಅವನ ತಟ್ಟಿತೆ?

೬೪. ಅಬ್ದುಲ್ಲನ ಕೈಲಾಸ

ಬನ್ನಿ, ಇದು ಬರ್ಕತ್
ಮಟನ್ ಸ್ಟಾಲ್
ಅಬ್ದುಲ್ಲನ ಕಾಯಕದ
ರಕ್ತಸಿಕ್ತ ಕೈಲಾಸ

ನಿಧಾನ-
ಬಾಗಿಲಲ್ಲೆ ಮರಿ ರುಂಡಗಳ
ಹೂಗುಚ್ಛ
ತಲೆಕೆಳಗೆ
ನಸುಗೆಂಪು ತಾವರೆಗಳು

ಸುಲಿದ ತೊಡೆ; ಹಲಾಲ್ ಕೊರಳು
ಅಳಿದು ಅರಳುತ್ತಿರುವ ಅಲ್ಲಾಹುವಿನ
ಮೊಗ್ಗುಗಳು

ಅಂಟು ಜನಿವಾರದಂತೆ
ಚರ್ಬಿ, ಕರುಳಿನ ಮಾಲೆ
ಮುಂಜಾವದ ಎಳೆಬಿಸಿಲಿಗೆ
ನಾಚಿ ಹೆಪ್ಪುಗಟ್ಟಿದ ರಕ್ತ
ಸುಟ್ಟ ಮೇಕೆ ಕಾಲುಗಳ
ಸೌದೆ; ಕೈಲಾಸದ
ತುಣುಕುಗಳು.

ಸುಮ್ಮನಿರಿ-
ಕಡಿದ ದಿಮ್ಮಿಯ ತಲೆಯ ಮೇಲೆ
ಕೊಚ್ಚುತ್ತಿರುವ ಮಚ್ಚಿನ
ಲಯಕ್ಕೆ
ಖೀಮವಾಗುತ್ತಿದೆ ಎದೆಗೂಡು
ಎಳೆಮಾಂಸ ಬೆವರುತ್ತಿದೆ
ಭಾಗವತದ ಬಿಳಿಲುಗಳು

ರುಚಿಗೊಂದಿಷ್ಟು ಕೊಬ್ಬು ಚೆಲ್ಲಿ
ಖಲೀಜ, ಬೀಜಗಳ ಸೀಳಿ
ತೊಳೆ ಮೂಳೆ ಒಡೆದು
ನಕ್ಕನು ಅಬ್ದುಲ್ಲ...
... ಎಮ್ಮೆ ಹಾಲಿನ ನೊರೆ;
ಉಕ್ಕಿ ಹರಿದ ನಗು
ಕುರಿ ಮೈಯ ಸುರುಳಿ;
ಗುಂಗುರು ಕೂದಲು
ಅನಾಥ ರುಂಡದ ನೋಟ;
ಕೆಂಪು ವಿಷಾದದ ಕಣ್ಣು
ಮುಂದಲೆಯಿಂದ
ಜಲಪಾತದಂತೆ ಇಳಿದ ಮೂಗು
ನೀಳಗಲ್ಲದ ತುಂಬಾ
ಬುದ್ಧನ ನೆನಪು...

ಅಬ್ದುಲ್ಲನ ನಗುವಿನ್ನೂ
ಆಗ ತಾನೇ ಕಡಿದ ಮರಿಯ
ಹಸಿ ರಕ್ತದಂತೆ ಬೆಚ್ಚಗಿತ್ತು
ಕಟುಕನಿಗೆ ಸಲ್ಲದ
ಪ್ರೀತಿ; ಭೇಡನ ಭಯವಿತ್ತು

ಯೇಸುವಿನ ಶಿಲುಬೆಯಲ್ಲಿ
ಕುಸಿದ ಕ್ರಿಸ್ತನ
ನೆರಳಿತ್ತು

೬೫. ಮುಕ್ತ

ಮಣ್ಣನೊಳಗಿಳಿದ
ಈಚಲು ಮರದ ಬೇರುಗಳು
ನೆಲದ ನಿಶೆಯ ಮೇಲೆತ್ತುತ್ತವೆ
ಕೂದಲು ಕೆದರಿದ ತನ್ನ ತಲೆಗೆ

ಅವಳು ಸದಾ ಉನ್ಮತ್ತೆ
ಲಂಕೇಶರ ನೀಲುವಿನ ಹಾಗೆ
ಗೆದ್ದವರು, ಸೋತವರು
ಅವಳ ಸುತ್ತ ನೆರೆದ ಜಾತ್ರೆ

ಅವಳ ತುದಿಗೇರಿದ ನನ್ನ ಅಜ್ಜ
ಮಡಕೆಯಿಂದ ನೀರು ಬಗ್ಗಿಸಿದಂತೆ ಅವಳ
ಬಾಯಿಂದ ನಿಶೆ ಇಳಿಸುತ್ತಾನೆ
ನಮ್ಮ ಮುತ್ತಾತ ಕೊಟ್ಟ ಕುಡುಗೋಲಿನಿಂದ

ವಿಷವೇರಿದ ಜನ
ತೊಟ್ಟು ತೊಟ್ಟೇ ನಿಶೆ ಕುಡಿದು
ವಿಷದಿಂದ ಮುಕ್ತ

ನನ್ನಜ್ಜನ್ಯಾಕೋ ಕುಡಿಯಲಾರ
ನನ್ನ ಮುತ್ತಜ್ಜನಂತೆ ಅವಳಿಗೆ
ಭಕ್ತ

ಬುದ್ಧಿ ಬಂದ ಮೇಲೆ
ತಾಯಿಯ ಎದೆಹಾಲು ಕುಡಿಯುವುದು
ನಿಷಿದ್ಧ

೬೬. ಕತ್ತಲೆಯ ತಾಯಿಯಾಗು ಬೆಳಕೆನ್ನುವ ದೇವರೆ

ಪ್ರಾರ್ಥಿಸುವ ಮುನ್ನ ದೇವರಿಗೆ,
ನಿಷ್ಕಳಂಕ ನನ್ನೆರಡು ಕೈಗಳನ್ನು ಇನ್ನಷ್ಟು
ಸುಟ್ಟು ಶುದ್ಧಿ ಮಾಡಿಕೊಳ್ಳಲು,
ಕುಲುಮೆಗಿಟ್ಟಿದ್ದೇನೆ.

ಪಡೆದುಕೊಳ್ಳಲು ತೀಕ್ಷ್ಣತೆಯನ್ನ
ಅಗ್ಗಿಷ್ಟಿಕೆಗೆ ಹಾಕಿದ್ದೇನೆ
ಕೆಂಡದುಂಡೆಯಂತೆ ಕಾಣಲು
ನನ್ನ ಕಣ್ಣ ಗೋಲಿಗಳನ್ನ.

ಹೀರಿಕೊಳ್ಳುತ್ತೇನೆ
ಬಿಸಿಲ ಝಳವನ್ನು ನನ್ನುಸಿರಿಗೆ
ತೆಳುಗಾಜಿನಂತಿರುವ ಆತ್ಮ ಉರಿಯಲು
ದೀಪದ ಕುಡಿಯಂತೆ

ಧರಿಸಿಕೊಳ್ಳುತ್ತೇನೆ ಸೂರ್ಯನಿಂದ
ಕಣ್ಣಿಗೆ ರಾಚಿಸುವ ಪ್ರಖರತೆಯನ್ನ
ಅಗ್ನಿಜ್ವಾಲೆಗಳಿಂದಲೂ ಒಂದು ಕಣವೂ
ಮೈ ಚರ್ಮ ಸುಡದಂತೆ ನಡೆಯುತ್ತಿದ್ದೇನೆ
ಕಾದ ಹಂಚಿನ ಮೇಲೆ

ಹಾಡಿ ತೂಗಿ ಬೆಳೆಯಲಿ
ನನ್ನ ಕೇರಿಯ ಮಕ್ಕಳೆಲ್ಲಾ ಇನ್ನು ಮುಂದೆ
ಅಗ್ನಿಪಂಜರದ ತೊಟ್ಟಿಲಲ್ಲಿ,
ಕತ್ತಲೆಯ ತಾಯಿಯಾಗು, ಬೆಳಕೆನ್ನುವ ದೇವರೆ.
ಪ್ರಾರ್ಥಿಸುತ್ತೇನೆ
ಮಕ್ಕಳಾಗುತ್ತೇವೆ ಬೆಳದಿಂಗಳ ಹನಿಯಾಗಿ
ತಣ್ಣಗಾಗಲು ನನ್ನದೆ ಕಂಬಾಲ ಬೆಂಕಿಯಿಂದ...

೬೭. ರಥ

ಈ ರಥವ ಕಂಡರೆ
ನನಗೆ ದುಃಖವಾಗುವುದು.
ಎಂಥ ರೋಮಾಂಚನದ ಸೃಷ್ಟಿ
ಅಂಗುಲಂಗುಲ ಕಟೆದ ಸೋಪಾನ
ಕಾಲೆತ್ತಿ ಕೆನೆವ ಕುದುರೆ, ಪುಟ್ಟ ಸವಾರ
ಘೀಳಿಡುವ ಆನೆ, ಅದರ ಸುತ್ತ ಪುಟ್ಟ ಯೋಧರು.
ಬಟ್ಟೆ ಸರಿಸಿ ವೈಯಾರದಲ್ಲಿ ಬೆಡಗಿಯರು
ಪುಟ್ಟ ಕೈ, ಪುಟ್ಟ ಬಳೆ, ಇಷ್ಟೇ ಪುಟ್ಟ ಪುಟ್ಟ ಮೊಲೆ
ಕತ್ತೆತ್ತಿದರೆ, ರಥದ ಸುತ್ತ ಸತತ ಸುರತ ನಿರತರು
ಪುಟ್ಟ ಗಂಡು, ಪುಟ್ಟ ಹೆಣ್ಣು
ಶಿಶ್ನವೂ ಕಿರಿಬೆರಳ ಉಗುರಷ್ಟು
ಇಂಥ ಪ್ರಪಂಚಕ್ಕೂ ಎಂಥ ಬೆದೆ?
ಹೇಗೆ ಕಾಲ ಉರುಳಿದರೂ, ಘನವಾಗಿ ಉಳಿದಿದೆ
ನನ್ನ ಕಣ್ಣಗಲಕ್ಕೆ ನೆರೆದು ನಿಂತರೂ, ನಾಚಿಕೊಳ್ಳದೇ.

ಮೇಲೆ ಕುಳಿದ ದೇವ
ಎಂಥ ಹೆಳವ
ಈ ನಿರ್ಜೀವ ಜೀವೋತ್ಸಾಹಕ್ಕೆ
ಕೊಂಚ ಜಿನುಗಿಸಲಿ ತನ್ನ ಜೀವ ರೇಣುವ

ಅದೋ ಅದೋ ಅಲ್ಲಿ ಒಂದು ಜೇಡ
ಮರಿಗಳವಿತು ಕೂತಿರುವ ಬ್ರಹ್ಮಾಂಡ ಮೊಟ್ಟೆ
ಹೊತ್ತು,
ಹೊಟ್ಟೆ ಕಿಬ್ಬೊಟ್ಟೆ ಪುಟ್ಟ ಮೊಲೆ, ಶಿಶ್ನದ ಮೇಲೆಲ್ಲ
ಕಾಲೂರಿ ಚಲಿಸಿ ಮಾಯವಾಗಿದೆ.
ರಥವೇಕೆ ಚಲಿಸಲೊಲ್ಲದು?

೬೮. ಭರತದ ಭಯ ಹುಣ್ಣಿಮೆಯಲ್ಲಿ...

ಸಪಾಟು ಎದೆಯ ಮೇಲೆ ಜಾಕೀಟು
ಹೆಣೆದೆರಡು ಜಡೆ ಕಟ್ಟಿದ ರಿಬ್ಬನ್ನು
ತಣ್ಣನೆ ಗಾಳಿಗೆ ಹಾರುವ
ಸಣ್ಣ ಸ್ಕರ್ಟನಡಿ
ಅಮ್ಮ ಹೊಲಿದ ಬಣ್ಣ-ಬಣ್ಣದ
ಚಡ್ಡಿಗಳ ತೊಡುತ್ತಿದ್ದಾಗ
ಹುಣ್ಣಿಮೆಯ ಹುಚ್ಚಿರಲಿಲ್ಲ.

ಕಂಪಾಸಿನಲ್ಲಿಯ ಗುಲಾಬಿ ರಂಗಿನ
ರಬ್ಬರುಗಳ ಮೂಸುತ್ತ
ಹುಣಸೆ-ಉಪ್ಪು ಚಪ್ಪರಿಸುವ ಬಾಯಲ್ಲಿ
ಸರ್‍ರನೆ ಹೊರ ಓಡಿ
ಎತ್ತರೆತ್ತರ ತೆಂಗು ಸೋಗೆ ಮರೆಯಲ್ಲಿ
ಮಾಯವಾಗುವ ಪುಟ್ಟ ಮೀನಾಕಾರದ
ವಿಮಾನ ಬಿಟ್ಟುಹೋದ
ಸದ್ದಷ್ಟೇ ಆಲಿಸುವಾಗ
ಭರತದ ಭಯವಿರಲಿಲ್ಲ.

ಇಲ್ಲಿ ಈ ದಡದಲ್ಲಿವೆ ಈಗ
ಸಾಲು ಸಾಲು ಸಂಸಾರ ಹೂಡಿ ಕೂತ
ಅಡ್ಡಿಗಳು !

ಇದೋ ಇಲ್ಲಿ
ತಲೆಶೂಲೆಯೆಂದರೆ
ಅಮೃತಾಂಜನ ಹಚ್ಚುವ
ಸಂಗಾತಿ

ಶಾಲೆಯಲ್ಲಿ ಆಡಿ ಬಂದ ಮಗುವಿನ
ಮುದ್ದು ಮಂಡಿಯ ಗಾಯಕ್ಕೆ
ಡೆಟಾಲಿನ ಹತ್ತಿ

ಈಗಷ್ಟೇ ಆವರಿಸಿದಂತಿರುವ ಈ
ಹುಣ್ಣಿಮೆಯ ಹುಚ್ಚು ಮತ್ತು
ಭರತದ ಭಯ
ಕರಗುತ್ತಿರಲಿ ನದಿಯಾಳದಲ್ಲೇ.

೬೯. ದಿನದ ಯಾತ್ರೆ

ಮಧ್ಯಾಹ್ನವೀಗ ಮುಗಿದು
ಚಲಿಸುತ್ತಿರುವ ಕಾಲ ಸಂಜೆ ಕಡೆಗೆ

ಬಿಸಿಲ ತೀಕ್ಷ್ಣತೆಯಿಳಿದು
ಆಕಾಶದ ತುಂಬ ಮೋಡಗಳ ಕರಿನೆರಳು
ಇಲ್ಲಿ ಎದೆಯಲ್ಲಿ
ಏನೋ ದುಗುಡ!

ಹುರುಪು ಇದ್ದಲ್ಲಿ ಆಯಾಸ
ನಿರುತ್ಸಾಹ

ಕಣ್ಣುಗಳು ತೂಕಡಿಸುತ್ತಿವೆ
ಮನ ಮಾತ್ರ
ಕಳೆದ ಬದುಕಿನ ಲೆಕ್ಕ ಹಾಕುತ್ತಿದೆ.

ಕೊಲೆ, ಸುಲಿಗೆ, ಅಪಘಾತ, ಗಲಭೆ
ಲೋಕದ ತುಂಬ ದಾರುಣ ಸುದ್ದಿ
ದಿನದ ಯಾತ್ರೆಯಲಿ ನಿತ್ಯ ಘಟನೆ

ಏಕೋ ಬೆವರುತ್ತಿರುವ ದೇಹ
ಎಂದೋ ಸುಳಿವ ತಂಗಾಳಿಗೆ
ಕಾಯುತ್ತಿದೆ

ಈ ಮಧ್ಯೆ
ಭರವಸೆಯಾದ ಕವಿತೆ
ಯಾರ ಹಂಗಿರದೆ
ಹುಡುಕುತ್ತಿದೆ
ತನ್ನದೇ ಲಯವೊಂದನ್ನು
ಮಾತಿಗೆ ತಕ್ಕ ರೂಪವನ್ನು

೨೦. ಕರುಳಿಗೆ ಅನ್ನವಾಗದ ನಿನ್ನ ನೆನಪು!

ಕಡಲ ಕಿನಾರೆಯೊಳು
ಮೃದು ಪಾದ ಊರಿ
ನಡೆವಾಗ ಸೋಕೋ ಹರಳು
ಹರಳು ಮರಳೊಳಗಿನ ತಂಪು
ತಂಪು ಭಾವ ನಿನ್ನ ಹಾಡ ನೆನಪಿಸುತ್ತೆ!

ಒಲೆ ಮುಂದಿನ ಝಳಕ್ಕೆ
ಮುಖವೊಡ್ಡಿ ಉರಿ ಚಾಚು
ವಾಗ, ತಾಕೋ ಬಿಸಿಗೆ ಚರ್ಮ
ಬಿರಿಯುವಾಗ
ನಿನ್ನ ವರ್ತನೆ ಧುತ್ತನೆದುರಾಗುತ್ತೆ!

ನಕ್ಷತ್ರ ರಾತ್ರಿ
ಅಂಗಳದಲ್ಲಿ ಹಾಸಿ ಅಂಗಾತವಾಗಿ
ಅಗಣಿತ ತಾರಾ
ಪುಂಜದೊಳಗೆ ನಿನ್ನನ್ನೇ
ಹುಡುಕಿ ಪದೇ ಪದೇ ಸೋಲುತ್ತೇನೆ!

ಸಾಲಿಗನೋ
ಬಾಡಿಗೆ ಕೇಳೋನೋ
ತೂಕಡಿಸೋರಿಗೆ ತಟ್ಟಿ 'ಟಿಕೆಟ್' ಅನ್ನೋ
ಏಜೆಂಟ್ ಎದುರಾದ್ರೆ 'ನಾಚಿಕೆ ಬಳ್ಳಿ'ಯಂತಾಗೋ
ಬೇವಾರ್ಸಿ ಮನಸಿಗೂ ನೀನ್ ಬೇಕು!

ಕಾಲಿಗೆ ಕೆರ
ತಲೆಗೆ ಕಿರೀಟ
ಕರುಳಿಗೆ ಅನ್ನವಾಗದ ನಿನ್ನ ನೆನಪು
ಕ್ಯಾಕರಿಸಿ ಉಗಿದರೂ ಮತ್ತೆ
ಗಂಟಲಲ್ಲಿ ಸಂಗ್ರಹವಾಗೋ ಲಾಲಾರಸ
ಆಗೋದ್ಯಾಕೆ?!

೭೧. ತಾಯಿಗಷ್ಟೇ ಮಗಳಾಗಿದ್ದಳು

ಇಷ್ಟು ಹೊತ್ತಿನ ಬಳಿಕ
ತಿರುವಿನಲ್ಲಿದ್ದ ಅಂಗಡಿಗೆ
ಮೂರು ಸಂಜೆಗೆ ಉಪ್ಪು
ತರಲು ಕಳಿಸಿದ ಮಗಳು
ಮರಳುವುದಿಲ್ಲ ಇನ್ನು

ಅವಳು ಉಪ್ಪ ತರದೇ
ಈಗಲೂ ತಾಯಿ ಉಂಡಿಲ್ಲ
ಎಲ್ಲ ಅದರಷ್ಟಕ್ಕೇ
ಮುಗಿದರೂ ಸಹ

ಆಗ ಅಂಗಡಿ ಬೀದಿ
ದಂಗೆಯಿಂದ ನಿರ್ಜನವಾಗಿತ್ತು
ಚಣದಲ್ಲಿ ಬದಲಾದ ಸುತ್ತಲಿನ
ಅಪರಿಚಿತತೆಗೆ ಬೆದರಿ
ಮನೆಗಳ ಬಾಗಿಲು ಬಡಿದ

ಎಳೆ ಕೈಗಳ ಸದ್ದನ್ನು
ಆ ಬೂದಿಯಲ್ಲಿನ
ಅವಳ ಪರಿಚಿತ ಕೂಗನ್ನು
ತಮಗೆ ಸಂಬಂಧಿಸದಂತೆ ಆಲಿಸಿದರು
ಬೀದಿಗೆ ಕಿವಿಗಳನ್ನಿಟ್ಟು
ಎಳೆಯ ಜೀವವನ್ನು ಉಸಿರು
ಹೊರಬರದಂತೆ ಹಿಡಿದಾಗ
ಮುಚ್ಚಿದರು ತಮ್ಮ ಬಾಗಿಲು ಕಿಟಕಿಗಳ
ಗಾಳಿ ಬೆಳಕು ಆಡದಂತೆ
ಹೊರಗಿನ ಕೈಗಳು ತಮ್ಮತ್ತ ಚಾಚದಂತೆ

ಯಾರಿಗೂ ಅವಳು ಮಗಳಾಗಿರಲಿಲ್ಲ
ತಾಯಿಯ ಹೊರತಾಗಿ

೭೨. ಕಾಮ ಮತ್ತು ದೇವರು

ಓ... ಮಿಥುನ ಶಿಲ್ಪಗಳೆ
ಅಲ್ಲಿ ಶಿಲ್ಪವಾದ ಶಿವ-ಶಕ್ತಿಯರೆ
ಅದೂ ಅಲ್ಲ, ನೀವು ಗಂಡ-ಹೆಂಡಿರೆ
ಅಥವಾ ದೇವರೇ?

ನಾವುಗಳು ಬಿಡಲಾರದ್ದನ್ನು ನೀವೂ ಬಿಡಲಿಲ್ಲವಲ್ಲ!
ಅಂದರೆ
ನಾವು ಹಿಡಿದದ್ದನ್ನೇ ನೀವುಗಳು
ಹಿಡಿದದ್ದೇಕೆ?

ಸೂರ್ಯದೇವನ ದೇವಸ್ಥಾನದಲ್ಲಿ ನೀವಿಬ್ಬರು
ಹಲವರು. ಕಲ್ಲಾಗಿ ಮಲಗಿದ್ದೇಕೆ?
ಕಲ್ಲು ಕಲ್ಲಿನ ಮೈಥುನ
ನೋಡಿದೆ
ಹಿಡಿದಿದೆ ಬೆಂಕಿ ಕಿಡಿ
ಪರುಷ ಕಿರಣ!

ಎಷ್ಟು ಇಷ್ಟವಾಗಿದೆ ಅವನಿಗೆ – ಅವಳು
ಸೂರ್ಯನ ಪತ್ನಿ
ರಾಜ್ಞಿ
ಆದರೂ ಸೂರ್ಯನಿಗೆ ಒಮ್ಮೊಮ್ಮೆ
ಪ್ರಭೆ ಬೇಕಾದಳು.

ಜ್ಞಾನದ ಚಿಹ್ನೆ - ಸೂರ್ಯನ ಕಣ್ಣು
ಅರೆ ನಿಮಿಷದ ಮೊದಲು ಹುಡುಕಿತು
ಸಂಜ್ಞಾದೇವಿಯನ್ನು!
ಮೆಲ್ಲನೆ ಛಾಯಾದೇವಿ ಬಂದಳು. ಬೆಳಕೆಂಬ ಅವನ
ನೆರಳಾದಳು.

ಕದ್ದು ಮುಚ್ಚಿ ಹುಟ್ಟಿದ ಕರ್ಣನ
ತಾಯಿಯಾದರೂ
ಕುಂತೀದೇವಿ ಯಾರು?
ಮೂಲ, ಅರ್ಥಕ್ಕೆ ಸಿಕ್ಕುವುದಿಲ್ಲ ನಮ್ಮ ನಿಮ್ಮಕಾಮ
ಮತ್ತು ದೇವ-ದೇವಿಯರು!

೭೩. ಹೂತ ಮಾತುಗಳು

ಹಾಲಪ್ಪನ ಕೂಗಿಗೆ
ಬೇರಾಗುವ ಕಣ್ರೆಪ್ಪೆ
ಗೋಡೆ ತೋರಿದ ಗಡಿಯಾರಕಂಜಿ
ದಡದಡ ಓಡಾಡಿ
ಪಾಕಶಾಲೆ ಪ್ರಯೋಗಾಲಯ
ಕೊಯ್ದು ಕೊಚ್ಚಿ ಬೇಯ್ಸಿ
ತಟ್ಟಿ ಕುಟ್ಟಿ
ಹೊಟ್ಟೆಗಿಷ್ಟು, ಡಬ್ಬಕ್ಕಿಷ್ಟು
ಸ್ವಾದ ಸುಖವರಿಯದೆ
ಪಾಲು ಮಾಡಿದೆ.

ಅವಸರದಿ ಕೆನ್ನೆ ಸವರಿ
ಮಗಳಿಗೊಂದು ಮುತ್ತನಿತ್ತು
ಎಣ್ಣೆ ಒತ್ತಿ ನೀರು ಸುರಿದು
ಬಟ್ಟೆಯೊಳಗೆ ಮೈ ತುರುಕಿಸಿ
ಅರ್ಧ ಅವಸರ, ಗಿರ್ಧ ಕತೆ
ಅವಳ ಪ್ರಶ್ನೆ ತಡೆದು
ಮೊಟಕು ಉತ್ತರ
ದೊಡ್ಡ ದೊಡ್ಡ ತುತ್ತು ನುಂಗಿಸಿ
ಆಟೋಗೆ ಟಾಟಾ ಹೇಳಿದೆ.

ನಿರಿಗೆ ಸಿಗಿಸಿ ಪಿನ್ನು ಚುಚ್ಚಿ
ಕನ್ನಡಿಗೆ ಮುಖ ತೋರಿಸಿ
ಸ್ನಾನಕ್ಕಿಳಿದ ನನ್ನವನಿಗೆ
ಮನೆಯ ಬೀಗ, ಭದ್ರ, ಬರುವೆ
ಎಂಬ ಮಾತು
ಉದುರಿಸಿ
ಬೀದಿಗಿಳಿಯುವೆ

ಅವೇ ಮುಖ
ಸೋಗು ನಗು
ಭಾವವಿಲ್ಲ ತೇವವಿಲ್ಲ
ಗಣಕಯಂತ್ರದೆದಿರು ನಂದಿ

ಬಾಸ್‌ನ ಗೊಣಗಾಟ
ದೇವರ ಮೇಲಣ ಪುಷ್ಪ
ಗಳಿಗೆಗೊಮ್ಮೆ ಗೋಡೆ ನೋಡಿ
ಐದರ ಬಡಿತಕೆ ಕಡತ ಮುಚ್ಚಿ
ಷಟ್ ಡೌನ್‌ಗೆ ಕೀಲಿ ಒತ್ತಿ
ಉಸ್ಸ್ ಎಂದು ಬಸ್ಸು ಹತ್ತಿ
ಸೀಟಿಲ್ಲದೆ ಓಲಾಡಿ ತೇಲಾಡಿದ್ದೇ
ಆ ದಿನದ ಸಾಧನೆ.

ತಿಂಡಿ, ಕಾಫಿ, ಸಂಜೆ ದೀಪ
ಮಗಳ ಕಾಪಿ, ಹೋಂವರ್ಕ್
ನಡುವೆ ಎದ್ದು ಕುಕ್ಕರಿಟ್ಟು
ಚಮಚದಿಂದ ಟ್ವೆಟು ಎತ್ತಿ
ತಪ್ಪದೆ ಮೂರು ಸೀಟಿ ಕೂಗಿಸಿ
ಟೀವಿಯೊಳಗೆ ಕಣ್ಣಿಟ್ಟು
ಏನೋ ಒಂದು ಹೊಟ್ಟೆ ಗಿಟ್ಟು
ದಣಿದ ದೇಹ ದಿನವ ಮುಗಿಸಿ
ಕಣ್ಣು ಮುಚ್ಚುವ ಮೊದಲೇ
ನಿದ್ರೆ ತೂರಿತು.

ಊರು, ಪಕ್ಷ ತಿಂಗಳಾಯ್ತು
ನಂಗೂ, ಆವಂಗೂ, ಪುರುಸೊತ್ತಿಲ್ಲ
ಅಂತರಾಳದ ಮಾತು
ಹೊರಬರಲು ಹೊತ್ತು ಹವಣಿಸಿ
ಹೊರಳಿ ಮರಳಿ ಚಿತ್ರ ಬದಲಿಸಿ
ಮತ್ತೆ ಒಳಗೆಯೇ ಹೂತುಹೋಯಿತು.

೭೪. ಮಾಂಸದಂಗಡಿಯ ನವಿಲು

೧

ಕಾಡ ಜಡೆಯವಳು ಕಡಲ ಕಣ್ಣವಳು
ಸಿಟ್ಟು ಸೂರ್ಯನ ಬೊಟ್ಟು ಕಪ್ಪು ಹಣೆಯಲಿ ತೊಟ್ಟು
ಪರ್ವತ ಎದೆಯೆತ್ತಿ ಚೀರಿದಳು
ಬೆಂಕಿ ಬೆತ್ತಲೆ ತೊಗಲ ಬೆದೆಯ ಕಣಿವೆಯ ತೆರೆದು

ಆ ಚೀರು ಹಗಲಾಗಿ ಆ ಚೀರು
ಇರುಳಾಗಿ
ಪಶು ಪಕ್ಷಿ ಹುಳ ಹುಪ್ಪಟೆಯ
ಕೊರಳಾಗಿ
ಜೀವ ಜಾಲದ ಸೆರೆಯ ಉರಿಯ
ಉರುಳಾಗಿ
ನರಳಿಕೆಯ ನೆಲವಾಗಿ ಇರುವಿಕೆಯ
ನೆರಳಾಗಿ
ರೂಪಾಯಿತೋ...

ಅವಳ ಶಿಲೆ ತೊಡೆಯ ಕಗ್ಗತ್ತಲ
ಖಂಡದಲಿ
ಕೆಂಪು ತಿಂಗಳು ಮೂಡಿ
ಬೆಳಕೋ
ಮಳೆ ಹೊಲಸು ಹೊಳೆ

ಆ ಹೊಳೆಯ ಹುಳುವಾಗಿ
ನಾಯಿ ನರಿ ತೋಳಗಳು
ಹಾಲಕ್ಕಿ ಗೂಬೆಗಳು
ರಣಹದ್ದು ಕಾಗೆಗಳು
ಅವ್ವಾ... ಅವ್ವಾ... ಎಂದು

ಅವೇ ಮುಖ
ಸೋಗು ನಗು
ಭಾವವಿಲ್ಲ ತೇವವಿಲ್ಲ
ಗಣಕಯಂತ್ರದೆದಿರು ನಂದಿ

ಬಾಸ್‌ನ ಗೊಣಗಾಟ
ದೇವರ ಮೇಲಣ ಪುಷ್ಪ
ಗಳಿಗೆಗೊಮ್ಮೆ ಗೋಡೆ ನೋಡಿ
ಐದರ ಬಡಿತಕೆ ಕಡತ ಮುಚ್ಚಿ
ಷಟ್ ಡೌನ್‌ಗೆ ಕೀಲಿ ಒತ್ತಿ
ಉಸ್ಸ್ ಎಂದು ಬಸ್ಸು ಹತ್ತಿ
ಸೀಟಲ್ಲದೆ ಓಲಾಡಿ ತೇಲಾಡಿದ್ದೇ
ಆ ದಿನದ ಸಾಧನೆ.

ತಿಂಡಿ, ಕಾಫಿ, ಸಂಜೆ ದೀಪ
ಮಗಳ ಕಾಫಿ, ಹೋಂವರ್ಕ್
ನಡುವೆ ಎದ್ದು ಕುಕ್ಕರಿಟ್ಟು
ಚಮಚದಿಂದ ವ್ಹೇಟು ಎತ್ತಿ
ತಪ್ಪದೆ ಮೂರು ಸೀಟಿ ಕೂಗಿಸಿ
ಟೀವಿಯೊಳಗೆ ಕಣ್ಣಟ್ಟು
ಏನೋ ಒಂದು ಹೊಟ್ಟೆ ಗಿಟ್ಟು
ದಣಿದ ದೇಹ ದಿನವ ಮುಗಿಸಿ
ಕಣ್ಣು ಮುಚ್ಚುವ ಮೊದಲೇ
ನಿದ್ರೆ ತೂರಿತು.

ಊರು, ಪಕ್ಷ, ತಿಂಗಳಾಯ್ತು
ನಂಗೂ, ಅವಂಗೂ, ಪುರುಸೊತ್ತಿಲ್ಲ
ಅಂತರಾಳದ ಮಾತು
ಹೊರಬರಲು ಹೊತ್ತು ಹವಣಿಸಿ
ಹೊರಳಿ ಮರಳಿ ಚಿತ್ರ ಬದಲಿಸಿ
ಮತ್ತೆ ಒಳಗೆಯೇ ಹೂತುಹೋಯಿತು.

೭೪. ಮಾಂಸದಂಗಡಿಯ ನವಿಲು

೧

ಕಾಡ ಜಡೆಯವಳು ಕಡಲ ಕಣ್ಣವಳು
ಸಿಟ್ಟು ಸೂರ್ಯನ ಬೊಟ್ಟು ಕಪ್ಪು ಹಣೆಯಲಿ ತೊಟ್ಟು
ಪರ್ವತ ಎದೆಯೆತ್ತಿ ಚೀರಿದಳು
ಬೆಂಕಿ ಬೆತ್ತಲೆ ತೊಗಲ ಬೆದೆಯ ಕಣವೆಯ ತೆರೆದು

ಆ ಚೀರು ಹಗಲಾಗಿ ಆ ಚೀರು
ಇರುಳಾಗಿ
ಪಶು ಪಕ್ಷಿ ಹುಳ ಹುಪ್ಪಟೆಯ
ಕೊರಳಾಗಿ
ಜೀವ ಜಾಲದ ಸೆರೆಯ ಉರಿಯ
ಉರುಳಾಗಿ
ನರಳಿಕೆಯ ನೆಲವಾಗಿ ಇರುವಿಕೆಯ
ನೆರಳಾಗಿ
ರೂಪಾಯಿತೋ...

ಅವಳ ಶಿಲೆ ತೊಡೆಯ ಕಗ್ಗತ್ತಲ
ಖಂಡದಲಿ
ಕೆಂಪು ತಿಂಗಳು ಮೂಡಿ
ಬೆಳಕೋ
ಮಳೆ ಹೊಲಸು ಹೊಳೆ

ಆ ಹೊಳೆಯ ಹುಳುವಾಗಿ
ನಾಯಿ ನರಿ ತೋಳಗಳು
ಹಾಲಕ್ಕಿ ಗೂಬೆಗಳು
ರಣಹದ್ದು ಕಾಗೆಗಳು
ಅವ್ವಾ... ಅವ್ವಾ... ಎಂದು

ಅವಳ ಕಂಕುಳು ಹೊಕ್ಕುಳು ಹೊಕ್ಕು
ಮಕ್ಕಳಾದವು...

ಬಯಲ ತುಳಿಯದೆ
ಒಳಗೊಳಗೇ ಗರ್ಭಕಟ್ಟಿ
ಕೆಂಪು ತಿಂಗಳ ಹರಿಸೋ ಅನಂತ ದಾಹದ
ಕಿಚ್ಚೇ
ಆರು ಆರು ಆರು
ಆಟ ಘಾಟಿನಿ ಅವಳು
ನಾರಿದಳು...

ಆ ನಾರು ಹೂವಾಗಿ ಆ ನಾರು
ಹಸಿರಾಗಿ
ಹಿಪ್ಪೆ ಹೊಂಗೆ ಬೇವು ತುಂಬೆ
ಕಾತಾಳೆ ಭೂತಾಳೆ ಕಾರೆ ಕಣಗಿಲೆ
ಜಾಲಿ ಈಚಲು ಮುತ್ತುಗ ತಂಗಟೆ
ಬ್ಯಾಲ ತೊಡರೆ ಗಲಕೆ
ಬಂದರೆ
ಥರಂಥರ ಬಣ್ಣ ಘಮ್ಮೆಂದವು

ಆ ನಾರು ಉಸಿರಾಗಿ ಆ ನಾರು
ಹೆಸರಾಗಿ

ಕಾಡು ಇಲಿ ಕಾಡು ಹಂದಿ ಕಾಡುಕೋಣ ಕಾಡು
ಕರಡಿ ಕಾಡು ಕುದುರೆ ಕಾಡುಕೋಳಿ ಕಾಡು
ನವಿಲು
ಕಾಡು ಕಾಡು ಕಾಡು ಕಾಡೇ ಕಾಡು
ಕರಿಯ ಕಾಡಿನಿ ಅವಳು
ಹಸಿದಳು...

ಅವಳ ಹಸಿವಿನ ಬಿಸಿಗೆ
ನೆಲಕುದ್ದು ಜಲಕುದ್ದು
ಜೀವ ಜೀವದ ಒಡಲು ಬಡಿವ
ತಮ್ಮಟೆ ಸದ್ದು
ಆಕಾಶ ಪಾತಾಳ ತಾಳಲಾರದ ತಾಳ
ಹಸಿವೆ ಕುಣಿತ

ಅವಳ ಎದೆಯಾಳ
ಜ್ವಾಲೆಯಲಿ
ಹಾಲೆಲ್ಲ ಬತ್ತಿರಲು
ಎದೆ ತುದಿಗೆ ಜೀವ ತುಟಿ
ಬಾಕಾಗಿ ಮುತ್ತಿರಲು
ಹಸಿ ಮೈಯ ಹಸಿವೆ
ಮಹತಾಯಿ ಅತ್ತಳು...

ಹಾಲ ಬೀಜದ ಮುಗಿಲ
ಲಿಂಗ ಜಂಗಮ ಗುರುವೇ
ಸ್ವಪ್ನ ಮುಖವಾಡದಲಿ ಯಾರಿಗೂ ಕಾಣದಲೆ
ಬಂದೆ ನನ್ನೊಳಗೆ
ಆಳದಾ ಗವಿಯೊಳಗೆ ಆಲಯವ ಕಟ್ಟಿ
ನನ್ನ ದೇವತೆ ಮಾಡಿ ನೀನು
ಲಯವಾದೆ...

ಬಾ ಗುರುವೆ ಬಾ ತಂದೆ ಬಾರಯ್ಯ ಬಾ
ಪುರುಷ
ಹಾಲಿಲ್ಲ ನನ್ನೊಳಗೆ ಎಲ್ಲವೂ
ನಿನ್ನೊಳಗೆ
ಕಾದೂ ಕಾದೂ ಬೆಂದ ಕಾಯಿಲೆ
ಅವಳು ಕಿರುಚಿದಳು
ಚಿಗುರು ನಾಲಗೆಗಳು ಜ್ವಾಲೆಹಾರೆಗಳಾಗಿ
ಇರಿಯುತಿವೆ ಬಾ ಗುರುವೆ
ಹಾಲಿಲ್ಲ ನನ್ನೊಳಗೆ ಎಲ್ಲವೂ
ನಿನ್ನೊಳಗೆ
ಬರಲಿಲ್ಲ ಗುರು...

ಜೀವರಾಶಿಗಳೆಲ್ಲ ಕೆರಳಿ
ಸೇನೆಗಳಾಗಿ
ಅವಳೆದೆಯ ತೋಡಿದವು
ತಳಮುಟ್ಟಿ ನೋಡಿದವು
ಜ್ವಾಲೆ ಕಡಲೊಳು ಜಾರಿ
ಜ್ವಾಲೆಯಾದವು

ಅಯ್ಯೋ...
ಕತ್ತಲೆಗೆ ಬೆಳಕಾಗದ ಜ್ವಾಲೆ
ಆರದೆ ಉರಿಯದೆ ಇರುವ
ಜ್ವಾಲೆ...

ಚಿತೆತೊಗಲ ತಾಯಿಯ ಮೇಲೆ
ಈಗ ಬರೀ ಅಂಗಡಿ ಹೊಳೆವ ತಕ್ಕಡಿ
ಮಾಲೀಕ
ನವಿಲ ಬೇಟೆಗೆ ಹೋಗಿರುವವನು

ಅವಳ ಮಗ ನಾನು
ಈ ಅಂಗಡಿಯೊಳಗೆ ನಿಂತಿದ್ದೇನೆ
ನನ್ನ ಮೈಮೇಲೂ ನಪಿಲಗರ ಮೂಡುತ್ತಿವೆ

೨

ಇರುವೆ ಬಾಯೊಳಗಿನ ಬಿಂಬ

ಇರುಳ ಗವಿಯೊಳಗೆ ಎಲುಬುಗಳ ಮೇಲೆ
ನಿದ್ರಿಸುವಾಗ
ಹೊರಗೆ ಬಿದ್ದ ಇಬ್ಬನಿಯ ಸದ್ದಿಗೆ
ಕಣ್ತೆರದಳು
ಕತ್ತಲು ಮೆತ್ತಿದ ಮೂಳೆಗಳ ಮೇಲೆ
ನಕ್ಷತ್ರ ನಕ್ಕಂತೆ

ಮಿರುಗೊ ಹನಿಗಳ ಕಂಡು ಬೆರಳು
ಸೋಕಿಸಿದಳು
ಹನಿಯೊಡೆದು ನದಿಯಾಯ್ತು

ಸುಟ್ಟು ಕರೆಗಟ್ಟಿದ ಗವಿಯ
ಶಿಲೆ ಮುಟ್ಟಿದಳು
ಬುಗ್ಗನೆ ಬಣ್ಣಗಳೆದ್ದು
ನವಿಲಾಯಿತು
ತನ್ನ ಕೊರಳ ತಾನೇ ಮಟ್ಟಿದಳು
ಪದವಾಯಿತು

ಬೆರಳ ಬೆರಗಿಗೆ ಮರುಳಾಗಿ
ಮುಟ್ಟಿದಳು ತೊಡೆಯ...

ಅವಳ ಹಸಿತೊಡೆಯ ಅಗ್ನಿ ಹುತ್ತದಿಂದ
ಸ್ವಪ್ನ ಇರುವೆಯ ಸಾಲು ಧುಮುಕಿದವು
ನೆಲಕೆ
ಪುಟ್ಟ ಬಾಯಲಿ ಅವಳ ಬಿಂಬವ ಕಚ್ಚಿ
ಹರಿದವು ದೂರಕೆ ಬಹು
ದೂರಕೆ

ಇರುವೆ ಹೆಜ್ಜೆಗಳಲ್ಲಿ
ಹೊಲ ಗದ್ದೆಗಳು ಮೂಡಿ
ವೃಕ್ಷ ಪರ್ವತ ಬೇರು
ನಭತಾಕಿ ಉಸಿರಾಡಿ
ಊರಾಯಿತು...
ಇರುವೆ ಬಾಯೊಳಗೆ ಜೀವದ್ರವ ತೊಟ್ಟಿಕ್ಕಿ
ಅಂಟಿತ್ತು ಬ್ರಹ್ಮಾಂಡ
ಬಿಂಬದೊಳಗೆ

ಬೆರಗು ಆರುವ ಮೊದಲೆ ಅರಸಿ ಬಂದನು
ಸೂರ್ಯ ಕಂಗಳ ಶೂರ
ಇರುವೆ ಹೆಜ್ಜೆಯ ಹೊಲಗದ್ದೆ ಮೇಲಿಟ್ಟು
ಬೆಂಕಿಗಾಲ
ಅವಳ ನಗ್ನಕ್ಕೆ ನಿಮಿರಿ ನುಗ್ಗಿದವು ಅವನ
ಬಂದೂಕು ಮರ್ಮಗಳು

ಅವಳ ಬೆರಗು ಬೆರಳನು
ಕತ್ತರಿಸಿ
ಮುಟ್ಟಿಸಿದ ಮಲ ಮೂತ್ರಗಳ
ರಕ್ತ ಹರಿವ ಸುರಂಗಗಳ
ಹೆರದೆಯೂ ಹೊರಗೆ ತೆಗೆದನು
ನನ್ನ ಶಿರವ...
ಅವಳ ಗವಿಯೀಗ ಶಸ್ತ್ರಾಗಾರ ಗರ್ಭ
ಶವಗಾರ

ಹರಿಯುತ್ತಲಿವೆ ಇರುವೆ
ಪುಟ್ಟ ಬಾಯಲ್ಲಿ ಬ್ರಹ್ಮಾಂಡವಂಟಿದ
ಅವಳ ಬಿಂಬವ ಕಚ್ಚಿ
ಬಚ್ಚಿಟ್ಟ ಅಸ್ತ್ರಗಳ ನೆರಳ ಮೇಲೆ
ಕಸದ ತೊಟ್ಟಿಯಲಿ ಕೊಳೆತ
ಅವಳ ಬೆರಳ ಮೇಲೆ

ಹರಿಯುತ್ತಲಿವೆ ಇರುವೆ
ರಕ್ತ ಮೆತ್ತಿದ ಕೊಲು ಯಂತ್ರದ
ಚಕ್ರಗಳ ಮೇಲೆ
ಖಾಲಿಯಾಗದೆ ಉರಿವ
ಸ್ಮಶಾನಗಳ ಮೇಲೆ

ಹರಿಯುತ್ತಲಿವೆ ಇರುವೆ
ಈ ಮಹಾ ಬೆಳಗಿನ ಮಾಂಸದಂಗಡಿಯಲ್ಲಿ ತಲೆಕೆಳಗಾಗಿ
ತೂಗುತ್ತಿರುವ ನನ್ನ ಮೇಲೆ

೭೫. ಹುಡುಕಾಟ

ಅದೇಕೆ ಇಲ್ಲಿಗೆ ಬಂದೆನೋ ಸುಖಾ
ಸುಮ್ಮನೆ, ತತ್ತ್ವ ಸಿದ್ಧಾಂತದ ಇದ್ದಿಲು ಡಿಪೋ
ಉಡಿ ಉಡಿಯಲ್ಲಿ ತುಂಬಿಕೊಂಡಂತೆ
ಹಸಿವು ನೀರಡಿಕೆ ಎಡತಾಕಿತ್ತು ಕೊರಳಿಗೆ

ಯಾರೋ ಬಂದು ಯಾರೋ ಹೋದಂತೆ
ಪ್ರಜಾತಂತ್ರದ ನೆರಳಿನಡಿ ಬುಳಬುಳನೆ ಕಣ್ಣೀರು
ಸತ್ತವರ ನಡುವೆ ಬದುಕಿದವರ ಬವಣೆ
ನೀರಗುಳ್ಳೆಯ ಮೇಲೊಂದು ಮಾರಿಬೆಕ್ಕು

ಅದೇಕೆ ಇಲ್ಲಿಗೆ ಬಂದೆನೋ ನೋಡುತ್ತ
ಕೆಟ್ಟ ಗಳಿಗೆ, ಆ ಕ್ಷಣದ ನೋವಿನ ಹಿಂದೆ
ಸೋನೆ ಹನಿ, ಬಣ್ಣಗಳ ನಡುವೆ ಬೆಂಕಿಯುಂಡೆ
ಮಗ್ಗಲು ಮಲಗಿದ್ದಾರೆ ಆದಿಮ ಜನಾಂಗ

ಪರಿಪರಿಯಾಗಿ ಬೇಡಿದೆ ಭೂಮಿ ಆಕಾಶಕ್ಕೆ
ಕಳವಳದ ಕನವರಿಕೆ ತುಂತುಂಬಿ ತುಳುಕಿಸಿದೆ
ಆರಾಮಾಗಿದ್ದಾರೆ ಆರಾಮಿಕೋರರು ಸರ್ವತ್ರರು
ಸರ್ವಾಂತರ್ಯಾಮಿ ಮಠಮಾನ್ಯ, ಪ್ರಭುಗಳು

ಅದೇಕೆ ಇಲ್ಲಿಗೆ ಬಂದೆನೋ ಸುಮ್ಮನೆ ಹೊತ್ತು
ಕಳೆದು ಮುಟ್ಟುಚಟ್ಟು ಒತ್ತಿದರೆ ಒತ್ತಾಸೆಯಾಗುವ
ಕಾಲ ಕಾಲಗಳ ಭೂಯಜ್ಞಗಳ ಧೂಪ ದೀಪ
ಸಂಕ್ರಮಣಕ್ಕೆ ಕವಿತೆ ಕೂಡ ನೆರವು ನೀಡಲಿಲ್ಲ

ಚಡಪಡಿಸಿತ್ತು ಮುಂಗಾರು ಮಳೆ ಇಕ್ಕಟ್ಟಿನಲಿ
ಸತ್ಯವಂತರ ಜಗತ್ತು ಬಲು ಮೋಜಿನದಾಗಿತ್ತು
ಹುಡುಕಲು ಆಸೆಪಟ್ಟು ನಡೆದಾಡಲು ತೊಡಗಿದೆ
ಎದುರಿಗಿನ ಬದುಕೊಂದು ನೋಡ ನೋಡುತ್ತಾ

ಮಧ್ಯಮದ ದಾರಿ ವ್ಯಾಖ್ಯಾನದ ಪರಿ ಬರಿದೆ
ಗಮ್ಯಗುರಿ, ಎಲ್ಲಿಯ ತನಕ ನಡೆಯಲಿ ಬಿಂದು
ಬಿಂದುವಿನಲ್ಲಿ ಕವಲು ದಾರಿ ಉಸಿರುಗಟ್ಟಿತ್ತು
ಯಾರು ಯಾರನ್ನ ಸಂಬಾಳಿಸಲಿ ಹೇಳಿ ಬುದ್ಧದೇವ

ಅದೇಕೆ ಇಲ್ಲಿಗೆ ಬಂದೆಯೆಂದು ಕೇಳಿತ್ತು ಮುಂಗೋಳಿ
ನಡೆದ ದಾರಿಯ ತುಂಬ ಕಲ್ಲು ಮುಳ್ಳು ಅವಮಾನ
ಶತಮಾನಗಳ ಅಂತರದಲ್ಲಿ ಬೆಂತರ ನೋವು
ಹೊರಟು ನಿಂತಿರುವೆ ಮಹಾ ಶಾಕ್ಯಮುನಿ ಸೌಮ್ಯನೆಡೆಗೆ

ಕಪಿದ ಕತ್ತಲೊಳಗೆ ಗುಡಾರದೊಳಗೆ ಇಣುಕು ನೋಟ
ನೆರಪಿಗೆ ಬರುವವರೆಂದು ನೆರೆಯವರನ್ನು ಕರೆ
ಕರೆದು ಬಿಡದ ಮನಗುದಿ ತಲ್ಲಣ, ನೀನೆಂಬ
ಸೊಲ್ಲು ಶಬುದ ಏಕಾಂತ ಹಾದಿಗುಂಟ ನಡೆದಿತ್ತು.

ಈ ಸಂಚಿಕೆಯ ಕವಿಗಳು...

೧. **ಅರುಣ್ ಜೋಳದ ಕೂಡ್ಲಿಗಿ :** (೧೯೮೦) ಎಂ.ಎ. ಸಂಶೋಧಕ. ನೆರಳು ಮಾತಾಡುವ ಹೊತ್ತು (ಕವಿತೆಗಳು ೨೦೦೪), ಸಂಡೂರು ಭೂ ಹೋರಾಟ ೨೦೦೭, ಸಂಚಯ ಸಾಹಿತ್ಯ ಸ್ಪರ್ಧೆ, ಪ್ರಜಾವಾಣಿ ಕಥಾ ಸ್ಪರ್ಧೆ ಬಹುಮಾನ. ಸಂಪರ್ಕ : ೯೪೪೮೯೬೭೧೧೭

೨. **ಅಂಕುರ ಬೆಟಗೇರಿ :** (೧೯೮೩) ಕ್ಲಿನಿಕಲ್ ಸೈಕಾಲಜಿಯ ಸ್ನಾತಕೋತ್ತರ ಪದವೀಧರ. The Sea of Silence English Poems ೨೦೦೨, ಹಿಡಿದ ಉಸಿರು (೨೦೦೪), ಇದರ ಹೆಸರು (೨೦೦೭) ಕವಿತೆಗಳು, ಇತರ ಭಾಷೆಗಳಿಂದ ಅನುವಾದಗಳನ್ನು ಮಾಡಿದ್ದಾರೆ. ಸಂಪರ್ಕ: ೯೮೮೬೨೪೯೨೨೨

೩. **ಆನಂದ ಈ ಕುಂಚನೂರ :** (೧೯೮೧) ಫಾರ್ಮಸಿಯಲ್ಲಿ ಸ್ನಾತಕ ಪದವಿ. ಬಯೋಕಾಸ್ಟ್ ಕಂಪೆನಿಯಲ್ಲಿ ಮೆಡಿಕಲ್ ರೈಟರ್ ಆಗಿ ಉದ್ಯೋಗ. ಕವಿನೆಲೆ (೨೦೦೬), ಪ್ರಕಟಿತ ಕೃತಿ. ದುಂ.ನಿ. ಬೆಳಗಲಿ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ, ವಿವಿಧ ಪತ್ರಿಕೆಗಳಲ್ಲಿ ಬರಹಗಳು ಪ್ರಕಟಗೊಂಡಿವೆ. ಸಂಪರ್ಕ: ೯೩೪೨೪೫೯೪೯೦.

೪. **ಆನಂದ ಋಗ್ವೇದಿ:** (೧೯೭೮) ಬಿ.ಎಸ್ಸಿ., ಎಂ.ಎ. ಆರೋಗ್ಯ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕ. ಜನ್ನ ಮತ್ತು ಅನೂಹ್ಯ ಸಾಧ್ಯತೆ (ಕಥಾಸಂಕಲನ ೨೦೦೦), ಉರ್ವಿ (ನಾಟಕ ೨೦೦೩), ನಿನ್ನ ನೆನಪಿಗೊಂದು ನವಿಲುಗರಿ (ಕವಿತೆಗಳು ೨೦೦೫), ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುದ್ದಣ ರತ್ನಾಕರವರ್ಣಿ ಪ್ರಶಸ್ತಿ, ಕಡೆಂಗೋಡ್ಲು ಪ್ರಶಸ್ತಿಗಳು ಸಂದಿವೆ. ಸಂಪರ್ಕ : ೯೪೪೮೬೬೮೦೪೬.

೫. **ಆನಂದ ಸಿ. ಲಕ್ಕೂರ:** ವೃತ್ತಿಯಲ್ಲಿ ವ್ಯಾಪಾರಿ. ಊರಿಂದ ಊರಿಗೆ (೨೦೦೩, ಕವಿತೆ) ಇಪ್ಪತ್ತರ ಕಲ್ಲಿನ ಮೇಲೆ (೨೦೦೬, ಕವಿತೆ), ಕಡೆಂಗೋಡ್ಲು ಕಾವ್ಯ ಪ್ರಶಸ್ತಿ. ಸಂಪರ್ಕ: ೯೯೦೦೪೨೩೮೯೩.

೬. **ಆರೀಫ್ ರಾಜಾ:** (೧೯೮೩) ಬಿ.ಎ. ಪ್ರಾಥಮಿಕ ಶಾಲಾ ಶಿಕ್ಷಕ. ಸೈತಾನನ ಪ್ರವಾದಿ (೨೦೦೭ - ಕವನ), ಬಿಡಿ ಕವಿತೆಗಳು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಜಾವಾಣಿ, ಸಂಚಯ ಕಾವ್ಯ ಸ್ಪರ್ಧೆಯಲ್ಲಿ ಬಹುಮಾನ ಸಂಪರ್ಕ : ೯೪೪೯೪ ೮೫೯೧೭.

೭. **ಉಗಮ ಶ್ರೀನಿವಾಸ:** (೧೯೭೪) ಬಿ.ಎ. ಪದವಿ. ಕನ್ನಡಪ್ರಭ ಪತ್ರಿಕೆಯ ತುಮಕೂರು ಜಿಲ್ಲಾ ವರದಿಗಾರ. ಬಯಲು ಬಾಗಿಲು (ಕವಿತೆ, ೨೦೦೭), ಅಮೆರಿಕನ್ ಗೊಂಬೆ (ಕತೆಗಳು, ೨೦೦೬), ಪೊನ್ನಮ್ಮಾಳ್ (ಜೀವನ ಚರಿತ್ರೆ, ೨೦೦೬), ಒಂದು ಬಟ್ಟೆಯ ಚೂರು (ಕವಿತೆಗಳು). ಸಂಪರ್ಕ: ೯೩೪೨೧೬೧೯೨.

೮. **ಒಕ್ಕುಂದ ಎಂ.ಡಿ.:** (೧೯೬೭) ಎಂ.ಎ., ಎಂ.ಫಿಲ್. ರೆಕ್ಕೆ ಗರಿಗಳ ಬಿಚ್ಚಿ (೧೯೯೦), ತುಣುಕು (೨೦೦೨), ಮಗು ಮಲಗಿದೆ ಎದೆಯ ಮೇಲೆ (೨೦೦೪), ಗುಲ್ಜಾರ್ ಕವಿತೆಗಳ ಅನುವಾದ (೨೦೦೨). ಸಂಪರ್ಕ : ೯೪೪೮೫೫೬೧೨೭.

೯. **ಕಸ್ತೂರಿ ಬಾಯರಿ :** (೧೯೫೬) ಎಲ್‌ಎಲ್. ಬಿ. ಹೈಸ್ಕೂಲು ಶಿಕ್ಷಕಿ. ನದಿಯಾದವಳು, ಕಾತ್ಯಾಯಿನಿ ಕವನ ಸಂಕಲನ; ಥೈರಾಯ್ಡ್ ಮತ್ತು ಪಾಂಚಾಲಿ, ಹಲವು ಮಕ್ಕಳ ತಾಯಿ ಬೇರು, ಒಂದೇ ಕಾಂಡದ ಕುರ್ಚಿ (೨೦೦೭) ಕಥಾಸಂಕಲನ, ದಿಂಡಿ ಸಣ್ಣ ಕತೆಗೆ ಪ್ರಜಾವಾಣಿಯ ಕಥಾಸ್ಪರ್ಧೆ ಬಹುಮಾನ ಸಿಕ್ಕಿದೆ. ಸಂಪರ್ಕ: ೦೮೩೫೭-೨೨೦೪೫೭.

೧೦. **ಕವಿತಾ ರೈ:** (೧೯೭೪) ಎಂ.ಎ. ಕನ್ನಡ. ಸಂದೇಶ ಲಲಿತಾ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಹಕ್ಕಿ ಹರಿಯುವ ನೀರು (೨೦೦೦), ನೀರ ತೇರು(೨೦೦೫), ಅರಿವಿನ ನಡೆ (ವಿಮರ್ಶಾ ಸಂಕಲನ ೨೦೦೭) ಇನಾಂದಾರ್ ಪ್ರಶಸ್ತಿ ಪಡೆದಿದ್ದಾರೆ. ವಿವಾಹ ಮತ್ತು ಕುಟುಂಬ (೨೦೦೭) ಡಾಕ್ಟರೇಟ್ ಪ್ರಬಂಧ. ಸಂಪರ್ಕ : ೯೪೮೦೦೦೧೯೩೪೯.

೧೧. **ಕೃಷ್ಣಮೂರ್ತಿ ಬಿಳಿಗೆರೆ:** (೧೯೬೩) ಎಂ.ಎ. ಇತಿಹಾಸ. ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ. ಸಾವಿರ ಕಣ್ಣಿನ ನವಿಲು, ಕಿಂಚಿತ್ತು ಪ್ರೀತಿಯ ಬದುಕು, ದಾಸಯ್ಯ ಇದು ಕನಸೇನಯ್ಯ – ಕವನಸಂಕಲನಗಳು. ಮಕ್ಕಳ ಹಾಡು — 'ಜೀರಿಂಬೆ ಹಾಡು', 'ಗುಡುಗುಡು ಗುಡ್ಡ', 'ಥ್ರೂ ಥ್ರೂ ಥ್ರೂಟಿ'. ಮಕ್ಕಳ ನಾಟಕ – 'ಮಳೆ ಹುಚ್ಚ', 'ನವಿಲೂರಿನ ಕತೆ ಮತ್ತು ಅಗಲ ಕಿವಿಯ ಅರಿವುಗಾರ'. 'ಅಗಚೆ ಹೂವಿನ ಹುಡುಗಿ' ಮಕ್ಕಳ ಕೃತಿಗಳು. ಸಂಪರ್ಕ : ೯೪೮೦೨೬೨೯೭೧

೧೨. **ಗೀತಾ ಹೆಗಡೆ :** (...) ....

೧೩. **ಚೇತನಾ ತೀರ್ಥಹಳ್ಳಿ :** (೧೯೭೯) (ಪಿಹೆಚ್. ಡಿ.) ಇಸ್ಕಾನಿನ ಭಕ್ತಿವೇದಾಂತ ದರ್ಶನ ಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ. ಉಘೆ ಅವರ ಮೊದಲ ಕವಿತಾ ಸಂಕಲನ. ಸಂಪರ್ಕ: ೯೪೮೦೫೪೪೫೦೮

೧೪. **ಚಂದ್ರಿಕಾ ಪಿ.:** (೧೯೭೦) ಎಂ.ಎ. ಕನ್ನಡ. ನಿಮ್ಮ ಚರಿತ್ರೆಯಲ್ಲಿ ಜಾಗವಿಲ್ಲ(೧೯೯೮), ಸೂರ್ಯಗಂಧೀ ಧರಣಿ (೨೦೦೨), ಜುಗಲ್‌ಬಂದಿ ಕವಿತೆಗಳು (೨೦೦೬), 'ನನ್ನೊಳಗಿನ ನಿಮ್ಮ ಕತೆಗಳು' (೨೦೦೭). ಟೀವಿ ಧಾರಾವಾಹಿಗಳ ಸಂಭಾಷಣೆ ಚಿತ್ರ ರಚನೆ. ಸಂಪರ್ಕ : ೯೪೪೮೮೦೪೦೪೪

೧೫. **ಚಂದ್ರಮಾಗಡಿ ಡಿ.ಆರ್.:** (೧೯೫೩) ಎಂ.ಎ. ಕನ್ನಡ. ರೇಷ್ಮೆ ಇಲಾಖೆಯಲ್ಲಿ ಉದ್ಯೋಗ. ಮಳೆ ತೊಳೆದ ಕಲ್ಲುಗಳು (ಕವಿತಾ ಸಂಕಲನ, ೨೦೦೭), ಪರಿಸರ, ಚಿತ್ರಕಲೆ, ಸಂಗೀತ ಮುಂತಾದವುಗಳಲ್ಲಿ ಆಸಕ್ತಿ. ಅನೇಕ ಕಥೆಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಂಪರ್ಕ: ೯೯೬೪೩೭೧೮೪೯

೧೬. **ಚಂದ್ರಶೇಖರ ಐಜೂರು:** (೧೯೮೦) ಎಲ್.ಎಲ್.ಎಂ. ಸ್ನಾತಕೋತ್ತರ ಪದವಿ. ಕನ್ನಡ ಟೈಮ್ಸ್ ಪತ್ರಿಕೆಯಲ್ಲಿ ಕಾನೂನು ಅಂಕಣದಲ್ಲಿ ಬರವಣಿಗೆ. ಬಿಡಿ ಕವಿತೆಗಳು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿವೆ. ಅಧ್ಯಾಪಕ ವೃತ್ತಿ. ಸಂಪರ್ಕ: ೯೮೮೮೧೧೪೫೭೮

೧೭. **ಚಂದ್ರು ತುರವೀಹಾಳ್:** (೧೯೭೩) ಎಂ.ಎ. ರಾಜ್ಯಶಾಸ್ತ್ರದಲ್ಲಿ ಪದವಿ. ಸ್ಥಾನಿಕ ಸಂಪಾದಕನಾಗಿ ವಿಜಯ ಕರ್ನಾಟಕದಲ್ಲಿ ಕರ್ತವ್ಯ ನಿರ್ವಹಣೆ. ನಿನ್ನದೊಂದು ರುಜು ಬೇಕು (೨೦೦೦), ದೇವರ ನಾಲಿಗೆಯ ಮೇಲೆ (೨೦೦೪) ಕವಿತೆಗಳು. ಸಂಪರ್ಕ : ೯೪೪೪೮೦೩೨೦೭೨.

೧೮. **ಛಾಯಾ ಭಗವತಿ:** (೧೯೭೭) ಬಿ.ಎಸ್ಸಿ ಎಂ.ಎ. ಇಂಗ್ಲಿಷ್. ಅನುವಾದಗಳು, ಬಿಡಿ ಲೇಖನಗಳು, ಕವಿತೆಗಳು ಪ್ರಕಟಗೊಂಡಿವೆ. ಕ್ರೈಸ್ಟ್ ಕಾಲೇಜು, ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನ. ಸಂಪರ್ಕ : ೯೮೪೪೩೬೨೭೦೧.

೧೯. **ಜ್ಯೋತಿ ಗುರುಪ್ರಸಾದ್:** (೧೯೬೫) ಎಂ.ಎ. ಕನ್ನಡ ಮತ್ತು ಇಂಗ್ಲಿಷ್. ಚುಕ್ಕಿ (೨೦೦೩), 'ಅಗ್ನಿ' ಪತ್ರಿಕೆಯಲ್ಲಿ 'ಈ ಕ್ಷಣ' ಅಂಕಣಗಾರ್ತಿ (೨೦೦೪-೨೦೦೫), ಪ್ರಜಾಮತ ಪತ್ರಿಕೆಯಲ್ಲಿ 'ಪುಷ್ಪಪರಾಗ' ಅಂಕಣಕಾರ್ತಿ(೨೦೦೫), ಮಯೂರದಲ್ಲಿ 'ಹಾಯಿ ದೋಣಿ' ಅಂಕಣಕಾರ್ತಿ. ಸಂಪರ್ಕ: ೯೩೪೨೩೨೬೬೫೫

೨೦. **ತಾಜುಮಾ:** (೧೯೭೦) ಪಿಯುಸಿ. 'ಗುಡಿ'ಯೆಂಬ ಕರಕುಶಲ ಮಳಿಗೆಯನ್ನು ನಡೆಸುತ್ತಿದ್ದಾರೆ. ಬಿಡಿ ಕವಿತೆಗಳು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಸಂಪರ್ಕ : ೯೯೧೬೮೪೬೬೧೭

೨೧. **ತಾರಿಣಿ ಶುಭದಾಯಿನಿ ಆರ್.:** (೧೯೭೧) ಎಂ.ಎ. ಇಂಗ್ಲಿಷ್. ತೋಡಿರಾಗ (೨೦೦೫), ಚಿತ್ತಗ್ಲಾನಿಯ ಮಾತು (೨೦೦೮) ಕವಿತೆಗಳು, ವಿಮರ್ಶಾ ಸಂಕಲನ ಅಚ್ಚಿನಲ್ಲಿದೆ. ಸಂಪರ್ಕ : ೯೮೪೫೧೭೫೦೪೬.

೨೨. **ದೀಪಾ ಸುಧೀರ್‌ಕುಮಾರ್:** (೧೯೭೮) ಎಂ.ಎ. ಇಂಗ್ಲಿಷ್. ಇಂಗ್ಲಿಷ್ ಅಧ್ಯಾಪಕಿ. ಕ್ರೈಸ್ಟ್ ಕಾಲೇಜಿನ ಸ್ಪರ್ಧೆಗಳಲ್ಲಿ ಬಹುಮಾನ ವಿಜೇತರು. ಬಿಡಿ ಕವಿತೆಗಳ ಪ್ರಕಟಣೆ. ಸಂಪರ್ಕ: ೯೪೪೮೧೫೫೨೪೨.

೨೩. **ನಾಗಣ್ಣ ಕಿಲಾರಿ:** (೧೯೮೨) ಎಂ.ಎ., ಎಂ.ಫಿಲ್. ಅಧ್ಯಾಪಕರು (ಸಿಂಗನೂರು). ನಿಂತ ಮಳೆ ಹನಿ (೨೦೦೫), ಬಿಡಿ ಲೇಖನಗಳು, ಕತೆಗಳು ಪ್ರಕಟಗೊಂಡಿವೆ. ಸಂಪರ್ಕ: ೯೯೭೨೬೦೭೨೦೮.

೨೪. **ನಾಗರಾಜ ವಸ್ತಾರೆ:** ಬಿ.ಇ. ವೃತ್ತಿಯಲ್ಲಿ ವಾಸ್ತು ವಿನ್ಯಾಸಕಾರರು. ಅನೇಕ ಲೇಖನಗಳು ಕವಿತೆಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. 'ಹಕೂನ ಮಟಾಟ'(೨೦೦೭), ಇವರ ಮೊದಲ ಕಥಾಸಂಕಲನ. ಸಂಪರ್ಕ : ೯೮೪೫೨೨೦೫೭೩

೨೫. **ನಾರಾಯಣಸ್ವಾಮಿ ಕೆ.ವೈ.:** (೧೯೬೫) ಎಂ.ಎ. ಕನ್ನಡ. ಆಡುವ ಗಿಳಿಯೊಂದ ಕಳಿಸಮ್ಮ (ಕಾವ್ಯ -೨೦೦೦), ನೀರ ದೀವಿಗೆ (೨೦೦೦) ಡಾಕ್ಟರೇಟ್ ಪ್ರಬಂಧ, ಪಂಪ ಭಾರತ (ನಾಟಕ- ೨೦೦೫), ಬಾಹುಬಲಿ (ಮಕ್ಕಳ ನಾಟಕ - ೨೦೦೭), ಬಾರಮ್ಮ ಭಾಗೀರತಿ(ಏಕಾಂಕ). ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 'ಪಂಪಭಾರತ' ನಾಟಕಕ್ಕೆ. ಸಂಪರ್ಕ: ೯೪೪೮೫೫೮೩೭೮

೩೬. **ನಿಂಗಪ್ಪ ಮುದೇನೂರ:** (೧೯೭೦) ಎಂ.ಎ., ಎಂ.ಫಿಲ್., ಪಿಎಚ್.ಡಿ. ೧೨ ಪ್ರಕಟಿತ ಕೃತಿಗಳು. ೩ ಕವನ ಸಂಕಲನ, ೩ ವಿಮರ್ಶೆ, ಜೀವನ ಚರಿತ್ರೆ, ಧಾರವಾಡ ಸ್ನಾತಕೋತ್ತರ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕ.

೨೭. **ಪಾಶ ಶಿ.ಜು.:** ಪ್ರಜಾವಾಣಿಯ ಶಿವಮೊಗ್ಗದ ವರದಿಗಾರ, ಬಿಡಿ ಕವಿತೆಗಳು ಪ್ರಕಟಗೊಂಡಿವೆ.

೨೮. **ಪ್ರಹ್ಲಾದ್ ಡಿ.ವಿ.:** (೧೯೬೬) ಎಂ.ಎ. ವೃತ್ತಿಯಲ್ಲಿ ವ್ಯಾಪಾರೋದ್ಯಮಿ. ಡ್ರೀಮರ್ (೧೯೯೫), ನಾಳೆಯಿಂದ(೨೦೦೫) ಕವನ ಸಂಕಲನಗಳು. 'ಸಂಚಯ' ಸಾಹಿತ್ಯ ಪತ್ರಿಕೆ ಸಂಪಾದಕ. ಸಂಪರ್ಕ: ೯೮೪೪೦ ೬೩೫೧೪.

೨೯. **ಫಾಲ್ಗುಣ ಗೌಡ:** (೧೯೭೬) ಎಂ.ಎ. ಕನ್ನಡ, ಅಧ್ಯಾಪಕ ವೃತ್ತಿ. ಮಾಮೂಲಿ ಮಳೆಯಲ್ಲಿ(೨೦೦೭), ಬಿಡಿ ಲೇಖನಗಳು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕ್ರೈಸ್ಟ್ ಕಾಲೇಜು, ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನಿತರು. ಸಂಪರ್ಕ: ೯೪೪೮೨೩೩೮೨೮.

೩೦. **ಬಾಲಸುಬ್ರಹ್ಮಣ್ಯ ಕೆ.ವಿ.:** (೧೯೫೭) ಬಿ.ಎಸ್ಸಿ., ಎಂ.ಎ. ಪತ್ರಿಕೋದ್ಯಮ, ಆಕಾಶವಾಣಿಯಲ್ಲಿ ನಿರೂಪಕರಾಗಿ ಸೇವೆ. ಫೋಟೋಗ್ರಫಿಯಲ್ಲಿ ಆಸಕ್ತಿ. ಲಘು ಪ್ರಬಂಧಗಳು, ಕವಿತೆಗಳು ಪ್ರಕಟಗೊಂಡಿವೆ. ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನಿತರು. ಸಂಪರ್ಕ : ೯೮೮೬೯೯೩೪೪.

೩೧. **ಭಾರತೀದೇವಿ ಪಿ.:** (೧೯೮೩) ಎಂ.ಎ. ಕನ್ನಡ. ಅಧ್ಯಾಪಕ ವೃತ್ತಿ. 'ನಿಲ್ಲಿಸಬೇಡ ಕಾಯುವುದನ್ನು' (೨೦೦೬). ಸಾಂಸ್ಕೃತಿಕ ಅನುಸಂಧಾನ (೨೦೦೫), ಕ್ರೈಸ್ಟ್ ಕಾಲೇಜು ಸ್ಪರ್ಧೆಯಲ್ಲಿ ಸತತ ೪ ವರ್ಷ ಬಹುಮಾನ. ಬಿಡಿ ಕವನಗಳು ಪ್ರಕಟಗೊಂಡಿವೆ. ಸಂಪರ್ಕ: ೯೮೪೪೦೪೦೧೧೨.

೩೨. **ಮಮತಾ ಜಿ. ಸಾಗರ:** (೧೯೬೬) ಎಂ.ಎ., ಪಿಹೆಚ್.ಡಿ., ಅಧ್ಯಾಪಕಿ. ಕಾಡ ನವಿಲಿನ ಹೆಜ್ಜೆ(೧೯೯೨), ನದಿಯ ನೀರಿನ ತೇವ (೧೯೯೯), ಹೀಗೆ ಹಾಳೆಯ ಮೇಲೆ ಹಾಡು(೨೦೦೭). ನಾಟಕಗಳು : ಮೈ ಭಾರ ಮನವೇ ಭಾರ(೧೯೯೦), ಚುಕ್ಕಿ ಚುಕ್ಕಿ ಚಂದ್ರಕ್ಕಿ(೧೯೯೩), ಇಲ್ಲಿಸಲ್ಲದ ಮಾತು – ಅಂಕಣಗಾರ್ತಿ, ವಿಜಯ ಕರ್ನಾಟಕ. ಸಂಪರ್ಕ: ೯೪೮೦೫೮೪೪೬೪.

೩೩. **ಮಂಜುನಾಥ ವಿ.ಎಂ.:** (೧೯೭೬) ಪಿಯುಸಿ, ನೀನಾಸಂ ರಂಗಶಿಕ್ಷಣ ಪದವಿ, 'ಫಾದರ್ ೫೫ ಮತ್ತು ನೀನಾಸಂ ಡೈರಿಯ ಕವಿತೆಗಳು' (೨೦೦೪), 'ಲೆವಲ್ ಕ್ರಾಸಿಂಗ್' (೨೦೦೫), ಕ್ರಿಮಿ (ನಾಟಕ, ೨೦೦೭), ಕನ್ನಡ ಟೈಂಸ್ ಕ್ರೀಡಾ ವರದಿಗಾರ. ಕಥಾ ಸಂಕಲನ 'ಬ್ಯಾಂಡಿ' (ಅಚ್ಚಿನಲ್ಲಿದೆ). ಪತ್ರಿಕೆಗಳಲ್ಲಿ ಚಿತ್ರಕಾರ. ಸಂಪರ್ಕ: ೯೪೪೫೧೭೭೯೦೦.

೩೪. **ಮಲ್ಲಿಕಾರ್ಜುನಗೌಡ ತೂಲನಹಳ್ಳಿ:** (೧೯೭೨) ಎಂ.ಎ., ಕನ್ನಡ. ಉಪನ್ಯಾಸಕ. ಶರೀಫನ ಬೊಗಸೆ ಕವಿತೆಗಳು, ಬಿಡಿ ಲೇಖನಗಳು ಪ್ರಕಟಗೊಂಡಿವೆ. ಸಂಪರ್ಕ: ೯೪೮೦೦ ೮೦೩೦೪

೩೫. **ಮೃತ್ಯುಂಜಯ ಕೆ.ಪಿ.:** (೧೯೬೭) ಎಂ.ಎ., ಕನ್ನಡ ಮತ್ತು ಇಂಗ್ಲಿಷ್. ಆಂದೋಲನ ಪತ್ರಿಕೆಯ ವರದಿಗಾರ. ಒಂದು ಅನುರಾಗಕ್ಕಾಗಿ ಎಷ್ಟೆಲ್ಲ (೧೯೯೫), ಮರ್ತ್ಯ ಮೀರದ ಮಾತು (೨೦೦೦), ಎಲೆ ಎಸೆದ ಮರ (೨೦೦೨), ಅವರವರ ಸಾವು (೨೦೦೪) ಕಾವ್ಯ ಸಂಕಲನಗಳು. ಸಂಚಯ, ಕ್ರೈಸ್ಟ್ ಕಾಲೇಜು ಸಾಹಿತ್ಯ ಸ್ಪರ್ಧೆ ಬಹುಮಾನಗಳು, ಪ್ರಶಸ್ತಿಗಳು ದೊರಕಿವೆ. ಸಂಪರ್ಕ: ೯೪೪೮೫೭೨೯೮೫೨.

೩೬. **ಮೋಹನ್ ಜಿ.ಎನ್.:** ಈ ಟೀವಿಯ ಮುಖ್ಯ ಸುದ್ದಿಸಂಪಾದಕ. ನನ್ನೊಳಗಿನ ಹಾಡು ಕ್ಯೂಬಾ(ಪ್ರವಾಸ ಕಥನ), ಎಕ್ಕುಂಡಿ ನಮನ(ಸಂಪಾದಿತ), ಸೋನೆಮಳೆಯ ಸಂಜೆ (ಕವಿತಾ ಸಂಗ್ರಹ) ಪ್ರಶ್ನೆಗಳಿರುವುದು ಶೇಕ್ಸ್‌ಪಿಯರ್‌ಗೆ (೨೦೦೭ರ ಕವಿತಾ ಸಂಕಲನ). ಸಂಪರ್ಕ: ೦೯೩೪೬೨೫೯೩೧೩.

೩೭. **ಯಲ್ಲಪ್ಪ ಟಿ.:** (೧೯೭೧) ಎಂ.ಎ., ಎಂ.ಫಿಲ್., ಕ್ರೈಸ್ಟ್ ಕಾಲೇಜಿನ ಕವನ ಸ್ಪರ್ಧೆಯಲ್ಲಿ ೭ ಬಾರಿ ಬಹುಮಾನ, ಸಂಚಯದ ಸ್ಪರ್ಧೆಯಲ್ಲಿ ೬ ಸಲ ಬಹುಮಾನ, ದೂರದರ್ಶನಕ್ಕೆ ಸ್ಕ್ರಿಪ್ಟ್ ಬರೆದಿದ್ದಾರೆ. ಕಡಲಿಗೆ ಕಳಿಸಿದ ದೀಪ (೨೦೦೮, ಕವನ ಸಂಕಲನ). ಉದಯವಾಣಿ, ಸಂಯುಕ್ತ ಕರ್ನಾಟಕಕ್ಕೆ ರಂಗವಿಮರ್ಶೆ ಬರೆದಿದ್ದಾರೆ. ಸದ್ಯ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಪರ್ಕ: ೯೯೦೦೨೬೫೪೧೯.

೩೮. **ರಘುನಾಥ ಚ.ಹ:** (೧೯೭೪) ಎಂ.ಎ., ಕನ್ನಡ. ಪತ್ರಕರ್ತ. ಹೊಳೆಯಲ್ಲಿ ಹರಿದ ನೀರು - ಕವನ ಸಂಕಲನ(೨೦೦೦), ಹೊರಗೂ ಮಳೆ ಒಳಗೂ ಮಳೆ - ಕಥಾ ಸಂಕಲನ(೨೦೦೬). ಸಂಪರ್ಕ: ೯೯೬೪೨೫೭೮೬೬

೩೯. **ರಮೇಶ್ ಎಚ್.ಆರ್.:** ಇಂಗ್ಲಿಷ್ ಉಪನ್ಯಾಸಕ, ಪದವಿ ಕಾಲೇಜು, ಮಡಿಕೇರಿ, 'ಯಡವಟ್ಟು ಬದುಕಿನ ಲಯಗಳು' ಕವನ ಸಂಕಲನ. ಸಂಪರ್ಕ: ೦೮೨೭೦-೨೨೨೪೨೫೪.

೪೦. **ರಮೇಶ್ ಬಾಬು ಚೀಮನಹಳ್ಳಿ :** (೧೯೮೪) ಎಂ.ಎಸ್ಸಿ. ವಿಜ್ಞಾನಿ. ಪ್ರಶ್ನೆ ಮತ್ತು ದೇವರು (೨೦೦೭), ಪ್ರಜಾವಾಣಿ ಕಥಾ ಮತ್ತು ಕವನ ಸ್ಪರ್ಧೆಗಳಲ್ಲಿ ಬಹುಮಾನ. ಸಂಪರ್ಕ : ೯೮೪೫೮೭೫೪೨೩.

೪೧. **ರವಿ ದ್ರಾವಿಡ:** ವೃತ್ತಿಯಲ್ಲಿ ಪತ್ರಕರ್ತ, ರಂಗಭೂಮಿ, ಸಿನಿಮಾಗಳಲ್ಲಿ ಆಸಕ್ತ. ಒಂದೆಸಳು ಹುಲ್ಲಿಗೆ (೨೦೦೫), ಓಯಸಿಸ್'(೨೦೦೭) ಕವನ ಸಂಕಲನಗಳು. ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನಿತ.

೪೨. **ರವೀಂದ್ರಕುಮಾರ್ ಜಿ.ಕೆ.:** (೧೯೬೨) ಶಿಕ್ಷಣ ಶಾಸ್ತ್ರ ಸ್ನಾತಕೋತ್ತರ ಪದವಿ. ಆಕಾಶವಾಣಿ ಮಡಿಕೇರಿಯಲ್ಲಿ ಕಾರ್ಯಕ್ರಮ ನಿರ್ವಾಹಕರು. ಶಿಕಾಡ (೧೯೯೪), ಪ್ಯಾಂಜಿಯಾ (೧೯೯೭), ಕದವಿಲ್ಲದ ಊರಲ್ಲಿ(೨೦೦೧), ಒಂದು ನೂಲಿನ ಜಾಡು (೨೦೦೭), ಎಚ್.ಎಸ್.ಕೆ. ಬದುಕು-ಬರಹ (೨೦೦೩). ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಸಂಪರ್ಕ: ೯೪೪೮೪೬೪೨೦೧.

೪೩. **ರಶೀದ್ ಬಿ.ಎಂ:** (೧೯೬೯-೨೦೦೨) ಉಪ್ಪಿನಂಗಡಿ ಸಮೀಪದ ಮಠ ಎಂಬ ಹಳ್ಳಿಯಲ್ಲಿ ಹುಟ್ಟಿ ಪದವಿ ಪಡೆದು ಲಂಕೇಶ್ ಪತ್ರಿಕೆ, ಹಾಯ್ ಬೆಂಗಳೂರ್ ಪತ್ರಿಕೆಗಳಲ್ಲಿ ವರದಿಗಾರನಾಗಿ ಕೆಲಸ ಮಾಡಿದರು. ಕಾವ್ಯ, ಕಥೆ, ರಚನಾ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದರು. ಲಂಕೇಶರ ಮೆಚ್ಚಿನ ಕತೆಗಾರರಾಗಿದ್ದು ೨೦೦೨ರಲ್ಲಿ ಅಕಾಲ ಮರಣ ಹೊಂದಿದರು. 'ಪರುಷ ಮಣಿ' (ಮರಣೋತ್ತರ ಸಾಹಿತ್ಯ ಸಂಗ್ರಹ, ೨೦೦೫)

೪೪. **ರಾಮಪ್ಪ ಮಾದಾರ:** (೧೯೮೪) ಎಂ.ಎಡ್. ವಿದ್ಯಾರ್ಥಿ. ಕೆರಹೊತ್ತ ಬಸವ (೨೦೦೫ ಕವಿತಾ ಸಂಕಲನ)

೪೫. **ರಾಮಲಿಂಗಪ್ಪ ಟಿ. ಬೇಗೂರು:** (೧೯೬೭)ಎಂ.ಎ., ಕನ್ನಡ. ಉಪನ್ಯಾಸಕ, ಮಾಯಾ ಪಾತಾಳ(೨೦೦೦), ಸಂಕರ ಬಂಡಿ(೨೦೦೭) ಕವಿತೆಗಳು, ಎಡ್ವರ್ಡ್ ಸೈಡ್ (ಅನುವಾದ ೨೦೦೩). ಮಾರ್ಗಾಂತರ (ವಿಮರ್ಶೆ ೨೦೦೪). ಸಂಪರ್ಕ: ೯೪೪೯೨೧೧೫೬

೪೬. **ರಾಮಸ್ವಾಮಿ ಟಿ.ಎಸ್:** ಎಂ.ಎ. ಕನ್ನಡ, ಇಂಗ್ಲಿಷ್. ಆಂದೋಲನ ಪತ್ರಿಕೆ ಉಪ ಸಂಪಾದಕ. ಹಾಡುಪಾಡು ಪುರವಣಿ ವಿಭಾಗದ ಮುಖ್ಯಸ್ಥ. ಲುಷುನ್ ಕವಿತೆಗಳು ಅನುವಾದಿಸಿದ್ದಾರೆ. ಅಗ್ನಿಸೂಕ್ತ(೧೯೯೨, ಕವಿತೆಗಳು). ಪ್ರಗತಿಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸಂಪರ್ಕ: ೦೮೨೧-೪೨೪೪೫೫೫/೪೨

೪೭. **ರಾಮಸ್ವಾಮಿ ಡಿ.ಎಸ್.:** (೧೯೬೫) ಎಂ.ಎ., ಜೀವ ವಿಮಾ ನಿಗಮದ ಹಿರಿಯ ಸಹಾಯಕ. ಮರೆತ ಮಾತು (೨೦೦೨), ಉಳಿದ ಪ್ರತಿಮೆಗಳು (೨೦೦೭). ಸಂಪರ್ಕ: ೯೮೪೪೫೫೬೮೨೦. ಸಂಚಯ ಸಾಹಿತ್ಯ ಸ್ಪರ್ಧೆ, ಶಿವಮೊಗ್ಗ ಕನ್ನಡ ಸಂಘ ಪ್ರಶಸ್ತಿ ಮುದ್ದಣ ಕಾವ್ಯ ಪ್ರಶಸ್ತಿ.

೪೮. **ರೂಪಶ್ರೀ ಎಸ್.ಆರ್.:** (೧೯೮೦) ಎಂ.ಎ., ಅರ್ಥಶಾಸ್ತ್ರ, ಉಪನ್ಯಾಸಕಿ. 'ಜ್ಞಾನಜ್ಯೋತಿ' (ಆಧ್ಯಾತ್ಮ ಲೇಖನಗಳು ೨೦೦೩), ಮೌನಕಾಲ (ಪ್ರಕಟಣೆಯಲ್ಲಿದೆ). ಸಂಪರ್ಕ: ೯೮೪೫೩೫೦೭೯೪.

೪೯. **ರೂಪ ಹಾಸನ:** (೧೯೬೭) ಬಿ.ಕಾಂ. ಒಂದಿಷ್ಟು ಹಸಿ ಮಣ್ಣು (೨೦೦೦), ಬಾಗಿಲಾಚೆಯ ಮೌನ (೨೦೦೫), ಲಹರಿ ಪತ್ರಿಕೆಯಲ್ಲಿ ಅಂಕಣ ಬರಹ. ಅನೇಕ ಪ್ರಶಸ್ತಿಗಳು ಲಭಿಸಿವೆ. ಸಂಪರ್ಕ: ೯೪೮೦೨೨೭೫೭೬.

೫೦. **ರೋಸಿ ಡಿಸೋಜ:** (೧೯೭೫) ಎಂ.ಎ., ಇಂಗ್ಲಿಷ್, ಕ್ರೈಸ್ಟ್ ಕಾಲೇಜಿನ ಸ್ಪರ್ಧೆಗಳಲ್ಲಿ ಬಹುಮಾನ ವಿಜೇತರು. ಪ್ರಾಥಮಿಕ ಶಿಕ್ಷಣ ಕೇಂದ್ರದಲ್ಲಿ ವೃತ್ತಿ. ಮಣ್ಣ ಬಿಸುಪು (೨೦೦೮, ಕವನ ಸಂಕಲನ). ಸಂಪರ್ಕ: ೯೯೦೧೯೯೫೯೧೬

೫೧. **ಲಲಿತಾ ಸಿದ್ಧಬಸವಯ್ಯ:** (೧೯೫೫) ಬಿ.ಎಸ್ಸಿ., ಮೊದಲ ಸಿರಿ (೨೦೦೧), ಇಹದ ಸ್ವರ (೨೦೦೨), ಬಿಡಿ ಹರಳು (೨೦೦೨), ಕಬ್ಬೆ ನೆಲ (೨೦೦೪), ಛತ್ರಿಪತಿ (೨೦೦೧, ನಗೆಬರಹ) ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಸಂಪರ್ಕ : ೯೮೮೬೯೬೧೧೨೧.

೫೨. **ಲಾವಣ್ಯ ಪ್ರಭಾ:** (೧೯೭೧) ಎಂ.ಎ. ಕನ್ನಡ, ಗೃಹಿಣಿ, ಹುಟ್ಟಲಿರುವ ನಾಳೆಗಾಗಿ (ಕಾವ್ಯ, ೨೦೦೪) ಮಕ್ಕಳ ಮನೋವಿಜ್ಞಾನದ ಬಗ್ಗೆ ವಿಜಯ ಕರ್ನಾಟಕದಲ್ಲಿ ಲೇಖನಗಳನ್ನು ಬರೆದಿದ್ದಾರೆ. ಸಂಪರ್ಕ: ೦೮೨೧-೬೪೫೩೨೫೯.

೫೩. **ವನಮಾಲಾ ಕಟ್ಟೀಗೌಡರ:** (೧೯೬೪) ಎಂ.ಎ. ಕನ್ನಡ ಸಾಹಿತ್ಯ. ನಮ್ಮೊಳಗಿನ ನಾನು (ಕಥಾ ಸಂಕಲನ, ೨೦೦೩). ಸಂಕ್ರಮಣ, ಮಹಿಳಾ ಅಧ್ಯಯನ, ಮಯೂರ, ಮಲ್ಲಿಗೆ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಕತೆ, ಕವಿತೆ ಮತ್ತು ವಿಮರ್ಶಾ ಲೇಖನಗಳು ಪ್ರಕಟಗೊಂಡಿವೆ. ೦೮೫೯೪-೨೩೧೮೪೨.

೫೪. **ವಸಂತ ಬನ್ನಾಡಿ :** (೧೯೬೫) ಎಂ.ಕಾಂ. ಅಧ್ಯಾಪಕ. ಕಡಲ ಧ್ಯಾನ (೨೦೦೨), ನೀಲಿ ಹೂ (೨೦೦೩), ನಿಜದ ನೆಲೆ (೨೦೦೪), ಎಲ್ಲರೂ ನನ್ನ ಮಕ್ಕಳೆ (ನಾಟಕ ಅನುವಾದ), ಚೆರಿತೋಟ (ಅನುವಾದ), ಜನಶತ್ರು (ಹೇನ್ರಿಕ್ ಹಿಟ್ಬನ್ ಅನುವಾದ), ಸಂಸ್ಕೃತಿ ಚಿಂತನ (೧೯೯೫), ೪೦ ನಾಟಕ ನಿರ್ದೇಶನ. ಸಂಪರ್ಕ: ೯೪೪೯೧೦೫೦೫೨.

೫೫. **ವಾಸುದೇವ ನಾಡಿಗ್:** (೧೯೭೦) ಅಧ್ಯಾಪಕ, ವೃಷಭಾಚಲದ ಕವಿತೆ (೧೯೯೩), ಹೊಸ್ತಿಲು (೨೦೦೩), ಭವದ ಹಕ್ಕಿ (೨೦೦೮). ಮುದ್ದಣ್ಣ ಕಾವ್ಯ ಪ್ರಶಸ್ತಿ ಕ್ರೈಸ್ಟ್ ಕಾಲೇಜು, ಸಂಚಯ ಸ್ಪರ್ಧೆ ಬಹುಮಾನಗಳು. ಸಂಪರ್ಕ: ೩೪೪೪೮೭೩೬೫೫೮.

೫೬. **ವಿಕ್ರಮ ವಿಸಾಜಿ:** (೧೯೭೬) ಎಂ.ಎ., ಪಿಎಚ್.ಡಿ., ಅಧ್ಯಾಪಕ. ತಮಾಷಾ (೨೦೦೦), ಗೂಡು ಕಟ್ಟುವ ಚಿತ್ರ (೨೦೦೬), ಕಂಬಾರರ ನಾಟಕಗಳು (೨೦೦೩), ಇಥಾಕ (೨೦೦೫), ಗ್ರೀಕ್ ಕವಿತೆಗಳ ಅನುವಾದ. ಸಂಪರ್ಕ: ೯೯೪೫೦೨೧೧೨೬.

೫೭. **ವಿನಯಾ:** (೧೯೬೮) ಎಂ.ಎ., ಎಂ.ಫಿಲ್., ಪಿಎಚ್.ಡಿ. ಬಾಯಾರಿಕೆ (೨೦೦೨), ಮೂರು ಗೋರಿಯ ದೀಪ (೨೦೦೬), ಪ್ರಜಾವಾಣಿ ಕಥಾ ಸ್ಪರ್ಧೆಯಲ್ಲಿ ಬಹುಮಾನ. ಸಂಪರ್ಕ: ೯೮೮೬೦೨೩೪೩೯.

೫೮. **ವಿಭಾ:** (೧೯೭೧-೨೦೦೪) ಎಂ.ಎ., ಇಂಗ್ಲಿಷ್. ಜೀವ ಮಿಡಿತದ ಸದ್ದು (೨೦೦೬) ಮರಣೋತ್ತರ ಸಂಕಲನ. 'ಮಲ್ಲಿಗೆ' ಅಂಕಣಗಾರ್ತಿ, ಕವಿತೆಗಳ ಅನುವಾದ. ಕ್ರೈಸ್ಟ್ ಕಾಲೇಜು ಕವನ ಸ್ಪರ್ಧೆ, ಲೇಖನ ಸ್ಪರ್ಧೆ ಬಹುಮಾನ, ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನ. ೨೦೦೪ರಲ್ಲಿ ಅಕಾಲ ಮರಣ.

೫೯. **ವೆಂಕಟೇಶ್ ಎಂ. ರಾವ್:** (೧೯೭೩) ಎಂಬಿಬಿಎಸ್. ಕನ್ನಡಪ್ರಭ ಉಪಸಂಪಾದಕ. ಕಾಡು ಬೆಳದಿಂಗಳು ಚಲನಚಿತ್ರದಲ್ಲಿ ಸಹ ನಿರ್ದೇಶಕ. ಬಿಡಿ ಬರಹಗಳು ಪ್ರಕಟಗೊಂಡಿವೆ. ಸಂಪರ್ಕ: ೯೯೦೦೩೯೯೫೭೯.

೬೦. **ವೇದಾ ಎಂ.ಎಸ್.:** ಎಂ.ಎ., ಪಿಎಚ್.ಡಿ., ವೃತ್ತಿಯಲ್ಲಿ ಅಧ್ಯಾಪಕಿ. ನಾಲ್ಕು ಕವನ ಸಂಕಲನಗಳು – ಕಾವ್ಯಕೂಸು, ಗಂಗೋತ್ರಿಯಲ್ಲಿ, ಬಿಳಿಲುಗಳು, ದಾಖಲಾಗುವುದು ಬೇಡ. ನಾಲ್ಕು ಕಥಾಸಂಕಲನ – 'ಈಕಿ', 'ಪ್ರೀತಿ ಮತ್ತು ಸಾವು', 'ಪಾಲು', 'ಬಿಳಿ ಹೆಣ್ಣು ಮತ್ತು ದುಂಡವ್ವನ ದೆವ್ವ', ಕಾದಂಬರಿ– ಜಮೀನು, ಜಯ.

೬೧. **ಶಶಿ ಸಂಪಳ್ಳಿ:** (೧೯೭೫) ಎಂ.ಎ., ಚರಿತ್ರೆಯ ಜಾಡಿನಾಚೆಗೆ (ಕಾವ್ಯ, ೨೦೦೩), ಪ್ರಜಾವಾಣಿ, ಮಯೂರ, ಭಾವನ, ವಿಜಯ ಕರ್ನಾಟಕದಲ್ಲಿ ಬರಹಗಳು ಪ್ರಕಟಗೊಂಡಿವೆ. ಸಂಪರ್ಕ: ೯೪೪೮೨೩೮೯೦೨.

೬೨. **ಶಿವಕುಮಾರ ಕಾರೇಪುರ:** (೧೯೮೪) ಕನ್ನಡ ಎಂ.ಎ., ಅತಿಥಿ ಅಧ್ಯಾಪಕರಾಗಿ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಸೇವೆ. ಬಿಡಿ ಕವಿತೆಗಳು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಸಂಪರ್ಕ: ೯೯೦೧೩೦೮೩೫೪.

೬೩. **ಸರಸ್ವತಿ ದು.:** (೧೯೬೩) ವಿದ್ಯಾಭ್ಯಾಸ ಬೆಂಗಳೂರಿನಲ್ಲಿ, ರಂಗಭೂಮಿ, ಚಿತ್ರಕಲಾ, ಮಹಿಳಾ ಮತ್ತು ದಲಿತ ಚಳುವಳಿ ಮುಂತಾದ ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರು. 'ಹೆಣೆದರೆ ಜೇಡನಂತೆ' ಮೊದಲ ಸಂಕಲನ. 'ಈಗೇನು ಮಾಡೀರಿ' ಅನುಭವ ಕಥನ. 'ಜೀವಸಂಪಿಗೆ' ಮೂರನೆಯ ಕೃತಿ. ಸಂಪರ್ಕ : ೦೮೦-೨೩೪೯೦೨೫೬.

೬೪. **ಸುದೇಶ್ ಮಹಾನ್:** (೧೯೬೩) ಚಿತ್ರಕತೆ ಮತ್ತು ಶಿಲ್ಪದಲ್ಲಿ ಆಸಕ್ತಿ. ಇದು ತಂದೆಯಿಂದ ಬಂದ ಬಳುವಳಿ. ಸಕ್ರಿಯ ರಂಗಕರ್ಮಿ, ಟಿ.ವಿ. ನಾಟಕಗಳ ರಂಗ ನಿರ್ಮಾತೃ. 'ಅಬ್ದುಲನ ಕೈಲಾಸ' (೨೦೦೫) ಮೊದಲ ಕವನ ಸಂಕಲನ. ಸಂಪರ್ಕ: ೯೮೪೫೦೭೩೧೩೭

೬೫. **ಸುಧೀಂದ್ರ, ಕುಮಾರ್ ಆರ್.:** (೧೯೮೩) ಎಂ.ಎ. ಕನ್ನಡ. ಡಿಪ್ಲೋಮಾ ಭಾಷಾಂತರದ ವಿದ್ಯಾರ್ಥಿ. ಸಂಕ್ರಮಣ, ಸಂಚಯ ಮತ್ತು ಕ್ರೈಸ್ಟ್ ಕಾಲೇಜಿನ ಸ್ಪರ್ಧೆಗಳಲ್ಲಿ ಬಹುಮಾನ. ಪತ್ರಿಕೆಗಳಲ್ಲಿ ಲೇಖನ ಮತ್ತು ಕವಿತೆಗಳು ಪ್ರಕಟಗೊಂಡಿವೆ. ಸಂಪರ್ಕ: ೯೯೦೧೫೫೩೫೬೧೧.

೬೬. ಸುಬ್ಬುಹೊಲೆಯಾರ್: (೧೯೬೨) ಡಿಪ್ಲೋಮಾ ಇನ್ ಡ್ರಾಮಾ. ದೂರದರ್ಶನದಲ್ಲಿ 'ಕರ್ತವ್ಯ ಅಧಿಕಾರಿ'. ದಲಿತ ಸಂಘರ್ಷ ಸಮಿತಿ ಕಾರ್ಯಕರ್ತ. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹುಡು (೨೦೦೩) ಕವನ ಸಂಕಲನ.

೬೭. ಸುರೇಶ ಕೆ.ಪಿ.: (೧೯೫೯) ಎಂ.ಎ., ಇಂಗ್ಲಿಷ್, ವೃತ್ತಿಯಲ್ಲಿ ಕೃಷಿಕ, ದಡಬಿಟ್ಟ ದೋಣಿ (೨೦೦೪), 'ಬೆಂಕಿಯ ನೆನಪು' ಅನುವಾದ : ಎಡ್‌ವರ್ಡೊ ಗೆಲಿಲಿಯಾನೋ(ಅನುವಾದ ಅಕಾಡೆಮಿ ಪ್ರಶಸ್ತಿ).

೬೮. ಸುನಂದಾ ಪ್ರಕಾಶ ಕಡಮೆ: (೧೯೬೭) ಎಂ.ಎ., ಕನ್ನಡ. ಪುಟ್ಟಪಾದದ ಗುರುತು (೨೦೦೫) ಕಥಾ ಸಂಕಲನ, ಉದಯವಾಣಿಯಲ್ಲಿ ಅಂಕಣ – ಪಿಸುಗುಟ್ಟುವ ಬೆಟ್ಟಸಾಲು, ಗಾಂಧಿ ಚಿತ್ರದ ನೋಟು. ಸಂಪರ್ಕ: ೯೮೪೫೭೭೯೩೮೭.

೬೯. ಸಂತೋಷ ಚೊಕ್ಕಾಡಿ: (೧೯೬೭) ಎಂ.ಎ., ಪಿ.ಹೆಚ್‌ಡಿ. ಪ್ರಾತಃಕಾಲದ ಪದ್ಯಗಳು (೧೯೯೫) ನಿಜದ ಹಾದಿಯ ಬೆಳಕು (೨೦೦೨) ಕವಿತೆಗಳು. 'ದ.ಕ. ಕಾವ್ಯದ ವಿಭಿನ್ನ ನೆಲೆಗಳು' ಮಹಾಪ್ರಬಂಧ. ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಧ್ಯಾಪಕ. ಸಂಪರ್ಕ: ೯೪೪೮೭೮೫೮೬೭.

೭೦. ಸಂತೇಬೆನ್ನೂರು ಫೈಜ್ನಟ್ರಾಜ್: (೧೯೭೭) ಎಂ.ಎ. ಪ್ರಾಧ್ಯಾಪಕರಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವೃತ್ತಿ. ಸುಧಾ, ತರಂಗ, ಮಯೂರ, ಪ್ರಮುಖ ದಿನಪತ್ರಿಕೆಗಳಲ್ಲಿ ಲೇಖನ, ಕವಿತೆಗಳು ಪ್ರಕಟಗೊಂಡಿವೆ. ಸಂಪರ್ಕ: ೯೯೦೨೯೩೫೯೯೯

೭೧. ಸಂದೀಪ್ ನಾಯಕ್: (೧೯೭೩) ಬಿ.ಎಡ್. ಪತ್ರಕರ್ತ. ವಿಜಯಕರ್ನಾಟಕ, ಪ್ರಜಾವಾಣಿ, ಕನ್ನಡಪ್ರಭ, ಕಥಾಸ್ಪರ್ಧೆ ಮತ್ತು ಕವಿತಾ ಸ್ಪರ್ಧೆಯಲ್ಲಿ ಬಹುಮಾನ. ಅಗಣಿತ ಚಹರೆ (೨೦೦೬ ಕವನ ಸಂಕಲನ). ಸಂಪರ್ಕ: ೯೮೮೬೮೮೬೪೮೯.

೭೨ . ಸಂಧ್ಯಾದೇವಿ: (೧೯೬೩) ಮಾತು-ಚಿಟ್ಟೆ ಬೆಂಕಿ-ಬೆರಳು ಮುರಿದ ಮುಳ್ಳಿನಂತೆ ಜ್ಞಾನ (೨೦೦೫) ಕವನ ಸಂಕಲನ. ಅನೇಕ ಕವಿತೆಗಳು ಪ್ರಕಟಗೊಂಡಿವೆ. ಸಂಪರ್ಕ : ೦೮೨೫೧-೨೩೩೩೮೩.

೭೩. ಸಂಧ್ಯಾ ಹೊನಗುಂಟಿಕರ್: (೧೯೬೪) ಎಂ.ಎ., ಕಡಲ ಒಡಲು ಬಗೆದಷ್ಟು (೨೦೦೨), ಪ್ರಜಾವಾಣಿ ಕಥಾ ಸ್ಪರ್ಧೆ, ಸಂಚಯ ಕಥಾ ಸ್ಪರ್ಧೆ(೨೦೦೨), ಅವ್ವ ಸಂಪಾದಿತ ಕೃತಿ, ಬಿಡಿ ಲೇಖನಗಳು, ಕವಿತೆಗಳು ಪ್ರಕಟ. ಸಂಪರ್ಕ: ೯೯೧೬೨೪೮೮೮೩.


೭೪. ಹನುಮಂತಯ್ಯ ಎನ್.ಕೆ.: (೧೯೭೪) ಎಂ.ಎ. ಕನ್ನಡ. ಪಿಹೆಚ್.ಡಿ. ಅಧ್ಯಯನ, ಅಧ್ಯಾಪಕ. ಹಿಮದ ಹೆಜ್ಜೆ (೧೯೯೭), ಚಿತ್ರದ ಬೆನ್ನು (೨೦೦೬), ಎಂ.ವಿ.ವಾಸುದೇವರಾವ್ ಅವರ ವ್ಯಕ್ತಿ ಚಿತ್ರ (೨೦೦೦), ಜಲಸ್ತಂಭ (ನಾಟಕ ೨೦೦೨), ಚಂದ್ರಬೀಜ (ಅಪ್ರಕಟಿತ). ೨೦೦೬ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಸಂಪರ್ಕ: ೯೯೪೫೧೫೩೩೬೨.

೭೫. ಹಂಪಣ್ಣ ಎ.ಕೆ.: (೧೯೫೫) ಎಂ.ಎ., ಕನ್ನಡ. ಸರ್ಕಾರಿ ಕಾಲೇಜು ಮೈಸೂರಿನಲ್ಲಿ ಪ್ರಾಂಶುಪಾಲರು. ಧನಿಗಳು (೧೯೯೪), ಆದಿಮ ಕನ್ಯೆ (೨೦೦೪), ಮರೆಯಲಾರದ ಬರಹಗಾರರು ಮಾಲಿಕೆ (೧೯೯೬) ಇವರ ಕೃತಿಗಳು. ಸಂಪರ್ಕ: ೯೯೦೨೬೪೧೦೪೦.

❑



ಮಂಜುನಾಥ ವಿ.ಎಂ.



ಮೃತ್ಯುಂಜಯ ಕೆ.ಪಿ.


ಯಲ್ಲಪ್ಪ ಟಿ.


ರಮೇಶ್‌ಬಾಬು ಚೀಮನಹಳ್ಳಿ


ರವೀಂದ್ರಕುಮಾರ್ ಜಿ.ಕೆ.


ರಮೇಶ್ ಎಚ್.ಆರ್.


ರಾಮಸ್ವಾಮಿ ಡಿ.ಎಸ್.



ರಾಮಲಿಂಗಪ್ಪಟಿ. ಬೇಗೂರು


ರೂಪಾ ಹಾಸನ


ರೂಪಶ್ರೀ ಎನ್.ಆರ್.


ರೋಸಿ ಡಿಸೋಜ


ಲಲಿತಾ ಸಿದ್ದಬಸವಯ್ಯ



ವಸಂತ ಬನ್ನಾಡಿ


ವಿಕ್ರಮ ವಿಸಾಜಿ


ವಿನಯಾ


ಶಶಿ ಸಂಪಳ್ಳಿ



ಸುಬ್ಬು ಹೊಲೆಯಾರ್


ಸಂದೀಪ್ ನಾಯಕ್


ಸಂಧ್ಯಾದೇವಿ


ಹನುಮಂತಯ್ಯ ಎನ್.ಕೆ.


ಹಂಪಣ್ಣ ಎ.ಕೆ.


ಡಿ.ಆರ್. ಚಂದ್ರ ಮಾಗಡಿ


ದೀಪಾ ಸುಧೀರ್‌ಕುಮಾರ್


ರಘುನಾಥ ಚ. ಹ.


ವಾಸುದೇವ ನಾಡಿಗ್

ಕೇಂದ್ರ ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾಂತೀಯ ಕಛೇರಿ, ಸೆಂಟ್ರಲ್ ಕಾಲೇಜ್ ಕ್ಯಾಂಪಸ್,
ಡಾ॥ ಬಿ.ಆರ್. ಅಂಬೇಡ್ಕರ್ ಬೀದಿ, ಬೆಂಗಳೂರು – 560 001, ದೂರವಾಣಿ : 22245152

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು

- **ಆ ದೀರ್ಘ ಮೌನ** (ಇಂಗ್ಲಿಷ್ ಮೂಲ: ಶಶಿ ದೇಶಪಾಂಡೆ; ಅನುವಾದ : ವಿಜಯ ಕಣೇಕಲ್) 120.00
- **ಆರು ಅಡಿ ಭೂಮಿ** (ಉರ್ದು ಮೂಲ: ಅಬ್ದುಸ್ಸಮದ್, ಅನುವಾದ : ಪಂಚಾಕ್ಷರಿ ಹಿರೇಮಠ) 100.00
- **ಅರ್ಧನಾರೀಶ್ವರ** (ಹಿಂದಿ ಮೂಲ: ವಿಷ್ಣು ಪ್ರಭಾಕರ್,ಅನು: ಎಸ್.ಎಂ.ರಾಮಚಂದ್ರಸ್ವಾಮಿ) 250.00
- **ನೀಲಿಚಂದಿರ** (ಹಿಂದಿ ಮೂಲ: ಶಿವಪ್ರಸಾದ ಸಿಂಹ, ಅನುವಾದ : ಪಿ.ಶಶಿಕಲಾ) 350.00
- **ಚಿಟ್ಟಾಲಹು** (ಪಂಜಾಬಿ ಮೂಲ: ನಾನಕ್‌ಸಿಂಗ್ ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
- **ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು** (ಹಿಂದಿ ಮೂಲ: ವಿನೋದ ಕುಮಾರ್ ಶುಕ್ಲ ಅನು : ತೇಜಸ್ವಿ ಕಟ್ಟೀಮನಿ) 100.00

ಕಥಾ ಸಂಕಲನ

- **ಸ್ವರ್ಣಕಮಲಗಳು** (ತೆಲುಗು ಮೂಲ: ಇಲ್ಲಿಂದಲ ಸರಸ್ವತಿ ದೇವಿ, ಅನು: ಪಿ. ವೇಣುಗೋಪಾಲ್) 300.00
- **ಸಿ.ವಿ.ರಾಮನ್ ಕತೆಗಳು** (ಮಲಯಾಳಂ; ಅನು: ಅಶೋಕ್‌ಕುಮಾರ್) 300.00
- **ದೇವರಮನೆ ಇತರ ಕತೆಗಳು** (ಒರಿಯಾ; ಅನು: ಸೀತಾರಾಮಯ್ಯ ಸೋಮನಾಥ) 125.00
- **ತಂದೆಯ ಸ್ನೇಹಿತ** (ತಮಿಳು: ಅಶೋಕ ಮಿತ್ರನ್, ಅನು: ಶೇಷನಾರಾಯಣ) 100.00
- **ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕತೆಗಳು** (ಸಂ: ಶಿವ್.ಕೆ.ಕುಮಾರ್; ಅನು: ಮಹಾಬಲೇಶ್ವರ ಕಾಟ್ರಹಳ್ಳಿ 150.00
- **ಉಲ್ಲಂಘನ** (ಒರಿಯಾ : ಪ್ರತಿಭಾರಾಯ್, ಅನು: ಸ್ನೇಹಲತಾ ರೋಹಿಡೇಕರ್) 160.00
- **ಶಾಂಬ** (ಬಂಗಾಳಿ : ಸಮರೇಶ ಬಸು; ಅನು: ಜಿ. ಕುಮರಪ್ಪ) 100.00
- **ಹಗ್ಗ** (ತಕಳಿ ಶಿವಶಂಕರ ಪಿಳ್ಳೈರವರ ಮಲಯಾಳಿ ಕೃತಿ – ೩ ಭಾಗಗಳು, ಅನು: ಕೆ.ಕೆ.ನಾಯರ್ ಮತ್ತು ಅಶೋಕ್‌ಕುಮಾರ್) ಭಾಗ 1 - 325.00; ಭಾಗ 2 - 250.00; ಭಾಗ 3 - 250.00

ಕಾವ್ಯ

- **ಕನ್ನಡ ಸಾನೆಟ್ ಸಂಗ್ರಹ** (ಸಂ. ಹೆಚ್.ಎಸ್. ವೆಂಕಟೇಶಮೂರ್ತಿ) 85.00
- **ಶಬ್ದಗರ್ಭಿತ ಆಕಾಶ** (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
- **ಸಂಬಂಧ** (ಇಂಗ್ಲಿಷ್ : ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣ ಭಟ್) 50.00
- **ತಮಿಳು ಕತೆಗಳು** (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ.ಎಲ್. ನಾಗಭೂಷಣಸ್ವಾಮಿ) 40.00
- **ಆಧುನಿಕ ಮಹಾಭಾರತ** (ಗುಂಟೂರು ಶೇಷಚಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
- **ಮಲಯಾಳದ ಜಾನಪದ ಹಾಡುಗಳು** (ಸಂ. ಅಯ್ಯಪ್ಪ ಪಣಿಕ್ಕರ್, ಅನು: ಸಿ. ರಾಘವನ್) 125.00

ಇತರ

- **ಸೌಗಂಧಿಕಾ ಪರಿಣಯ** (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ. : ಹೆಚ್.ಎಸ್. ಶ್ರೀಮತಿ) 600.00
- **ತತ್ವಮಸಿ**(ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್; ಅನು: ವಿ.ಗೋಪಾಲಕೃಷ್ಣ) 200.00
- **ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ** (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
- **ತೆಲುಗು – ಕನ್ನಡ ನಿಘಂಟು** (ಸಂ.: ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
- **ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ** (ಭಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
- **ಪಂಡಿತ ತಾರಾನಾಥರು ಬದುಕು ಮತ್ತು ಬರಹ** : ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)

★ ವ.ರಾ. (ವ.ರಾಮಸ್ವಾಮಿ) ★ ನಿರಂಜನ ★ ಸರ್ವಜ್ಞ ★ ಮಹಾಕವಿ ಶ್ರೀಶ್ರೀ ★ ರಾಚಕೊಂಡ ವಿಶ್ವನಾಥಶಾಸ್ತ್ರಿ ★ ಜಿ.ಪಿ. ರಾಜರತ್ನಂ ★ ತೀ.ನಂ.ಶ್ರೀಕಂಠಯ್ಯ ★ ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ ★ ಅ.ನ.ಕೃಷ್ಣರಾಯ (40.00) ★ ಬಸವರಾಜ ಕಟ್ಟೀಮನಿ (40.00) ★ ಆಲೂರು ವೆಂಕಟರಾವು (40.00)